
ಬೋಧನೆ ಪ್ರಚೋದನೆ

ಲಂಕೇಶ್


02 ಏಪ್ರಿಲ್, 2014 ಪುಟ 20 ರೂ. 15/-




ಖುಷ್ವಂತ್ ಇನ್ನಿಲ್ಲ




ಅಣ್ಣಾವ್ರ ಮನೆಯ ...ಮಾನ ಸೊಸೆ ಕೈಗೆ



ಮಂಡ್ಯ ...ಂಬಿ ರಾಂಗು ...ಮ್ಯಾ ರಂಗು



ಕರಾವಳಿ ಸಂಕಟದಲ್ಲಿ ಸಂಘ ಪರಿವಾರ




ಮೈಸೂರು-ಕೊಡಗು

ಬಿಜೆಪಿಗೆ ಸಿಂಹ ವಿಶ್ವನಾಥ್ ನಿರಾಳ

...ಗೂಢವಾಗಿ ನಾಪತ್ತೆಯಾದ ...ಲೇಷಿಯಾ ವಿಮಾನ



ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಶಿಕ್ಷಣದ ವ್ಯಾಪಾರೀಕರಣಕ್ಕೆ ಸಿದ್ದು ಕಡಿವಾಣ ಹಾಕುವುದಿಲ್ಲವೇ?

ಪ್ರಾಮಾಣಿಕವಾಗಿ ಕೆಲಸ ಮಾಡಿ, ಸರ್ಕಾರದ ಪರವಾಗಿ, ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡ ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ವಿ.ರಶ್ಮಿ ಅವರು ರಜೆಯ ಮೇಲೆ ಹೋಗುವಂತೆ ಒತ್ತಡ ತಂದಿರುವ ವಿಚಾರ ಈಗಾಗಲೇ ಸಾಕಷ್ಟು ಸುದ್ದಿಯಾಗಿದೆ. ಈ ರಜೆಯು ರಶ್ಮಿಯವರೇ ಬಯಸಿ ತೆಗೆದುಕೊಂಡಿರುವ ರಜೆಯಾಗಿದೆ ಎಂದು ಮುಖ್ಯ ಕಾರ್ಯದರ್ಶಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಹೇಳಿರುವುದು ಶೇ.100ರಷ್ಟು ಸುಳ್ಳಾಗಿದೆ. ಇದರ ಹಿಂದೆ ಭಾರೀ ಷಡ್ಯಂತ್ರ ಕೆಲಸ ಮಾಡಿರುವುದಕ್ಕೆ ಅನೇಕ ಕಾರಣಗಳಿವೆ.

ವೈದ್ಯಕೀಯ ಶಿಕ್ಷಣವು ಪ್ರತ್ಯೇಕ ಇಲಾಖೆಯಾಗಿದ್ದು ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ. ಆಗ ಇಂತಿಷ್ಟೇ ಮಂತ್ರಿಗಳಿರಬೇಕೆಂಬ ನಿಯಮಗಳಿರದಿದ್ದುದರಿಂದ, ಬಂಗಾರಪ್ಪನವರು ಸಿಕ್ಕಾಪಟ್ಟೆ ಸಂಖ್ಯೆಯ ಮಂತ್ರಿಗಳನ್ನು ತೆಗೆದುಕೊಂಡರು. ಅದರಿಂದ ಇಲಾಖೆಗಳು ಸಾಲದೇ ಬಂದು ಕೆಲವು ಇಲಾಖೆಗಳನ್ನು ವಿಭಜಿಸಬೇಕಾಯಿತು. ಆಗ ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ಪ್ರತ್ಯೇಕಿಸಿ ಗುಲ್ಬರ್ಗಾದ ಜಿ.ರಾಮಕೃಷ್ಣ ಅವರನ್ನು ಮಂತ್ರಿ ಮಾಡಿದ್ದರು. ಅಲ್ಲಿಂದಾಚೆಗೆ ಈ ಇಲಾಖೆಯಲ್ಲಿ ಸಾಧನೆ ಆಗಿದ್ದು ಅಂತಹದ್ದು ಏನಿಲ್ಲವಾದರೂ, ಹಗರಣಗಳಿಗೆ ಕಡಿಮೆಯೇನಿಲ್ಲ. ಒಬ್ಬ ಮಂತ್ರಿ ಇಂತಹ ಹಗರಣಗಳಿಂದಾಗಿಯೇ ರಾಜೀನಾಮೆಯೂ ನೀಡಬೇಕಾಗಿ ಬಂದಿದ್ದು ಈ ಇಲಾಖೆಯ ಸಾಧನೆಯಾಗಿದೆ.

ಕರ್ನಾಟಕವು ಇಡೀ ದೇಶದಲ್ಲಿ ಉನ್ನತ ಶಿಕ್ಷಣವನ್ನು ಸರಕನ್ನಾಗಿಸಿ, ವೃತ್ತಿಪರ ಶಿಕ್ಷಣದ ದಂಧೆಯನ್ನು ದೊಡ್ಡ ಪ್ರಮಾಣದಲ್ಲಿ ಉದ್ಘಾಟಿಸಿದ ಕೀರ್ತಿ ಹೊಂದಿದೆ. ಅಂತಹ ಕಾಲೇಜುಗಳನ್ನು ತೆರೆದವರಲ್ಲಿ ಹೆಚ್ಚಿನವರು ರಾಜಕಾರಣಿಗಳಿದ್ದಾರೆ. ಅವರನ್ನು ಎದುರು ಹಾಕಿಕೊಂಡು ಸರ್ಕಾರ ನಡೆಸಬೇಕಾದರೆ, ಅಧಿಕಾರ ಹೋದರೂ ಪರವಾಗಿಲ್ಲ ಎನ್ನುವ ಛಾತಿ ಹೊಂದಿರಬೇಕಾಗುತ್ತದೆ. ಸಿದ್ದರಾಮಯ್ಯನವರೂ ಸೇರಿದಂತೆ ಯಾರೂ ಆ ಛಾತಿಯನ್ನು ತೋರಿಸುತ್ತಿಲ್ಲ ಎನ್ನುವುದು ದುರಂತದ ಸಂಗತಿ.

ಅಂತಹ ಛಾತಿಯನ್ನು ಈ ಇಲಾಖೆಗೆ ಸೇರಿದ ಗಟ್ಟಿ ಅಧಿಕಾರಿಣಿ ರಶ್ಮಿ ತೋರಿದ್ದರು. ಆದರೆ ಅದೇ ಕಾರಣಕ್ಕೆ ಅವರ ಮೇಲೆ ಇನ್ನಿಲ್ಲದ ಒತ್ತಡ ತಂದು ರಶ್ಮಿಯವರನ್ನು ಕಡ್ಡಾಯ ರಜೆಯ ಮೇಲೆ ಕಳಿಸಲಾಗಿದೆ. ಈ ರೀತಿ ಒತ್ತಡ ತಂದಿರುವವರಲ್ಲಿ ಪ್ರಧಾನವಾಗಿ ಎರಡು ಕಾಲೇಜುಗಳ ಮಾಲೀಕ, ತೋಟಗಾರಿಕಾ ಸಚಿವ ಶಾಮನೂರು ಶಿವಶಂಕರಪ್ಪ ಮತ್ತು ಒಂದು ಕಾಲೇಜನ್ನು ಹೊಂದಿದ್ದು, ಇನ್ನೊಂದು ಕಾಲೇಜನ್ನು ತೆರೆಯಲು ಹವಣಿಸುತ್ತಿರುವ ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್ ಇದ್ದಾರೆ.

ತಕ್ಷಣದ ಇನ್ನೊಂದು ಕಾರಣವೆಂದರೆ, ಫೆ.12ರಂದು 'ಅಲ್ಪಸಂಖ್ಯಾತ' ಶಿಕ್ಷಣ ಸಂಸ್ಥೆಗಳಿಗೆ ಇಲಾಖೆಯ ಕಡೆಯಿಂದ ನೋಟಿಸ್ ಕಳಿಸಿರುವುದು. ಅಲ್ಪಸಂಖ್ಯಾತ ಎಂದ ತಕ್ಷಣ ನಮ್ಮ ಕಣ್ಣ ಮುಂದೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರು ಬರುತ್ತಾರಾದರೂ, ಇಲ್ಲಿ ಹಗರಣದಲ್ಲಿ ಪ್ರಧಾನವಾಗಿ ಭಾಗಿಯಾಗಿರುವುದು ತೆಲುಗು, ತಮಿಳು, ತುಳು, ಅರೆ ಭಾಷೆ ಕೊಡವ (ಇದನ್ನು ಅಧಿಕೃತವಾಗಿ ಅಲ್ಪಸಂಖ್ಯಾತರು ಎಂದು ಪರಿಗಣಿಸದೇ ಇದ್ದರೂ) ಇತ್ಯಾದಿ ಭಾಷಾ ಅಲ್ಪಸಂಖ್ಯಾತ ಕಾಲೇಜುಗಳವರು. ಸಪ್ತಗಿರಿ ಮೆಡಿಕಲ್ ಕಾಲೇಜೆಂಬ ಅರೆಭಾಷೆ ಕೊಡವ ಕಾಲೇಜು ವಾಸ್ತವದಲ್ಲಿ ದಯಾನಂದ ಎಂಬ ಒಬ್ಬ ಒಕ್ಕಲಿಗ ಸಮುದಾಯಕ್ಕೆ ಸೇರಿದವರದ್ದು, ಆದರೆ ಅಲ್ಪಸಂಖ್ಯಾತ ಪಟ್ಟ ಪಡೆಯಲು ಅವರು ಅರೆಭಾಷೆ ಕೊಡವ ಒಕ್ಕಲಿಗರನ್ನು ನಿರ್ದೇಶಕ ಮಂಡಳಿಯಲ್ಲಿ ಸೇರಿಸಿಕೊಂಡಿದ್ದಾರೆ. ಈ ಕಾಲೇಜುಗಳವರು, ಕಡ್ಡಾಯವಾಗಿ ಕರ್ನಾಟಕದಲ್ಲಿರುವ ಅಲ್ಪಸಂಖ್ಯಾತರಿಗೇ ಸೀಟುಗಳನ್ನು ಕೊಡಬೇಕಾದ್ದನ್ನು ತಪ್ಪಿಸಿ, 30ರಿಂದ 60 ಲಕ್ಷಗಳಿಗೆ ಸೀಟುಗಳನ್ನು ಮಾರಿಕೊಳ್ಳುತ್ತಾರೆ.

ಆದರೆ ಇದೊಂದೇ ಕಾರಣಕ್ಕೆ ರಶ್ಮಿಯವರ ಮೇಲೆ ಒತ್ತಡ ಬಂದಿದ್ದಲ್ಲ, ಅದರ ಜೊತೆಗೆ ಅವರು ಇನ್ನೂ ಹಲವು ಪ್ರಮುಖ ತೀರ್ಮಾನಗಳಿಗೆ ಕಾರಣವಾಗಿದ್ದರು. ಅವುಗಳಲ್ಲಿ ಕೆಲವನ್ನು ಪಟ್ಟಿ ಮಾಡಬಹುದಾದರೆ,

1. ಎಲ್ಲಾ ಖಾಸಗಿ ಕಾಲೇಜು ಆಡಳಿತ ಮಂಡಳಿಗಳು ಸೀಟು ನೀಡಿಕೆಯಲ್ಲಿ ಮೀಸಲಾತಿ ರೋಸ್ಟರ್‌ಅನ್ನು ಪಾಲನೆ ಮಾಡಬೇಕು ಮತ್ತು ಹೈ.ಕ. ವಿಶೇಷ ಸ್ಥಾನಮಾನ (371 ಜೆ)ದ ನಿಯಮಗಳ ಪ್ರಕಾರ ಆ ಭಾಗದವರಿಗೆ ನೀಡಬೇಕಾದ ಸೀಟುಗಳನ್ನು ನೀಡಬೇಕು.

2. ಸರ್ಕಾರದ ಸಮಿತಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಶುಲ್ಕ ಸಂಗ್ರಹಿಸಬಾರದು.

3. ಅಲ್ಪಸಂಖ್ಯಾತ ಕಾಲೇಜುಗಳು ಅಲ್ಪಸಂಖ್ಯಾತರಿಗೆ ಸೀಟು ನೀಡದೇ ಇದ್ದಾಗ, ಆ ಸೀಟುಗಳನ್ನು ಆಡಳಿತ ಮಂಡಳಿ ಮಾರಿಕೊಳ್ಳುವ ಸೀಟುಗಳನ್ನಾಗಿ ಪರಿವರ್ತಿಸಲು ಅವಕಾಶವಿಲ್ಲ, ಅವನ್ನು ಸರ್ಕಾರದ ವಶಕ್ಕೆ ಕೊಡಬೇಕು.


4. ಸ್ನಾತಕೋತ್ತರ ಸೀಟುಗಳಲ್ಲಿ ಪ್ರತೀ ವಿಭಾಗದಲ್ಲೂ ಸರ್ಕಾರಕ್ಕೆ ನೀಡಬೇಕಾದ ಸೀಟುಗಳಿರಬೇಕೇ ಹೊರತು, ಬೇಡಿಕೆಯಿಲ್ಲದ ವಿಭಾಗಗಳ ಸೀಟುಗಳನ್ನು ಹೆಚ್ಚು ನೀಡಿ ಕೈ ತೊಳೆದುಕೊಳ್ಳುವುದಲ್ಲ.

5. ಈಗ ಮಾಡಿಕೊಂಡಿರುವ ಪರಸ್ಪರ ಒಪ್ಪಿಗೆಯ ಒಪ್ಪಂದ (consensual aggreement)ವು ಆಡಳಿತ ಮಂಡಳಿಯ ಪರವಾಗಿದ್ದು, ನಿಯಮಬದ್ಧವಾಗಿ ರೂಪಿಸಿರುವ ಹೊಸ ಒಪ್ಪಂದಕ್ಕೆ ಆಡಳಿತ ಮಂಡಳಿಗಳು ಸಹಿ ಹಾಕಬೇಕು. (ಇದಕ್ಕೆ ಆಡಳಿತ ಮಂಡಳಿಗಳು ನಿರಾಕರಿಸಿವೆ).

6. ಸರ್ಕಾರೀ ಮೆಡಿಕಲ್ ಕಾಲೇಜುಗಳಲ್ಲಿ (ಹಿಂದಿನ ಕಾರ್ಯದರ್ಶಿಗಳು ಮತ್ತು ಮಂತ್ರಿಗಳಿಗೆ ಕೋಟಿಗಟ್ಟಲೆ ಹಣ ನೀಡಿ ನಿರ್ದೇಶಕರಾದವರು) ನಡೆಸುತ್ತಿದ್ದ ಖರೀದಿ ಅವ್ಯವಹಾರಕ್ಕೆ ಕಡಿವಾಣ ಹಾಕಲು, ಅದರ ಮೇಲೆ ನಿಗಾ ವಹಿಸಿದ್ದರು. ಯಾವುದೇ ಖರೀದಿಯ ವಿಚಾರದಲ್ಲಿ ಅದರ ಅಗತ್ಯವನ್ನು ಮನವರಿಕೆ ಮಾಡಿಕೊಡಲು ವಿಭಾಗ ಮುಖ್ಯಸ್ಥರೂ ತಮ್ಮ ಅಭಿಪ್ರಾಯವನ್ನು ನೇರವಾಗಿ ಮಂಡಿಸಬೇಕು; 3 ಬೇರೆ ಬೇರೆ ಕೊಟೇಷನ್‌ಗಳನ್ನು ನೀಡಬೇಕು ಎಂದು ಸೂಚಿಸಲಾಯಿತು. ಇದರಿಂದ ಸ್ಥಳೀಯ ಮಟ್ಟದಲ್ಲಿ ನಡೆಯುತ್ತಿದ್ದ ಅವ್ಯವಹಾರಗಳಿಗೆ ಕಡಿವಾಣ ಬಿದ್ದಿತು.

7. ಆರೋಗ್ಯ ರಕ್ಷಾ ಸಮಿತಿಯ ಹೆಸರಿನಲ್ಲಿ ಕೋಟ್ಯಾಂತರ ರೂ. ಸ್ಥಳೀಯ ಖರೀದಿ ಮಾಡಿ, ಸರ್ಕಾರೀ ಮೆಡಿಕಲ್ ಕಾಲೇಜ್ ನಿರ್ದೇಶಕರುಗಳು ಅವ್ಯವಹಾರ ನಡೆಸುತ್ತಿದ್ದರು. ಅದರ ಬಗ್ಗೆ ರಶ್ಮಿಯವರು ಕ್ರಮ ಕೈಗೊಂಡಿದ್ದರು.

8. ಸ್ಥಳೀಯವಾಗಿ ಸರ್ಕಾರೀ ಕಾಲೇಜುಗಳಿಗೆ ಔಷಧಿ ಖರೀದಿ ಮಾಡುವಲ್ಲಿಯೂ ಕೋಟ್ಯಾಂತರ ರೂ. ಅವ್ಯವಹಾರ



ನಡೆಯುತ್ತಿತ್ತು. ಅದಕ್ಕೆ ಕಡಿವಾಣ ಹಾಕಿ, ಕೇಂದ್ರೀಯ ಔಷಧಿ ಉಗ್ರಾಣದ ಮೂಲಕ ಖರೀದಿಯನ್ನು ಮಾಡುವಂತೆ ಮಾಡಿದರು.

9. ಸರ್ಕಾರೀ ಮೆಡಿಕಲ್ ಕಾಲೇಜುಗಳ ನಿರ್ದೇಶಕರುಗಳಲ್ಲಿ ಹಲವರು ಸಚಿವರು ಮತ್ತು ಇಲಾಖೆಯ ಕಾರ್ಯದರ್ಶಿಗಳಿಗೆ ಹಣ ನೀಡಿಯೇ ಆ ಸ್ಥಾನಕ್ಕೆ ಬರುತ್ತಾರೆ. ಇದಕ್ಕೆ ಈ ಹಿಂದಿನ ಕಾರ್ಯದರ್ಶಿಗಳೂ ಹೊರತಾಗಿರಲಿಲ್ಲ. ಆ ರೀತಿ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಎಂದು ಕಂಡುಬಂದ ಬೀದರ್ ಮೆಡಿಕಲ್ ಕಾಲೇಜಿನ ಡಾ.ರಾಮಯ್ಯ ಮತ್ತು ಶಿವಮೊಗ್ಗ ಮೆಡಿಕಲ್ ಕಾಲೇಜಿನ ಡಾ.ಗಂಗಾಧರ್ ಮೇಲೆ ಹಿಂದಿನ ಕಾರ್ಯದರ್ಶಿಗಳು ಕ್ರಮಕ್ಕೆ ಮುಂದಾಗಿರಲಿಲ್ಲ, ಆದರೆ ರಶ್ಮಿಯವರು ಅವರ ಮೇಲೆ ಧೈರ್ಯವಾಗಿ ಕ್ರಮ ತೆಗೆದುಕೊಂಡಿದ್ದರು.

10. ಮೆಡಿಕಲ್ ಕಾಲೇಜುಗಳ ಇನ್ನಿತರ ನೇಮಕಾತಿಗಳ ವಿಚಾರದಲ್ಲೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದರ ಪರಿಣಾಮವಾಗಿ ಹಾಸನ ಮೆಡಿಕಲ್ ಕಾಲೇಜಿನ ನೇಮಕಾತಿ ರದ್ದಾಯಿತು.

11. ಮಂಡ್ಯ ಮೆಡಿಕಲ್ ಕಾಲೇಜು ಸೇರಿದಂತೆ ಹಲವೆಡೆ ಹಲವಾರು ಪ್ರೊಫೆಸರ್/ಅಸೋಸಿಯೇಟ್ ಪ್ರೊಫೆಸರ್‌ಗಳು ನಕಲಿ ಬೋಧಕ ಪ್ರಮಾಣ ಪತ್ರವನ್ನು ನೀಡಿ ನೇಮಕಗೊಂಡಿದ್ದರು. ಅದರ ವಿರುದ್ಧ ಕಳೆದ ಎಂಟು ವರ್ಷಗಳಿಂದ ಹೋರಾಟ ನಡೆಸಿದವರಿಗೆ (ಪತ್ರಿಕೆಯ ಹಿರಿಯ ಅಂಕಣಕಾರ ಪ್ರೊ.ಎಚ್.ಎಲ್.ಕೇಶವಮೂರ್ತಿ ಸೇರಿದಂತೆ ಹಲವು ಪ್ರಮುಖರು ಈ ಹೋರಾಟದಲ್ಲಿ ಭಾಗಿಯಾಗಿದ್ದಾರೆ) ಯಾವ ಕಾರ್ಯದರ್ಶಿಯೂ ಸ್ಪಂದಿಸಿರಲಿಲ್ಲ. ಈ ಅಕ್ರಮಗಳಲ್ಲಿ ಹಿಂದಿನ ವೈದ್ಯಕೀಯ ಶಿಕ್ಷಣ ಸಚಿವರು ನೇರವಾಗಿ ಭಾಗಿಯಾಗಿದ್ದರೆ, ಹಾಲಿ ಸಚಿವರು ಅದನ್ನು ಸರಿಪಡಿಸಲು ಇಚ್ಛಾಶಕ್ತಿ ತೋರಿರಲಿಲ್ಲ. ಆದರೆ ರಶ್ಮಿಯವರು ಆ ಕಡತಕ್ಕೆ ಜೀವ ಕೊಟ್ಟಿದ್ದರು.

12. ಹುಬ್ಬಳ್ಳಿಯಲ್ಲಿ ಆರು ಜನ ಸರ್ಕಾರಿ ಮೆಡಿಕಲ್ ಕಾಲೇಜು ವೈದ್ಯರು ಕರ್ತವ್ಯದ ವೇಳೆಯಲ್ಲೇ ಖಾಸಗಿ ಪ್ರಾಕ್ಟೀಸ್ ಮಾಡುತ್ತಿದ್ದುದು ಟಿವಿ ವಾಹಿನಿಯೊಂದರಲ್ಲಿ ದಾಖಲೆ ಸಮೇತವಾಗಿ ಪ್ರಸಾರವಾದರೂ, ಹಿಂದಿನ ಕಾರ್ಯದರ್ಶಿ ಗೋವಿಂದರಾಜು ಅವರು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ, ಆದರೆ ರಶ್ಮಿಯವರು ಕಾರ್ಯದರ್ಶಿಯಾಗಿ ಬಂದ ನಂತರ ಸದರಿ ವೈದ್ಯರನ್ನು ಅಮಾನತ್ತಿನಲ್ಲಿಟ್ಟರು.


* * * *

ಇವೆಲ್ಲವೂ ವೈದ್ಯಕೀಯ ಶಿಕ್ಷಣ ಇಲಾಖೆಯ ಆಯಕಟ್ಟಿನ ಜಾಗಗಳಲ್ಲಿದ್ದವರಿಗೆ ಮತ್ತು ಸರ್ಕಾರೀ ಹಾಗೂ ಖಾಸಗಿ ಕಾಲೇಜುಗಳ ಭ್ರಷ್ಟರಿಗೆ ಸಿಟ್ಟು ತರಿಸಿತು. ಹಾಗಾಗಿ ರಶ್ಮಿಯವರಿಗೆ ಹಲವು ಬಗೆಯ ಕಿರುಕುಳ ಕೊಟ್ಟು, ರಜೆಯ ಮೇಲೆ ಹೋಗುವಂತೆ ಮಾಡಿದರು. ಈಗ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಗಿದ್ದು, ಅವರು ಈಗಾಗಲೇ ಖಾಸಗಿ ಆಡಳಿತ ಮಂಡಳಿಗೆ ಹಿಂದೆ ರಶ್ಮಿಯವರು ವಿಧಿಸಲು ಉದ್ದೇಶಿಸಿದ್ದ ನಿಬಂಧನೆಗಳಲ್ಲಿ ಹಲವನ್ನು ಹಿಂತೆಗೆದುಕೊಂಡು, ಹೊಸ ಪಟ್ಟಿಯನ್ನೂ, ಹೊಸ consensual agreement ಅನ್ನೂ ತಯಾರಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ನಡೆಸುತ್ತಿರುವ ವ್ಯಾಪಾರಿಗಳು ಈಗಾಗಲೇ ಆರ್‌ಟಿಇ ಜಾರಿಗೆ ವಿರೋಧ ವ್ಯಕ್ತಪಡಿಸಿ ಸರ್ಕಾರಕ್ಕೆ ಧಮಕಿ ಹಾಕಿದ್ದಾರೆ. ಈ ಖಾಸಗಿ ಶಾಲೆಗಳ ಶುಲ್ಕ ನಿಯಂತ್ರಣಕ್ಕೆಂದೇ ಇರುವ ಕರ್ನಾಟಕ ಶಿಕ್ಷಣ ಕಾಯ್ದೆ 1986ನ್ನು ದುರ್ಬಲಗೊಳಿಸುವ ಹುನ್ನಾರವೂ ನಡೆಯುತ್ತಿದೆ. ಶೋಷಿತ ಸಮುದಾಯಗಳ ಪರ ಇರುವ ಯಾವುದೇ ಸರ್ಕಾರವು ಇಂತಹ ಕಾಯ್ದೆಗಳು (ವಾಸ್ತವದಲ್ಲಿ ಅವು ಇರಬೇಕಾದಷ್ಟು ಸಬಲವಾಗಿಯೂ ಇಲ್ಲ) ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು. ಅಂತಹ ಸಂದರ್ಭಗಳಲ್ಲಿ ಸಿದ್ದರಾಮಯ್ಯನವರು ಅಥವಾ ಅವರ ಸಚಿವರು ಗಟ್ಟಿಯಾಗಿ ನಿಂತಂತೆ ಇದುವರೆಗೂ ಕಂಡಿಲ್ಲ. ಹೈಕೋರ್ಟ್ ಆದೇಶದ ಪ್ರಕಾರ ಈ ಕಾಯ್ದೆಯ ಕುರಿತ ಅಭಿಪ್ರಾಯವನ್ನು ಸರ್ಕಾರವು ಹೇಳಬೇಕಾಗಿ ಬಂದಾಗ, ಸರ್ಕಾರವು ಪ್ರಬಲವಾಗಿ ಶೋಷಕರ ಪರವಾಗಿ ನಿಂತಿಲ್ಲ.

ಈಗ ಇನ್ನೂ ಒಂದು ಸಂದರ್ಭ ಬಂದಿದೆ. ಸಿದ್ದರಾಮಯ್ಯನವರೂ ಸಹ ಈ ವ್ಯವಸ್ಥೆಯಲ್ಲಿ ಅಂತಹ ಮೂಲಭೂತ ಬದಲಾವಣೆಗಳನ್ನು ತಂದುಬಿಡಲು ಸಾಧ್ಯ ಎಂಬ ನಿರೀಕ್ಷೆಯೇನೂ ಇರಲಿಲ್ಲ, ಆದರೆ ಕೆಲವಾದರೂ ಗಟ್ಟಿ ಕ್ರಮಗಳಿಗೆ ಮುಂದಾಗಿ ಜನವಿರೋಧಿ, ಲಾಭಕೋರ ಲಾಬಿಗಳಿಗೆ ಬಿಸಿ ಮುಟ್ಟಿಸಲೂ ಸಾಧ್ಯವಾಗಲಿಲ್ಲ ಎಂಬುದನ್ನಂತೂ ಇತಿಹಾಸದಲ್ಲಿ ಉಳಿಸುತ್ತದೆ.

ಕನಿಷ್ಠ ಶಿಕ್ಷಣದ ವ್ಯಾಪಾರೀಕರಣವನ್ನು ಎಲ್ಲಾ ಹಂತಗಳಲ್ಲಿ ತಡೆಗಟ್ಟುವ ನಿಷ್ಠುರ ಕ್ರಮಗಳಿಗಾಗಿ ಆಗ್ರಹಿಸಿ ನಡೆಯಬೇಕಾದ ಚಳವಳಿ ಮಾತ್ರ ಇವತ್ತಿನ ದಿಕ್ಕನ್ನು ಬದಲಿಸಲು ಸಾಧ್ಯ. ಕರ್ನಾಟಕದ ವಿದ್ಯಾರ್ಥಿ ಚಳವಳಿ ಆ ಸವಾಲನ್ನು ಕೈಗೆತ್ತಿಕೊಂಡು ದಡ ಮುಟ್ಟಿಸುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.



ಶರಣ್ ಪ್ರಕಾಶ್ ಪಾಟೀಲ್



ರಶ್ಮಿ

ಬಿಜೆಪಿಗೆ ಇದರ ಕುರಿತು ಮಾತನಾಡುವ ನೈತಿಕ ಹಕ್ಕಿದೆಯೇ?

The Karnataka Professional Educational Institutions (Regulation of Admission and Determination of Fee) Act, 2006 ಕಾಯ್ದೆ ಬಂದ ನಂತರ ಅತ್ಯಂತ ಹೆಚ್ಚು ಕಾಲ ಅಧಿಕಾರದಲ್ಲಿದ್ದದ್ದು ಬಿಜೆಪಿ ಪಕ್ಷ. ಆ ಪಕ್ಷದ ಹಿರಿಯ ಮುಂದಾಳು ರಾಮಚಂದ್ರಗೌಡರು ಮೊದಲು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದರು. ಸ್ವತಃ ತಾವೇ ನೇಮಕಾತಿ ಹಗರಣದಲ್ಲಿ ಸಿಕ್ಕಿ ಹಾಕಿಕೊಂಡು ರಾಜೀನಾಮೆ ನೀಡಬೇಕಾಗಿ ಬಂದಿತು. ಅದು ಸಿಕ್ಕಿಬಿದ್ದ ಪ್ರಕರಣ ಅಷ್ಟೇ. ಅದರ ಜೊತೆಗೆ ರಾಮಚಂದ್ರೇಗೌಡರು ನಿಯಮಾವಳಿಗಳನ್ನು ಗಾಳಿಗೆ ತೂರಿ ಹಲವಾರು ಅಕ್ರಮಗಳನ್ನು ನಡೆಸಿದ್ದರು.

ಇದಾದ ನಂತರ ಬಂದವರು ಆತ್ಮಹತ್ಯೆ ಪ್ರಕರಣ ಖ್ಯಾತಿಯ ರಾಮದಾಸ್. ಇಂತಹ ಅಕ್ರಮಗಳನ್ನು ಅವರೂ ಮುಂದುವರೆಸಿದರು. ಆದರೆ ದಿಢೀರ್ ದಾಳಿ ನಡೆಸಿ, ಸುದ್ದಿ ಮಾಡುತ್ತಿದ್ದ ರಾಮದಾಸ್ ಅದರಿಂದ ಸಾಕಷ್ಟು ಹಣ ಮಾಡಿಕೊಂಡರು. ಈ ಇಬ್ಬರೂ ಮಂತ್ರಿಗಳು ಈ ಕಾಯ್ದೆಯನ್ನು ಜಾರಿಗೆ ತರಲಿಲ್ಲ, ಸಂಪೂರ್ಣವಾಗಿ ಖಾಸಗಿ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿಗೆ ಶರಣಾಗಿದ್ದರು. ಇವರ ಅವಧಿಯಲ್ಲಿ ನಡೆದ ಅಕ್ರಮಗಳ ಕುರಿತಾಗಿಯೇ ಪ್ರೊ.ಪಿ.ವೆಂಕಟರಾಮಯ್ಯನವರು ವರದಿ ನೀಡಿದ್ದು, ಅದರ ಆಧಾರದ ಮೇಲೆಯೇ ಇಲಾಖೆಯ ಕಾರ್ಯದರ್ಶಿ ರಶ್ಮಿಯವರು ಕ್ರಮ ತೆಗೆದುಕೊಳ್ಳಲು ಮುಂದಾಗಿದ್ದರು.

ಆದರೆ ಕಾಂಗ್ರೆಸ್ ಸರ್ಕಾರವು ಖಾಸಗಿಯವರ ಕೈಗೊಂಬೆ ಆಗಿದೆಯೆಂದು ಬಿಜೆಪಿ ಮತ್ತು ಅದರ ವಿದ್ಯಾರ್ಥಿ ವಿಭಾಗ ಎಬಿವಿಪಿಗಳು ಬೊಬ್ಬೆ ಹೊಡೆಯುತ್ತಿವೆ! ಇವರಿಗಿಂತ ಮಾನಗೇಡಿಗಳು ಇನ್ನಾರಿದ್ದಾರೆ?

ಅಂಬೇಡ್ಕರ್ ಅವರ ಬಗ್ಗೆ ದಲಿತರು ಮಾತ್ರ ಬರೆಯಬೇಕೆ?

ಇತ್ತೀಚೆಗೆ ನವಯಾನ ಪ್ರಕಾಶನದ ಎಸ್.ಆನಂದ್ ...ು ಒಂದು ಪುಸ್ತಕವನ್ನು ಬಿಡುಗಡೆ ಮಾಡಿದ್ದಾರೆ. ...ಪುಸ್ತಕಕ್ಕೆ ಖ್ಯಾತ ಲೇಖಕಿ ಅರುಂಧತಿ ರಾಯ್ ...ು ಸುಮಾರು 120 ಪುಟಗಳ ಸುದೀರ್ಘ ...ುನ್ನುಡಿಯನ್ನು ಬರೆದಿದ್ದಾರೆ. ಜೊತೆಗೆ ಸ್ವತಃ ...ದ್ ಅವರು ಸಾವಿರಾರು ಟಿಪ್ಪಣಿಗಳನ್ನೂ ...ಬಿದ್ದಾರೆ. ಆದರೆ ಆ ಪುಸ್ತಕವು ನಮ್ಮ ದೇಶದ ...ಧಾನದ ಕರ್ತೃ ಬಿ.ಆರ್.ಅಂಬೇಡ್ಕರ್ ಅವರು ...ಬಿದ್ದ 'ಅನ್ನೈಇಲೇಷನ್ ಆಫ್ ಕಾಸ್ಟ್' ...ವಿನಾಶ) ಎಂಬ ಲೇಖನವನ್ನು ಕುರಿತದ್ದಾದ್ದರಿಂದ ... ಹಲವು ದಲಿತರು ಆಕ್ರೋಶಗೊಂಡು ಅರುಂಧತಿ ...ತ್ತು ಆನಂದ್ ವಿರುದ್ಧ ಕೆಂಡಕಾರುತ್ತಿದ್ದಾರೆ. ...ಬೇಡ್ಕರರ 'ಜಾತಿ ವಿನಾಶ' ಕೃತಿಯು ನಮಗೆ ...ತ್ರ ಗ್ರಂಥವಾಗಿದ್ದು ಅದನ್ನು ಬ್ರಾಹ್ಮಣರಾದ ...ಬ್ಬರೂ ಮಲಿನಗೊಳಿಸಿದ್ದೀರಿ. ಅಂಬೇಡ್ಕರರ ಬಗ್ಗೆ ...ತ ಲೇಖಕರು ಬರೆಯುತ್ತಿದ್ದರು, ಪ್ರಕಟಿಸುತ್ತಿದ್ದರು. ...ಲಸವನ್ನು ನೀವ್ಯಾಕೆ ಮಾಡಿದ್ದೀರಿ" ಎಂದು ...ೇಪಿಸುತ್ತಿದ್ದಾರೆ.

...ಂತಹ ಪ್ರಶ್ನೆಗಳನ್ನು ಕೇಳುತ್ತಿರುವವರಲ್ಲಿ ...ನವರು ದಲಿತ ಯುವಕರೇ ಆಗಿದ್ದಾರೆ. ದಲಿತರ, ...ಷಿತರ, ದಮನಿತರ ಬಗ್ಗೆ ಈ ಪತ್ರಿಕೆಯು ಕಳೆದ ...ವತ್ತು ವರ್ಷಗಳಿಂದ ಕಾಳಜಿ ವಹಿಸುತ್ತಲೇ ...ರುವುದನ್ನು ನಮ್ಮ ದಲಿತ ಯುವಕರಿಗೆ ...ಸುತ್ತ ಅವರಿಗೆ ಒಂದೆರಡು ಕಿವಿಮಾತುಗಳನ್ನು



...ಂಧತಿ ರಾಯ್

...ಲು ಇಚ್ಛಿಸುತ್ತೇನೆ. ಇದಕ್ಕೆ ಇನ್ನೊಂದು ಕಾರಣ ...ಪುಸ್ತಕವನ್ನು ನಮ್ಮ 'ಲಂಕೇಶ್ ಪ್ರಕಾಶನ' ...ವಲ್ಲೇ ಕನ್ನಡದಲ್ಲಿ ಹೊರತರುತ್ತಿರುವುದು.

...ಮೊದಲನೆಯದಾಗಿ ಅರುಂಧತಿ ರಾಯ್ ಮತ್ತು ...ದ್ ಬಗ್ಗೆ ಒಂದೆರಡು ಮಾತುಗಳು ಇಲ್ಲಿ ಅವಶ್ಯಕ ...ಸುತ್ತದೆ. ಅರುಂಧತಿಯವರ ತಾಯಿ ಕೇರಳ ...ಲದ ಕ್ರಿಶ್ಚಿಯನ್ನರಾಗಿದ್ದರೆ ಆಕೆಯ ತಂದೆ ಬೆಂಗಾಳಿ ...ಲದ ಬ್ರಹ್ಮೋ. ಆದರೆ ಅರುಂಧತಿ ಬೆಳೆದದ್ದು ...ತಾಯಿಯ ಆಶ್ರಯದಲ್ಲಿ, ಕೇರಳ ಕ್ರಿಶ್ಚಿಯನ್ ...ಯಲ್ಲಿ, ಆಕೆ ತನ್ನ ತಂದೆಯನ್ನು ಭೇಟಿಯಾಗಿದ್ದ ...ುಕ್ಕೆ ಬಂದ ನಂತರವೇ. ಅಷ್ಟೇ ಮುಖ್ಯವಾಗಿ ಆಕೆ ...ು ನಮ್ಮ ದೇಶದ ಆದಿವಾಸಿಗಳ, ಅಲ್ಪಸಂಖ್ಯಾತರ, ...ನಿತರ ಪರ ದನಿ ಎತ್ತುತ್ತಿರುವ ಪ್ರಮುಖ ...ಷ್ ಬರಹಗಾರ್ತಿ. ಸಹಸ್ರಾರು ವರ್ಷಗಳಿಂದ ...ನಕ್ಕೊಳಗಾಗುತ್ತಾ ಬಂದಿರುವ ದಲಿತರ ಬಗ್ಗೆ ...ುಲ್ಲಿ ಅಪಾರ ಕಾಳಜಿ ಇರುವುದು ಸುಳ್ಳಲ್ಲ.

...ಇನ್ನು ಆನಂದ್ ಕೂಡ ಬ್ರಾಹ್ಮಣ ಕುಟುಂಬದಲ್ಲಿ ...ದವರು ನಿಜ. ಆದರೆ ಆತ ಕಳೆದ ಹಲವಾರು ...ಗಳಿಂದ ದಲಿತರ ಸ್ಥಿತಿಗತಿಗಳ ಬಗ್ಗೆ ಬರೆಯುತ್ತಾ ...ರುವವರು. ಅಷ್ಟೇ ಅಲ್ಲ, ನವಯಾನ ಎಂಬ ...ಶನ ಸಂಸ್ಥೆಯನ್ನು ಸ್ಥಾಪಿಸಿ ದಲಿತ ಬರಹಗಾರರ, ...ರಾಟಗಾರರ, ಕ್ರಾಂತಿಕಾರಿಗಳನ್ನು ಕುರಿತೇ ...ವಾದ, ಮೌಲ್ಯಯುತವಾದ ಪುಸ್ತಕಗಳನ್ನು ...ಸುತ್ತಾ ಬಂದಿದ್ದಾರೆ. ಅವರ ಬಗ್ಗೆ ಹೆಚ್ಚಿನ ಜನ ...ುವ ಮಾತು ಯಾವುದೆಂದರೆ "ಈತ ...ಹ್ಮಣನಾಗಿ ಜನಿಸಿದ್ದರೂ ಇವತ್ತು ದಲಿತರಿಗಿಂತಲೂ ...ತರ ಪರ ಜೋರಾಗಿ ದನಿ ಎತ್ತುವ ವ್ಯಕ್ತಿ"


...ಒಂದು ವರ್ಷದ ಹಿಂದೆ ಔಟ್‌ಲುಕ್ ಪತ್ರಿಕೆ ...ಧಿಯ ನಂತರ ಅತಿ ಶ್ರೇಷ್ಠ ಭಾರತೀಯ ಯಾರು' ...ನ ಶೀರ್ಷಿಕೆಯಡಿ ಒಂದು ವಿಶೇಷ ಸಂಚಿಕೆಯನ್ನು ...ಹಿಸಿದಾಗ ಇದೇ ಆನಂದ್ ಅದರ ...ಪಾದಕರಾಗಿದ್ದರು. ಅಷ್ಟೇ ಅಲ್ಲ, ಆ ಸಂಚಿಕೆಯಲ್ಲಿನ ... ಬರಹದಲ್ಲಿ "ಯಾಕೆ 'ಗಾಂಧಿಯ ನಂತರ?' ...ು ಕೇಳಬೇಕು. ಗಾಂಧಿಗಿಂತ ಶ್ರೇಷ್ಠ ಭಾರತೀಯ ...ಲ್ಲ ಇಲ್ಲ ಎಂದು ಪೂರ್ವಭಾವಿಯಾಗಿ ...ರಿಸುವುದು ಸರಿಯೇ?" ಎಂದು ಪ್ರಶ್ನಿಸಿದ್ದರು.



ಜೊತೆಗೆ ಆ ಸಂಚಿಕೆಯಲ್ಲಿ ಅತಿಶ್ರೇಷ್ಠ ಭಾರತೀಯ ಅಂಬೇಡ್ಕರ್ ಎಂದು ಹೇಳಿದ್ದರು.

ಅರುಂಧತಿ ಮತ್ತು ಆನಂದ್-ಇವರಿಬ್ಬರ ಹಿನ್ನೆಲೆ ಯಾವುದೇ ಆಗಿದ್ದರೂ ಅವರು ಇವತ್ತು ಏನು ಮಾಡುತ್ತಿದ್ದಾರೆ ಎಂಬುದೇ ಮುಖ್ಯವಾಗಬೇಕೆಂಬುದು

ಆನಂದ್



ನನ್ನ ಅನಿಸಿಕೆ.

ಆದರೆ ಇವತ್ತು ಹಲವು ದಲಿತ ಯುವಕರು ಎಲ್ಲೋ ಒಂದು ಕಡೆ ದಾರಿ ತಪ್ಪುತ್ತಿದ್ದಾರೆ ಎನಿಸುತ್ತದೆ. ಉದಾಹರಣೆಗೆ ಈ ದೇಶದ ಎಲ್ಲರಿಗೂ ನಾಯಕರಾಗಬೇಕಾದ ಅಂಬೇಡ್ಕರ್ ಅವರನ್ನು ದಲಿತ ಯುವಕರು ಕೇವಲ ತಮ್ಮ ಸಮುದಾಯದ ನಾಯಕ ಎಂದು ಪರಿಗಣಿಸುವುದು. ಅಂಬೇಡ್ಕರ್ ಅವರನ್ನು ದಲಿತರು ಹೀಗೆ 'ಕಬ್ಜಾ' ಮಾಡಿಕೊಳ್ಳುವುದು ಎಷ್ಟು ಸರಿ? ಅದರಲ್ಲೂ ನಮ್ಮ ಪಠ್ಯಪುಸ್ತಕಗಳಲ್ಲಿ, ಸಾರ್ವಜನಿಕರ ಮನಸ್ಸಿನಲ್ಲಿ ಅಂಬೇಡ್ಕರ್ ಅವರಿಗೆ ಹೆಚ್ಚಿನ ಸ್ಥಾನಮಾನ ಸಿಗದಿರುವ ಇಂದಿನ ಪರಿಸ್ಥಿತಿಯಲ್ಲಿ ಅವರನ್ನು ತಮ್ಮ ಸ್ವತ್ತಿನಂತೆ ಇಟ್ಟುಕೊಳ್ಳುವ ಮೂಲಕ ಅಂಬೇಡ್ಕರ್ ಅವರ ವಿಚಾರಗಳು ಜನರಿಗೆ ತಲುಪದಂತೆ ಮಾಡುವುದು ಸ್ವತಃ ಅಂಬೇಡ್ಕರ್ ಅವರಿಗೆ ಮಾಡುವ ಅನ್ಯಾಯವಲ್ಲವೇ?

ಈ ಪ್ರಶ್ನೆಗಳು ಯಾಕೆಂದರೆ ಅರುಂಧತಿ ರಾಯ್ ಮತ್ತು ಆನಂದ್ ಅವರನ್ನು ವಿರೋಧಿಸುತ್ತಿರುವ ದಲಿತರು ಹಲವಾರು ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚಿಗೆ ದಲಿತ ಯುವಕರಲ್ಲಿ ಒಂದು ತೆರನಾದ ಅತಿ ಸೂಕ್ಷ್ಮತೆ ವ್ಯಕ್ತವಾಗುತ್ತಿದೆ. ಇದು ಅವರನ್ನು ದಾರಿ ತಪ್ಪಿಸುತ್ತಿದೆ. ಇದಕ್ಕೆ ಉದಾಹರಣೆಯಾಗಿ ಈಗ ಅರುಂಧತಿ ಮತ್ತು ಆನಂದ್ ಅವರನ್ನು ಹಲವು ದಲಿತರು-ರಾಯ್ ಅವರ ಮುನ್ನುಡಿಯನ್ನಾಗಲಿ, ಆನಂದ್ ಅವರ ಟಿಪ್ಪಣಿಗಳನ್ನಾಗಲಿ ಓದದೆ - ಕೇಳುತ್ತಿರುವ ಪ್ರಶ್ನೆಗಳನ್ನೇ ನೋಡಬಹುದು.

ಅವರು ಎತ್ತಿರುವ ಹಲವು ಪ್ರಶ್ನೆಗಳು ಹೀಗಿವೆ:

ಅಂಬೇಡ್ಕರ್ ಅವರ 'ಜಾತಿವಿನಾಶ' ಲೇಖನಕ್ಕೆ ನೀವು ಬರೆದಿರುವ ಮುನ್ನುಡಿಯಲ್ಲಿ ಹೆಚ್ಚಾಗಿ ಗಾಂಧಿ ಬಗ್ಗೆ ಪ್ರಸ್ತಾಪಿಸಿದ್ದೀರಿ. ಅಂಬೇಡ್ಕರ್ ಪುಸ್ತಕದಲ್ಲಿ ಗಾಂಧಿಯ ಬಗ್ಗೆ ಬರೆಯುವ ಅಗತ್ಯವೇನಿತ್ತು? ಇಂತಹ ಮುನ್ನುಡಿ ಬರೆಯುವ ಹಿಂದಿರುವ ನಿಮ್ಮ ಉದ್ದೇಶವೇನು? ಇದನ್ನು ಬರೆಯಲು ನಿಮಗೆ ಅರ್ಹತೆ ಇದೆಯೇ? ದಲಿತ ಹೋರಾಟಗಾರರು ಮತ್ತು ವಿದ್ವಾಂಸರು ಅಂಬೇಡ್ಕರ್ ಅವರ ಲೇಖನಕ್ಕೆ ಮುನ್ನುಡಿ ಬರೆಯಲು ನಿಮಗಿಂತ ಅರ್ಹರಲ್ಲವೇ? ಇದನ್ನು ಬರೆಯುವ ಮುನ್ನ ನೀವು ಯಾವ ದಲಿತ ಹೋರಾಟದಲ್ಲಿ ಭಾಗವಹಿಸಿದ್ದೀರಿ? ಅಂಬೇಡ್ಕರ್ ಅವರಿಗೆ ನೀವು ಅನುಗ್ರಹ ತೋರಿಸುವ ರೀತಿಯಲ್ಲಿ ಬರೆದಿರುವುದೇತಕ್ಕೆ? ಅಂಬೇಡ್ಕರ್ ಅವರನ್ನು ಗಾಂಧಿಯ ಜೊತೆ ಇಟ್ಟು ನೋಡುವುದು ಮೇಲು ಜಾತಿಯವರ ಕುತಂತ್ರವಾಗಿದೆ; ಅದನ್ನೇ ನೀವು ಯಾಕೆ ಮಾಡಿದ್ದೀರಿ? ಈ ಪುಸ್ತಕವನ್ನು ಪ್ರಕಟಿಸಿ ನೀವು ಮತ್ತು ನವಯಾನ ಪ್ರಕಾಶನ ಭಾರಿ ಪ್ರಚಾರ ಪಡೆದಿದ್ದೀರಿ ಮತ್ತು ಆ ಮೂಲಕ ಅಂಬೇಡ್ಕರ್ ಅವರನ್ನು ದುರ್ಬಳಕೆ ಮಾಡಿಕೊಂಡಿದ್ದೀರಿ ಅಲ್ಲವೇ?

ಇಂತಹ ಪ್ರಶ್ನೆಗಳಿಗೆ ಅರುಂಧತಿ ಮತ್ತು ಆನಂದ್ ಉತ್ತರಗಳನ್ನು ಕೊಟ್ಟಿದ್ದಾರೆ. ಸಾರಾಂಶದಲ್ಲಿ ಅರುಂಧತಿ ಅವರ ಪ್ರತಿಕ್ರಿಯೆ ಹೀಗಿದೆ: "ದಲಿತರ ಜೀವನಾನುಭವದ ಬಗ್ಗೆ ದಲಿತರೇ ಜಗತ್ತಿಗೆ ಅತಿ ಗಾಢವಾಗಿ ಕಟ್ಟಿಕೊಡಬಲ್ಲರು ಎಂಬ ನಿಮ್ಮ ವಾದವನ್ನು ಒಪ್ಪುತ್ತೇನೆ. ಆದರೆ ಅಂಬೇಡ್ಕರ್ ಅವರನ್ನು ಕುರಿತು ಬರೀ ದಲಿತರು ಮಾತ್ರ ಬರೆಯಬೇಕೆಂಬ ನಿಮ್ಮ ನಿಲುವನ್ನು ಒಪ್ಪಲಾರೆ. ನಾನು ಯಾವ ದಲಿತ ಹೋರಾಟದಲ್ಲಿ ಭಾಗವಹಿಸಿದ್ದೇ ಎಂದು ಕೇಳಿದ್ದೀರಿ. ಆದರೆ ಅಂಬೇಡ್ಕರ್ ಅವರ ಬಗ್ಗೆಯೇ ದಲಿತೇತರರು ಬರೆಯಕೂಡದೆಂದು ಹೇಳುವ ನೀವು ಯಾವ ದಲಿತೇತರರನ್ನು ನಿಮ್ಮ ಹೋರಾಟದಲ್ಲಿ ಸೇರಿಸಿಕೊಂಡಿದ್ದೀರಿ? ನಾನು ದಲಿತೆ ಅಲ್ಲ, ಹಿಂದೂ ಅಲ್ಲ, ಅಂಬೇಡ್ಕರ್ ಅವರನ್ನು ಕುರಿತ ತಜ್ಞೆಯೂ ಅಲ್ಲ ನಿಜ, ಆದರೆ ಕೆಲವೇ ಕೆಲವರಂತೆ ನಾನು ಅಂಬೇಡ್ಕರ್ ಅವರನ್ನು ಓದಿದ್ದೇನೆ. ನಾನು ತಜ್ಞೆಯಾಗಿಲ್ಲದಿದ್ದರೂ ತನ್ನ ಸುತ್ತಲಿನ ಸಮಾಜದೊಂದಿಗೆ ಸ್ಪಂದಿಸುವ ಓರ್ವ ಬರಹಗಾರ್ತಿಯಾಗಿ ನನ್ನ ಅಭಿಪ್ರಾಯಗಳನ್ನು ಮಂಡಿಸಿದ್ದೇನೆ. ನನಗಿಂತ ಹೆಚ್ಚು ತಿಳಿದುಕೊಂಡಿರುವ ದಲಿತ ಮತ್ತು ದಲಿತೇತರ ಬರಹಗಾರರೂ ಇದ್ದಾರೆ. ನಾನು ಬರೆದಿರುವ ಮುನ್ನುಡಿ ಮೊದಲನೆಯದೂ ಅಲ್ಲ, ಅತಿ ಶ್ರೇಷ್ಠವಾದದ್ದೂ ಅಲ್ಲ, ಕೊನೆಯದ್ದೂ ಅಲ್ಲ. ಬೇರೆಯವರಿಗೂ 'ಜಾತಿವಿನಾಶ'ದ ಬಗ್ಗೆ ಬರೆಯಲು ಅವಕಾಶವಿದ್ದು ಅವರೂ ಅದನ್ನು ಮಾಡಲಿ. ನಾನು ಯಾವ ರೀತಿಯಲ್ಲೂ ಅಂಬೇಡ್ಕರರಿಗೆ ಅನುಗ್ರಹ ತೋರಿಸುವ ರೀತಿಯಲ್ಲಿ ಬರೆದಿಲ್ಲ, ಬದಲಾಗಿ ನನ್ನ ಮುನ್ನುಡಿಯನ್ನು ಈ ಸಾಲುಗಳೊಂದಿಗೆ ಅಂತ್ಯಗೊಳಿಸಿದ್ದೇನೆ: "ಜಾತಿಯನ್ನು ವಿನಾಶ ಮಾಡಲು ಸಾಧ್ಯವೇ? ನಮ್ಮ ಗಗನಮಂಡಲದಲ್ಲಿರುವ ನಕ್ಷತ್ರಗಳನ್ನು ಪುನಸ್ಸಂಯೋಜಿಸುವ ಧೈರ್ಯ ಮಾಡದಿದ್ದರೆ ಅದು ಸಾಧ್ಯವಿಲ್ಲ, ಬ್ರಾಹ್ಮಣ್ಯವನ್ನು ಕುರಿತು ಕ್ರಾಂತಿಕಾರಿಗಳೆನಿಸಿಕೊಂಡವರು ಆಮೂಲಾಗ್ರ ವಿಮರ್ಶೆಯನ್ನು ಬೆಳೆಸಿಕೊಳ್ಳದಿದ್ದರೆ ಅದು ಸಾಧ್ಯವಿಲ್ಲ, ಹಾಗೆಯೇ ನಮ್ಮ ಶಾಲೆಗಳಲ್ಲದಿದ್ದರೂ ಕನಿಷ್ಠ ಹೊರಗಾದರೂ ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಓದದೆ ಇರುವ ತನಕವೂ ಅದು ಸಾಧ್ಯವಿಲ್ಲ, ಅಲ್ಲಿಯತನಕ ನಾವೆಲ್ಲರೂ ಅಂಬೇಡ್ಕರ್ ಅವರು ಹೇಳಿದ್ದಂತೆ 'ಹಿಂದೂಸ್ಥಾನದಲ್ಲಿ ಗುಣಮುಖರಾಗುವ ಕಿಂಚಿತ್ತೂ ಆಶಯಗಳಿಲ್ಲದ ರೋಗಗ್ರಸ್ತ ಪುರುಷ ಮತ್ತು ಮಹಿಳೆ'ಯರಾಗಿರುತ್ತೇವೆ. 'ಜಾತಿ ವಿನಾಶ' ಲೇಖನಕ್ಕೆ ಗಾಂಧಿ ಕೊಟ್ಟ ಪ್ರತಿಕ್ರಿಯೆ ಮತ್ತು ಸ್ವತಃ ಅಂಬೇಡ್ಕರ್ ಅವರ ಹಲವಾರು ಬರಹಗಳು ನಾನು ಗಾಂಧಿಯನ್ನು ಸಂಪೂರ್ಣವಾಗಿ ವಿಭಿನ್ನ ಕೋನದಿಂದ ನೋಡುವಂತೆ ಮಾಡಿತು. ಅಂಬೇಡ್ಕರ್ ಅವರ ಪ್ರತಿ ಹೆಜ್ಜೆಗೂ ಗಾಂಧಿ ಅಡ್ಡಗಾಲಿಡುತ್ತಿದ್ದರು. ಆದರೂ ದಲಿತರ ಹೊರತಾಗಿ ಇತರರಿಗೆ ಇದರ ಬಗ್ಗೆ ಗೊತ್ತೇ ಇಲ್ಲ. ಇವತ್ತು ಜಾತಿ ವಿರುದ್ಧದ ಹೋರಾಟದಲ್ಲಿ ಅಂಬೇಡ್ಕರ್ ಅವರನ್ನು ಗಾಂಧಿಯ ಜೂನಿಯರ್ ಪಾರ್ಟನರ್ ಆಗಿ ಇಡೀ ವ್ಯವಸ್ಥೆ ಬಿಂಬಿಸುತ್ತಿದೆ. ಅಷ್ಟೇ ಅಲ್ಲ, ಇವತ್ತು ಅಂಬೇಡ್ಕರ್ ಅವರೂ ಸೇರಿದಂತೆ ಹಿಂದೂ ಧರ್ಮವನ್ನು ವಿರೋಧಿಸಿದ್ದ ಇತರ ಕವಿಗಳನ್ನು, ಬುದ್ಧಿಜೀವಿಗಳನ್ನು ಹಿಂದೂ ಧರ್ಮದ ಮಹಾಪುರುಷರ ಸಾಲಿಗೆ ಸೇರಿಸಿಕೊಳ್ಳಲಾಗುತ್ತಿದೆ. ಅದೆಲ್ಲ ಏನೇ ಇರಲಿ, ನಾನು ಬರೆದಿರುವುದು ನಿಮಗೆ ಇಷ್ಟವಾಗದೆ ಇರಬಹುದು. ಆದರೆ ನಾನು ಬರೆದಿರುವುದು ಈ ಜಾತಿ ವ್ಯವಸ್ಥೆಯ ಬಗ್ಗೆ ಹೆಚ್ಚಾಗಿ ತಿಳಿದಿರದ ಭಾರತೀಯರಿಗೆ ಮತ್ತು ವಿದೇಶಗಳಲ್ಲಿರುವ ಜನರಿಗೆ. ನಮ್ಮನ್ನೆಲ್ಲ ಕೊರೆದುಹಾಕುತ್ತಿರುವ ಜಾತಿ ವ್ಯವಸ್ಥೆಯ ವಿರುದ್ಧ ನಾನು ಬರೆದಿದ್ದಕ್ಕೆ ನಿಮ್ಮ ಪ್ರತಿಯೆಯ ವಿಷಾದ ಮೂಡಿಸಿದೆ. ಯಾಕೆಂದರೆ ನಾನು ಇದನ್ನು ಬರೆದದ್ದು ಜಾತಿವಿನಾಶದ ಚಳವಳಿಯ ಭಾಗವಾಗಿ."

ಅರುಂಧತಿ ಅವರು ಜಾತಿ ಪದ್ಧತಿಯನ್ನು



• ಗೌರಿ ಲಂಕೇಶ್





editorlankesh@gmail.com

ಕುರಿತಂತೆ ಗಾಂಧಿಯನ್ನು ಪುನರ್ ವಿಮರ್ಶೆಗೆ ಒಡ್ಡಿರುವುದು, ಅಂಬೇಡ್ಕರ್ ಅವರನ್ನು ಮತ್ತು ದಲಿತರ ಸ್ಥಿತಿಗತಿಗಳನ್ನು ಅರ್ಥೈಸಿರುವುದು ಎಲ್ಲವೂ ಸರಿಯಾದದ್ದೇ. ಆದರೆ ಆಕೆಯಾಗಲಿ, ಆನಂದ್ ಆಗಲಿ ದಲಿತರಲ್ಲವಾದ್ದರಿಂದ ಅಂಬೇಡ್ಕರ್ ಅವರನ್ನು ಕುರಿತು ಬರೆಯಕೂಡದು, ಪ್ರಕಟಿಸಕೂಡದು ಎಂದು ವಾದಿಸುವುದು ಯಾವ ನಿಟ್ಟಿನಿಂದಲೂ ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ.

ಯಾಕೆಂದರೆ ಅಂಬೇಡ್ಕರ್ ಅವರ ವಿಚಾರಧಾರೆಗಳು ನಮ್ಮ ಮುಖ್ಯವಾಹಿನಿಗಳಲ್ಲಿ ವಿಸ್ತೃತ ಚರ್ಚೆಗೆ ಒಳಗಾದರೆ ಮಾತ್ರ ಈ ಜಾತಿ ಎಂಬ ಕೊಳಕು ವ್ಯವಸ್ಥೆಯ ಬಗ್ಗೆ ಹೆಚ್ಚು ಅರಿವನ್ನು ಮೂಡಿಸಬಹುದು ಮತ್ತು ಅದರ ವಿನಾಶದತ್ತ ನಮ್ಮ ಸಮಾಜ ಸಂಚಲಿಸಬಹುದು.

ಅಂಬೇಡ್ಕರ್ ಅವರು 80 ವರ್ಷಗಳ ಹಿಂದೆ ಬರೆದ 'ಜಾತಿ ವಿನಾಶ' ಲೇಖನವು ದಲಿತರ ವಲಯದಲ್ಲೇ ಹೆಚ್ಚು ಪ್ರಚಾರದಲ್ಲಿತ್ತು, ಆದರೀಗ ಈ ವಿವಾದದಿಂದಾದರೂ ಅದು ಹೆಚ್ಚು ಜನರನ್ನು ತಲುಪಿದರೆ (ನನ್ನನ್ನೂ ಸೇರಿದಂತೆ) ಅರುಂಧತಿ ಮತ್ತು ಆನಂದ್ ಎಂಬ ಇಬ್ಬರು ದಲಿತೇತರರು ಮಾಡಿರುವ ಕೆಲಸ ಸಾರ್ಥಕವಾಗುತ್ತದೆ. ಇಷ್ಟನ್ನಾದರೂ ನಮ್ಮ ದಲಿತ ಯುವಕರು ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಎಂದು ಆಶಿಸುತ್ತೇನೆ.

ಕರಾವಳಿ ಕದನ: ಸಂಕಟದ ಅಲೆಯಲ್ಲಿ ಸಂಘ ಪರಿವಾರ!

ದಕ್ಷಿಣ ಕನ್ನಡ ಮತ್ತು ಉಡುಪಿ-ಚಿಕ್ಕಮಗಳೂರಲ್ಲಿ ಕಾಂಗ್ರೆಸ್ ಹವಾ ಎದ್ದಿದೆ. ಆದರೆ ಟಿಕೆಟ್ ಹಂಚಿಕೆಯಲ್ಲಿ ಎಡವಿರುವ ಕಾಂಗ್ರೆಸ್ ಉತ್ತರ ಕನ್ನಡದಲ್ಲಿ ಎದುಸಿರು ಬಿಡುತ್ತಿದೆ. ಕಾಂಗ್ರೆಸ್‌ನ ಪ್ರಮಾದದಿಂದ ಜೆಡಿಎಸ್ ಇದ್ದಕ್ಕಿದ್ದಂತೆ ಬಿಜೆಪಿಯನ್ನು ಹಿಮ್ಮೆಟ್ಟಿಸಿ ಫೈಟಿಂಗ್‌ಗೆ ಬಂದು ನಿಂತಿದೆ. ಕಾಂಗ್ರೆಸ್-ಬಿಜೆಪಿ ಹಾಗು ಜೆಡಿಎಸ್‌ನ ಕದನ ಕಲಿಗಳ ಹೆಸರು ಆಖೈರುಗೊಂಡಿರುವ ಈ ಹೊತ್ತಲ್ಲಿ 'ಪತ್ರಿಕೆ' ಕರಾವಳಿಗೆ ಒಂದು ಸುತ್ತು ಹೊಡೆದಾಗ ಕಂಡ ಕತೆ ಇಲ್ಲಿದೆ.

ಕರಾವಳಿಯ ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಎರಡು ನಮೂನೆಯ ರಣರಂಗ ರೆಡಿಯಾಗುತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ-ಚಿಕ್ಕಮಗಳೂರಲ್ಲಿ ಕಾಂಗ್ರೆಸ್ ಹಾಗು ಬಿಜೆಪಿ ಮುಖಾಮುಖಿ ನಿಂತು ಸೆಣಸಾಡುವ ಸ್ಪಷ್ಟ ಚಿತ್ರಣ ಮೂಡಿದೆ. ಪಕ್ಷದ ಉತ್ತರ ಕನ್ನಡದಲ್ಲಿ ಮಾತ್ರ ಬಿಜೆಪಿ ಪ್ರಬಲ ಹೋರಾಟ ಕೊಡಲಾಗದೆ ತತ್ತರಿಸುತ್ತಿದೆ. ಹೀಗಾಗಿ ಲೆಕ್ಕಕ್ಕಿಲ್ಲದೆ ಬರೀ ಆಟಕ್ಕಷ್ಟೇ ಆಗಿದ್ದ ಜೆಡಿಎಸ್ ಗುಟುರು ಹಾಕುತ್ತ ಎದ್ದುನಿಂತು ಕಾಂಗ್ರೆಸ್‌ಗೆ ಸಡ್ಡು ಹೊಡೆಯುತ್ತಿದೆ.

ಕಲ್ಪಿತ ಮೋದಿ ಅಲೆಯ ಭ್ರಮೆ ಬಿತ್ತುವುದು ಬಿಟ್ಟರೆ ಈ ಬಿಜೆಪಿಗೆ ಬೇರ್ಯಾವುದೇ ಪ್ರಚೋದನಾತ್ಮಕ ಅಡ್ಡ ಅಸ್ತ್ರ ಕರಾವಳಿಯಲ್ಲಿ ಸಿಗದಾಗಿದೆ. ಇಷ್ಟು ದಿನ ಪ್ರಯೋಗಿಸಿದ ಹಿಂದೂತ್ವ-ಹಿಂದೂ ಹೆಣ್ಣಿನ ಮಾನ-ಗೋಪ್ರಾಣದಂಥ ಮಸಲತ್ತುಗಳು ಕೆಲಸಕ್ಕೆ ಬಾರದಂತಾಗಿವೆ. ಸಂಘ ಪರಿವಾರದ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ ತನ್ನ ಸಂಚುಗಳ ಸ್ಕೆಚ್ ವರ್ಕ್‌ಔಟ್ ಮಾಡುವ ನಿಷ್ಠಾವಂತ ಪಡೆಯಿಲ್ಲದೆ ಪರಿತಪಿಸುತ್ತಿದ್ದಾನೆ. ಮೂರೂ ಕಡೆಯಲ್ಲಿ ಭಟ್ ಗ್ಯಾಂಗಿಗೆ ಪುಂಡಾದ ಹುರಿಯಾಳುಗಳೇ ಸಿಕ್ಕಿಲ್ಲ, ತನಗೆ ಬೇಡದವರಿಗೇ ಟಿಕೆಟ್ ಕೊಡಬೇಕಾದ 'ಕರ್ಮ' ಭಟ್ ಮಾಮನದಾಗಿದೆ! ಮೋದಿ ಮೇನಿಯಾನ್ನಾದರೂ ಸೃಷ್ಟಿಸೋಣ ಎಂದರೆ, ಅದೂ ಸಂಘ ಪರಿವಾರದ ಪರಾಕ್ರಮಿಗಳಿಂದ ಸಾಧ್ಯವಾಗುತ್ತಿಲ್ಲ, ಒಟ್ಟನಲ್ಲಿ ಆರೆಸೆಸ್-ಬಿಜೆಪಿ ಭೂಪರು ಒಳಗೊಳಗೇ ಭಯದಿಂದ ಬೆವರುತ್ತಿದ್ದಾರೆ.

ದಕ್ಷಿಣ ಕನ್ನಡ ಮತ್ತು ಉಡುಪಿ-ಚಿಕ್ಕಮಗಳೂರಲ್ಲಿ ಕಾಂಗ್ರೆಸ್ ಹವಾ ಎದ್ದಿದೆ. ಆದರೆ ಟಿಕೆಟ್ ಹಂಚಿಕೆಯಲ್ಲಿ ಎಡವಿರುವ ಕಾಂಗ್ರೆಸ್ ಉತ್ತರ ಕನ್ನಡದಲ್ಲಿ ಎದುಸಿರು ಬಿಡುತ್ತಿದೆ. ಕಾಂಗ್ರೆಸ್‌ನ ಪ್ರಮಾದದಿಂದ ಜೆಡಿಎಸ್ ಇದ್ದಕ್ಕಿದ್ದಂತೆ ಬಿಜೆಪಿಯನ್ನು ಹಿಮ್ಮೆಟ್ಟಿಸಿ ಫೈಟಿಂಗ್‌ಗೆ ಬಂದು ನಿಂತಿದೆ. ಕಾಂಗ್ರೆಸ್-ಬಿಜೆಪಿ ಹಾಗು ಜೆಡಿಎಸ್‌ನ ಕದನ ಕಲಿಗಳ ಹೆಸರು ಆಖೈರುಗೊಂಡಿರುವ ಈ ಹೊತ್ತಲ್ಲಿ 'ಪತ್ರಿಕೆ' ಕರಾವಳಿಗೆ ಒಂದು ಸುತ್ತು ಹೊಡೆದಾಗ ಕಂಡ ಕತೆ ಇಲ್ಲಿದೆ.

ದಕ್ಷಿಣ ಕನ್ನಡ: ನಳಿನ್‌ಗೆ ನಡುಕ

ಬ್ರಹ್ಮಕಲಶೋತ್ಸವದ ಕಲೆಕ್ಷನ್ ಕಿಂಗ್ ನಳಿನ್ ಕುಮಾರ್ ಕಟೀಲ್‌ಗೆ ಕಳೆದ ಬಾರಿ ಅನಿರೀಕ್ಷಿತವಾಗಿ ಬಿಜೆಪಿ ಟಿಕೆಟ್ ಸಿಕ್ಕಿದ್ದು, ಅಚಾನಕ್ ಎಂಪಿಯಾಗಿದ್ದು ಆನಂದಾಘಾತ ತಂದಿತ್ತು. ಈ 'ಆಘಾತ'ದಿಂದ ಎಂಪಿಗಿರಿಯ ಐದು ವರ್ಷದಲ್ಲಿ ನಳಿನ್‌ಗೆ ಚೇತರಿಸಿಕೊಳ್ಳಲಾಗಲೇ ಇಲ್ಲ! ಸಂಸದನಾಗಿದ್ದೇ ಸಂಘಪರಿವಾರ ಹರಾಮಿ ಹಿಂದೂತ್ವ ಪ್ರಚೋದನೆಯ ಕಿತಾಪತಿಗೆಂದು ಭಾವಿಸಿದ್ದ ನಳಿನ್ ತನ್ನನ್ನು ಗೆಲ್ಲಿಸಿದ ಜನರತ್ತ ತಿರುಗಿ ನೋಡಲೇ ಇಲ್ಲ! ತನ್ನ ಸಂಘ ಸರದಾರ ಕಲ್ಲಡ್ಕ ಭಟ್‌ರ ಪಾದಪೂಜೆಯಲ್ಲಿ ಮೈಮರೆತ ನಳಿನ್ ಕ್ಷೇತ್ರದ ಯಾವ ಸಮಸ್ಯೆ-ಸಂಕಟಕ್ಕೂ ಸ್ಪಂದಿಸಲಿಲ್ಲ, ಎಂಪಿ ನಿಧಿಯನ್ನು ಆರೆಸ್ಸೆಸ್ ಕಾರ್ಯಾಚರಣೆಗೆ ಅನುಕೂಲವಾಗುವಂತೆ ದಿಲ್‌ದಾರ್ ಆಗಿ ಹಂಚಿದ್ದು ಬಿಟ್ಟರೆ, ಈತನಿಗೆ ನಿದ್ದೋಡಿ ಅಣು ವಿದ್ಯುತ್ ಯೋಜನೆ ಅಥವಾ ನೇತ್ರಾವತಿ ನದಿ ತಿರುವು ಸ್ಕೀಮ್‌ನ ಸಾಧಕಬಾಧಕ ಅರ್ಥವೇ ಆಗಲಿಲ್ಲ, ರೈಲು ಯೋಜನೆಯಂಥ ಅತೀ ಅವಶ್ಯ ಕೆಲಸಗಳೂ ಈತನಿಂದ ಕಡೆಗಣಿಸಲ್ಪಟ್ಟಿತು.



ಕೆ.ಕೆ. ಶೆಟ್ಟಿ, ಶಂಕರ್ ಆಳ್ವ, ಜನಾರ್ದನ ಪೂಜಾರಿ, ಸದಾನಂದ ಗೌಡರಂಥ ವಜನ್‌ದಾರರು ಪ್ರತಿನಿಧಿಸಿದ್ದ ಈ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ನಳಿನ್‌ನಂಥ ಖಾಲಿ ಬುರುಡೆಯ- ಅರೆಶಿಕ್ಷಿತ ರಂಗೀಲಾ ಚೆಡ್ಡಿ ಪೋರ ಹೇಗೆ ನುಸುಳಿಕೊಂಡ ಎಂಬುದೇ ದಕ್ಷಿಣ ಕನ್ನಡದಲ್ಲಿ ತಮಾಷೆಯ ಜೋಕ್‌ನಂತಾಗಿದೆ. ಇಡೀ ಕ್ಷೇತ್ರದ ಜನರು ನಳಿನ್‌ನ ನಖರಾದಿಂದ ರೋಸತ್ತು ಹೋಗಿದ್ದಾರೆ. ಜನರಿಗೆ ಸ್ಪಂದಿಸದ ಈ ಕೊರಡನ್ನು ಮನೆಗೆ ಕಳಿಸಲು ತೀರ್ಮಾನಿಸಿದ್ದಾರೆ. ಒಂದಿಷ್ಟು ಕಮಿಟೆಡ್ ಚೆಡ್ಡಿಗಳನ್ನು ಬಿಟ್ಟರೆ ಬಿಜೆಪಿಯವರೂ ನಳಿನ್ ಬಗ್ಗೆ ಬೇಸರಗೊಂಡಿದ್ದಾರೆ. ಹಿತ ಶತ್ರುಗಳಂತೂ ನಳಿನ್‌ನ ಡಿಂಗ್‌ಡಾಂಗ್ ಸಿಡಿ ಕೈಯಲ್ಲಿಟ್ಟುಕೊಂಡು ಬಿಡುಗಡೆಗೆ ಹೊಂಚು ಹಾಕಿ ಕುಂತಿದ್ದಾರೆ. ಆ 'ಸಿಡಿ'ಗಳಲ್ಲಿ ಒಂದು ಪಡುಬಿದ್ರಿ ಅಂತಃಪುರದದ್ದಾದರೆ, ಮತ್ತೊಂದು ಅಡ್ಯಾರಿನ ಅಡ್ಡೆಯದು ಎಂಬ ಗುಸುಗುಸು ಬಿಜೆಪಿ ಬಿಡಾರದಲ್ಲಿ ಎದ್ದಿದೆ. ಮತದಾರರ ಗೇಲಿಗೆ ವಸ್ತುವಾಗಿರುವ, ಬಿಜೆಪಿ ಕಾರ್ಯಕರ್ತರ ಅಸಹ್ಯಕ್ಕೆ ತುತ್ತಾಗಿರುವ ನಳಿನ್‌ನ ಸಾಧನೆ-ಸಾಹಸ ಸಾಕ್ಷಾತ್ ಕಲ್ಲಡ್ಕರನ್ನೇ ಚಿಂತೆಗೀಡು ಮಾಡಿದೆ. ಹಿಂದೂ ಹರಾಮಿ ಲೀಡರ್ ಪೀಪಿ, ಉದ್ಯಮಿ ದಯಾನಂದ ಪೈ ಅಥವಾ ಬಂಟ್ವಾಳದ ರಾಜೇಶ್ ನಾಯ್ಕರಲ್ಲಿ ಒಬ್ಬನನ್ನು ಎಂಪಿ ಕ್ಯಾಂಡಿಡೇಟ್ ಮಾಡದೇ ಬಿಟ್ಟದ್ದೇ ತಪ್ಪಾಯ್ತೆಂದು ಡಾನ್ ಈಗ ಕೈ-ಕೈ ಹಿಸುಕಿಕೊಳ್ಳುತ್ತಿದ್ದಾನೆ. ಪಾಪ! ಹಾಗೆಯೇ ಕ್ಷೇತ್ರದ ಪಟ್ಟಣ ಪ್ರದೇಶದಲ್ಲಿ ಒಂದಿಷ್ಟು ಮೋದಿ ಮಾಯೆ ಮುಸುಕಿರುವುದು ಬಿಟ್ಟರೆ ಹಳ್ಳಿಗಾಡಿನಲ್ಲಿ ಬಿಜೆಪಿ ಬೇರುಗಳು ಒಣಗಿವೆ. ಎಂಟು ಅಸೆಂಬ್ಲಿ ವಿಭಾಗಗಳಲ್ಲಿ 7ರಲ್ಲಿ ಕಾಂಗ್ರೆಸ್‌ನ ಶಾಸಕರಿದ್ದಾರೆ. ಸುಳ್ಯದಲ್ಲಿ ಬಿಜೆಪಿ ಶಾಸಕನಿದ್ದರೂ ಆತ ಗೆದ್ದಿದ್ದು ಬರೀ ಒಂದೂವರೆ ಸಾವಿರ ಮತದಂತರದಿಂದ. ಇದೆಲ್ಲ ಕಾಂಗ್ರೆಸ್‌ಗೆ ಅನುಕೂಲಕರವಾಗಿದೆ. ಅರ್ಥಾತ್ ಕಳೆದ ಎರಡೂವರೆ ದಶಕದಿಂದ ಬಿಜೆಪಿಯನ್ನು ನಿರಂತರವಾಗಿ ಗೆಲ್ಲಿಸಿ-ಸುಸ್ತಾಗಿರುವ ಮತದಾರರು ಈಗ ಬದಲಾವಣೆ ಬಯಸಿದ್ದಾರೆ.

ವಿನಾಕಾರಣ 23 ವರ್ಷ ಜನಾರ್ದನ ಪೂಜಾರಿ ಎಂಬ ಜನ ಬಳಕೆಯ ಹಿರಿಯ ಮುತ್ಸದ್ಧಿಯನ್ನು ವನವಾಸಕ್ಕೆ ಅಟ್ಟಿದ ಬಗ್ಗೆ ಮತದಾರರಿಗೇ ಪಶ್ಚಾತ್ತಾಪವಾಗಿದೆ. ಪ್ರತಿಸಲ ಸೋತಾಗಲೂ ಜನರಿಗೆ ಮತ್ತಷ್ಟು ಹತ್ತಿರ ಹೋದ ಪೂಜಾರಿಯೇ ಬೆಟರ್ ಎಂಬ ಅನುಕಂಪದ ಅಲೆ ದಕ್ಷಿಣ ಕನ್ನಡದಾದ್ಯಂತ ಎದ್ದಿದೆ. ಸುಮಾರು ಮೂರೂಕಾಲು ಲಕ್ಷದಷ್ಟಿರುವ ಕ್ಷೇತ್ರದ ಬಿಲ್ಲವರು ಹಿಂದೆ ಮಾಡಿದ ತಪ್ಪು ಈ ಬಾರಿ ಮಾಡಬಾರದೆಂಬ ನಿರ್ಧಾರಕ್ಕೆ ಈಗಾಗಲೇ ಬಂದಿದ್ದಾರೆ. ಸ್ವ-ಜಾತಿಯ ಏಕೈಕ ಮುಂದಾಳು ಪೂಜಾರಿಯನ್ನು ಪಾರ್ಲಿಮೆಂಟ್‌ಗೆ ಕಳಿಸಲೇಬೇಕಾದ ಅನಿವಾರ್ಯತೆ ಬಿಲ್ಲವರದಾಗಿದೆ. ಏಕೆಂದರೆ ಕಾಂಗ್ರೆಸ್ ಮೊದಲೆಲ್ಲ ಎರಡು-ಮೂರು ಈಡಿಗರಿಗೆ ಎಂಪಿ ಟಿಕೆಟ್ ಕೊಡುತ್ತಿತ್ತು, ಈ ಬಾರಿ ಪೂಜಾರಿ ಬಿಟ್ಟರೆ ಬೇರ್ಯಾವ ಈಡಿಗನಿಗೂ ಅವಕಾಶ ಸಿಕ್ಕಿಲ್ಲ, ಬಿಜೆಪಿಯಂತೂ ಈಡಿಗರಿಗೆ ಕ್ಯಾರೇ ಮಾಡಿಲ್ಲ, ಹೀಗಾಗಿ ಇಡೀ ರಾಜ್ಯದ ಈಡಿಗರು ಜಾಗ್ರತರಾಗಿ ದಕ್ಷಿಣದ ಕನ್ನಡದ ಸ್ವ-ಜಾತಿ ಜನರಿಗೆ ಬುದ್ಧಿ ಹೇಳುತ್ತಿದ್ದಾರೆ.

ಪೂಜಾರಿ ಹೃದಯವಂತ. ಬದ್ಧತೆಯಿರುವ ಜನಪರ ಕೆಲಸಗಾರ. ಮದಾಂಧ ರಾಜಕೀಯದೊಂದಿಗೆಂದೂ ರಾಜಿ ಆಗದ ಛಾತಿಗಾರ. ಧಾರ್ಮಿಕ ಕ್ರಾಂತಿಕಾರಿ. ವಿಧವೆಯರಿಗೆ-ಮಹಿಳೆಯರಿಗೆ ಗೌರವ-ನ್ಯಾಯ ಕೊಡುವ ನಿಷ್ಠುರ ತತ್ವ ಪೂಜಾರಿಯದು. ಆತ ಮಾಜಿಯಾದರೂ ಹಾಲಿ ಮಂತ್ರಿ-ಸಂಸದ-ಶಾಸಕರಿಗಿಂತಲೂ ಕ್ರಿಯಾಶೀಲ. ಪೂಜಾರಿಯ ಜನಪರ ಕಳಕಳಿಯನ್ನು ಆತನ ಪರಮವೈರಿಗಳೂ ಮೆಚ್ಚುತ್ತಾರೆ. ಹಾಗೆಯೇ ಪೂಜಾರಿ ಈಗ ಬದಲಾಗಿದ್ದಾರೆ. ಚಾಡಿಕೋರರ-ದಂಡಪಿಂಡಗಳ ಹಿಡಿತದಿಂದ ಹೊರಬಂದಿದ್ದಾರೆ. ಜಾತಿವಾದದಿಂದ ಹೊರಬಂದಿದ್ದಾರೆ. ಹೀಗಾಗಿ ಇದೆಲ್ಲಾ ಪೂಜಾರಿಗೆ ಈ ಬಾರಿ ಅನುಕೂಲಕರ ವಾತಾವರಣ ರೂಪಿಸಿದೆ. ಬಂಟ ಸಮುದಾಯದವರೂ ಸ್ವ-ಜಾತಿಯ ನಳಿನ್‌ಗಿಂತ ಹೊಸ ಪೂಜಾರಿಯೇ ಪರವಾಗಿಲ್ಲ ಎನ್ನುತ್ತಿದ್ದಾರೆ.

ಪ್ರತಿ ಎಲೆಕ್ಷನ್‌ನಲ್ಲಿ ಪೂಜಾರಿಯನ್ನು ಪ್ರತ್ಯಕ್ಷ-ಪರೋಕ್ಷವಾಗಿ ಕಾಡುತ್ತಿದ್ದ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ, ಪೇಜಾವರ ಸ್ವಾಮೀಜಿ, ವಿನಯ್‌ಕುಮಾರ್ ಸೊರಕೆ, ವೀರಪ್ಪ ಮೊಯ್ಲಿಗಳು ಈಗ ಮೆತ್ತಗಾಗಿದ್ದಾರೆ. ಎರಡೂವರೆ ದಶಕದಿಂದ ಮಾಜಿ ಆಗಿದ್ದರೂ ಪೂಜಾರಿ ಜನರಿಗೆಂದೂ ಬೆನ್ನು ಹಾಕಿ ಹೋದವರಲ್ಲ, ಪೂಜಾರಿ ಪರ ಎದ್ದಿರುವ ಗಾಳಿ ಅರ್ಥಮಾಡಿಕೊಂಡಿರುವ ಸೊರಕೆ-ಮೊಯ್ಲಿ ಮತ್ತು ದೇವದೂತರು ಅನಿವಾರ್ಯವಾಗಿ ಆತನ ಗೆಲುವಿಗೆ ಕೆಲಸ ಮಾಡಬೇಕಾಗಿ ಬಂದಿದೆ. ಸೊರಕೆ ಮಂತ್ರಿಯಾಗಿರುವುದರಿಂದ ಸಂತೃಪ್ತರಾಗಿದ್ದರೆ, ಮೊಯ್ಲಿಗೆ ಚಿಕ್ಕಬಳ್ಳಾಪುರದಲ್ಲಿ ಗೆಲ್ಲುವುದೇ ಸವಾಲಾಗಿದೆ. ಒಂದೇ ಹಂತದಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಎಲೆಕ್ಷನ್ ನಡೆಯುವುದರಿಂದ ಕಳೆದ ಬಾರಿಯಂತೆ ಪೂಜಾರಿ ವಿರುದ್ಧ ಚಿತಾವಣೆ ಮಾಡಲು ಮೊಯ್ಲಿಗೆ ಪುರುಸೊತ್ತು ಸಿಗದಾಗಿದೆ. ಈ ಅಂಶಗಳ ಜತೆಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಅಪರೂಪದ ಒಗ್ಗಟ್ಟು ಮೂಡಿರುವುದು ಪೂಜಾರಿಯ ನಾಗಾಲೋಟಕ್ಕೆ ವೇಗವರ್ಧಕದಂತಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಎಚ್ಚೆತ್ತಿರುವ ದಕ್ಷಿಣ ಕನ್ನಡಿಗರು ಕಲ್ಲಡ್ಕ ಭಟ್ಟನ ಬಳಗದ 'ಧರ್ಮ'ಯುದ್ಧಕ್ಕೆ ಆಸ್ಪದ ಕೊಡುತ್ತಿಲ್ಲ!!







ಉಡುಪಿ-ಚಿಕ್ಕಮಗಳೂರು: ಹೆಗ್ಡೆ ಹವಾ

ವಿೀನು-ಅಡಿಕೆ-ಕಾಫಿ ಘಮಲಿನ ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿಗೆ ಸ್ಥಳೀಯ ಅಭ್ಯರ್ಥಿಗಳೇ ಸಿಗದಂಥ ದುರ್ಗತಿ ಬಂದಿದೆ. ಪುತ್ತೂರಲ್ಲಿ ನೆಲೆ ತಪ್ಪಿದ ಚೆಡ್ಡಿ ಹಡಗುಗಳ್ಯರು ಇಲ್ಲಿ ಬಂದು ಲಂಗರು ಹಾಕುತ್ತಿದ್ದಾರೆ. ಕಳೆದ ಬಾರಿ ದಕ್ಷಿಣ ಕನ್ನಡದಲ್ಲಿ ಗೆಲ್ಲುವ ಧೈರ್ಯವಿಲ್ಲದೆ ಇಲ್ಲಿಗೆ ವಲಸೆ ಬಂದಿದ್ದ ಸೋಕಾಲ್ಡ್ ಸ್ಟೇಟ್ ಲೀಡರ್ ಸದಾನಂದಗೌಡ ಎದುಸಿರು ಬಿಡುತ್ತಲೇ ಗೆದ್ದು ಹೋದವರು ಕ್ಷೇತ್ರಕ್ಕೆ ಮೂರು ಬಿಲ್ಲೆ ಪ್ರಯೋಜನಕಾರಿ ಕೆಲಸ ಮಾಡಲಿಲ್ಲ. ಸಿಎಂ ಆಗಿದ್ದಾಗಲೂ ತನ್ನನ್ನು ಗೆಲ್ಲಿಸಿದ ಜನರ ಋಣ ತೀರಿಸುವ ಪ್ರಾಮಾಣಿಕ ಯೋಚನೆ ಮಾಡಲಿಲ್ಲ. ಯಾವ್ಯಾವುದೋ ಯೋಜನೆ-ಕಾಮಗಾರಿ ಮಾಡುವುದಾಗಿ ಸುಳ್ಳು ಭರವಸೆ ನೀಡಿಯೇ ಎಂಪಿ-ಸಿಎಂ ಆಗಿ ಈ ಡಿವಿ ವ್ಯರ್ಥ ಕಾಲಹರಣ ಮಾಡಿದರು.

ಡೀವಿ ಮಾಡಿದ ಅಪಕಾರಕ್ಕೆ, ಮಲೆನಾಡು





ಯುತ್ತಿದೆ. ಬಿಜೆಪಿಯಲ್ಲೇ ದೀವಿ ಮಾಡಿದ ದ್ರೋಹಕ್ಕಾಗಿ ಮಾಧಾನ ಮಡುಗಟ್ಟಿದೆ. ಬಿಜೆಪಿ ಎಂದರೇನೇ ಮಾನಿಸುವ ಮತದಾರ ಯಡ್ಡಿ ಮಹಾತ್ಮನ ಪರಮಾಪ್ತೆ ಕಗ್ಗಳಿಕೆಯ ಶೋಭಾ ಕರಂದ್ಲಾಜೆ ಬಿಜೆಪಿ ಟಿಕೆಟ್ ದುಕೊಂಡು ಬಂದಿರುವುದು ಕರಡು ಕೆರಳಿದ್ದಾರೆ. ಈ ಾಷೆ ಗೌಡತಿಯನ್ನು ಘಟ್ಟದ ಗೌಡರು ತಮ್ಮವಳೆಂದು ರಿಸಲು ಸಿದ್ಧರಿಲ್ಲ. ಅತ್ತ ಕರಾವಳಿಯಲ್ಲೂ ರಗಿನವಳೆಂದೇ ಈ ಬೆಂಗಳೂರು ನಿವಾಸಿಯನ್ನು ಗಣಿಸುತ್ತಿದ್ದಾರೆ ಶೋಭಕ್ಕನಿಗೆ ಕ್ಷೇತ್ರದ ಉದ್ದಗಲವೇ ವಾಗುತ್ತಿಲ್ಲ. ತನ್ನ 'ದೊರೆ' ಯಡ್ಡಿಗೆ ಸ್ಥಳೀಯ ಾಯತರ ಮೇಲಿರುವ ಪ್ರಭಾವ, ಆತನ ಬೆನ್ನಿಗೆ ರುವ ರಂಭಾಪುರಿ ಮಠಾಧೀಶರ ಜಾತಿ ಲಾಬಿಗಳು ುತ್ತದೆಂದು ಕನಸು ಕಾಣುತ್ತಿದ್ದಾರೆ ಶೋಭಕ್ಕ.

ಆದರೆ ಲೆಕ್ಕಾಚಾರ ಅಷ್ಟು ಸಲೀಸಾಗಿಲ್ಲ. ಲಿಂಗಾಯತರಿ ಲೂ ಒಕ್ಕಲಿಗರಿಲ್ಲಿ ಪ್ರಬಲರು. ಒಕ್ಕಲಿಗರ ಸ್ವಯಂ ಷಿತ ನೇತಾರ ಸಿ.ಟಿ. ರವಿ ಹೇಗಾದರೂ ಮಾಡಿ ಭಾ ಗೆಲ್ಲದಂತೆ ಮಾಡುವ ಪಣ ತೊಟ್ಟಿದ್ದಾರೆ. ತಾನೇ ಪಿ ಕ್ಯಾಂಡಿಡೇಟಾಗಬೇಕೆಂದು ಹಿಂದಿ ಮೇಸ್ಟ್ರನ್ನ ಯಲ್ಲಿಟ್ಟುಕೊಂಡು ಹಿಂದಿ ಕಲಿತಿದ್ದ ರವಿಗೆ ಈಗ ಶವೇ ತಲೆ ಮೇಲೆ ಬಿದ್ದಂತಾಗಿದೆ. ಅಕಟಕಟಾ... ಹಿತಶತ್ರು ಯಡ್ಡಿ ಪರಿವಾರಿಣಿ ಶೋಭಾ ಗೆದ್ದರೆ ಉಳಿಗಾಲ ಉಂಟಾ? ಎಂತಾ ಅಲವತ್ತುಕೊಳ್ಳು ರೆ. ಆದರೆ ರವಿಯ ವೈರಿ ಶೃಂಗೇರಿ ಶಾಸಕ ಜೀವರಾಜ್ ತ್ರ ಶೋಭಾ ಪರ ನಿಂತಿದ್ದಾರೆ. ಕಾರ್ಕಳದ ಭಜರಂಗಿ ಹ ಸುನಿಲ್ ಕುಮಾರ್‌ಗೆ ಸಿ.ಟಿ. ರವಿ ಆತ್ಮೀಯ . ಹೀಗಾಗಿ ಆತನೂ ಶೋಭಾ ವಿರೋಧಿ. ಕಾರ್ಕಳ- ಮಗಳೂರಲ್ಲಿ ಶೋಭಕ್ಕನ ಮತ ಬುಟ್ಟಿ ಖೋತಾ ಡಲು ಈ ದೋಸ್ತಿಗಳು ರಹಸ್ಯ ಕಾರ್ಯಾಚರಣೆಗೆ ಹಾಕಿರುವ ಸುದ್ದಿ ಬಿಜೆಪಿ ಬಿಡಾರದಲ್ಲಿ ಗಿರಕಿ ಡೆಯುತ್ತಿದೆ. ತರಿಕೆರೆಯಲ್ಲಿರುವುದು ಕಾಂಗ್ರೆಸ್ ಶಾಸಕ. ಬಿಜೆಪಿ ಒಲವು ಅಷ್ಟಿಲ್ಲ.

ಹಾಗೆ ಘಟ್ಟ ಇಳಿದು ಅರಬ್ಬೀ ಸಮುದ್ರದ ಗುಂಟ ಹಾಕಿದರೆ, ಸಿಗುವ ಕುಂದಾಪುರದಲ್ಲಿ ಬಿಜೆಪಿಯಿಂದ ಮ ಪಕ್ಷೇತರ ಶಾಸಕನಾಗಿರುವವರು ಹಾಲಾಡಿ ಶ್ರೀನಿವಾಸ . ಈತನ ಮನೆಗೇ ಹೋಗಿ ಕಾಲಿಗೆರಗಿದ ಶೋಭಕ್ಕನನ್ನು ಬರಿಗೈಲಿ ಕಳಿಸಿದ್ದಾರೆ. ಹಾಲಾಡಿ ಮತ್ತು ಕಾಂಗ್ರೆಸ್ ಡಿಡೇಟ್ ಜಯಪ್ರಕಾಶ್ ಹೆಗ್ಡೆ ಚಿಕ್ಕಮ್ಮ-ದೊಡ್ಡಮ್ಮನ ಕ್ಕಳು. ಹೀಗಾಗಿ ಈ ಬಾರಿ ತಾನು ತಟಸ್ಥ; ತನ್ನನ್ನು ರುವುದು ಪಕ್ಷೇತರನಾಗಿ. ತಾನು ಯಾರಿಗೂ ಬೆಂಬಲಿಸ - ಎನ್ನುತ್ತಿದ್ದಾರೆ ಹಾಲಾಡಿ. ಆದರೆ ಹಾಲಾಡಿಯ ಈ ರ್ಣಾರ ಶೋಭಕ್ಕನಿಗೆ ತೊಂದರೆ ಕೊಡಲಿದೆ; ಕಾಂಗ್ರೆಸ್‌ನ ಗೆ ಕುಂದಾಪುರದಲ್ಲಿ ದಂಡಿಯಾಗಿ ಓಟು ತರಲಿದೆ; ಡುಪಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ್ಮಲ್ಲೆಯಾದರೆ ಕಾಪು ಮಂತ್ರಿ ಸೊರಕೆ ಕ್ಷೇತ್ರ.

ಸೊರಕೆಗೆ ಜಯಪ್ರಕಾಶ್ ಹೆಗ್ಡೆ ಕಂಡರಾಗದು. ಹಾಗಂತ ೋದ್ ಮಧ್ವರಾಜ್‌ಗೆ ಹೆಗ್ಡೆಯನ್ನು ವಿರೋಧಿಸಲು ವಿಲ್ಲ, ಮಂತ್ರಿಯಾಗಲು ತನಗೆ ತೊಂದರೆ ಕೊಟ್ಟು ದೂರಿನ ಗೋಪಾಲ ಪೂಜಾರಿ ಪರ ಲಾಬಿ ಹೆಗ್ಡೆ ಡಿದ್ದರೆಂಬ ಸಿಟ್ಟು ಸೊರಕೆಗಿದೆ. ಆದರೆ ಕೆಲಸಗಾರ- ಬಳಕೆಯ ಸರಳ-ಸಜ್ಜನನೆಂಬ ಹೆಗ್ಡೆ ಇಮೇಜು ರಕೆಯ ಆತನ ವಿರೋಧಿಸದಂತೆ ಮಾಡಲಿದೆ. ಹಾಗೆಯೇ ್ರಾ ಮಂತ್ರಿ ಸೊರಕೆ ಅನಿವಾರ್ಯವಾಗಿ ಪಕ್ಷದ ರಿಯಾಳಿನ ಪರ ಕೆಲಸ ಮಾಡಲೇಬೇಕಾದಂಥ ಇಕ್ಕಟ್ಟಿದೆ. ್ಮಾತ್ ಸೊರಕೆ ಬಲ್ಲವರ ಮತ ಹೆಗ್ಡೆಗೆ ಬರದಂತೆ ಡಿದರೂ ಅಂಥ ದೊಡ್ಡ ಹಾನಿಯೇನೂ ಆಗದು. ಗಾಯ್ತಿಂದಲೂ ಕರಾವಳಿಯಲ್ಲಿ ಬಂಟರು ಮತ್ತು ಾವರು ಪರಂಪರಾಗತ ವಿರೋಧಿಗಳು.

ಜೆಡಿಎಸ್‌ನಿಂದ ಮಾಜಿ ಯಡ್ಡಿ ಬಂಟ-ಹೊಲಸು ಲಗೆಯ ಕೊಳಕು ಶೃಂಗಾರಿ ಧನಂಜಯ್‌ಕುಮಾರ್ ರಾದಕ್ಕೆ ಧುಮುಕಿದ್ದಾರೆ. ಈತ ಸ್ವ-ಜಾತಿ (ಜೈನ) ಜಪೂತ ವೀರೇಂದ್ರ ಹೆಗ್ಗಡೆಯ 'ಬಲ' ನಂಬಿದ್ದಾನೆಯೇ ಹೊರತು ದೇವೇಗೌಡ-ಕುಮಾರಣ್ಣರ ಶಕ್ತಿಯನ್ನಲ್ಲ. ಕರಾವಳಿ-ಮಲೆನಾಡಲ್ಲಿ ಇರುವ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳು, ಸ್ವ-ಸಹಾಯ ಸಂಘಗಳು ತನ್ನ ಪರ ರಹಸ್ಯ ಪ್ರಚಾರ ಮಾಡಿ ಗೆಲ್ಲಿಸುತ್ತದೆಂಬ ಭ್ರಮೆ ಧನಂಜಯ್‌ಗೆ. ಆದರೆ ಇಡೀ ಕ್ಷೇತ್ರದ ಜನ ಮಾತ್ರ ಈ ಎಡಬಿಡಂಗಿಯನ್ನು ಹತ್ತಿರ ಸೇರಿಸಿಕೊಳ್ಳುತ್ತಿಲ್ಲ. ಏನೇ ಇರಲಿ, ದಗಲುಬಾಜಿ ಧನಂಜಯ್ ಬಲಗೊಂಡಂತೆ ತನ್ನ ಕೆಜೆಪಿ ಸಹಪಾಠಿಣಿ ಶೋಭಾಗೇ ಖತರಾ! ಕರಾವಳಿ-ಮಲೆನಾಡು ಎರಡೂ ಕಡೆ ನೆಲೆ-ಬೆಲೆಯಿಲ್ಲದ ಈ ವಲಸಿಗ ಚುನಾವಣೆ ಸರ್ಕಸ್‌ನಲ್ಲಿ ಬಫೂನ್‌ನಂತೆ ಎಂಟ್ರಿಯಾಗಿ ಮನರಂಜನೆ ಕೊಡುತ್ತಿದ್ದಾನೆ.

ಪಿಚ್‌ನಲ್ಲಿರುವ ಪಟುಗಳಲ್ಲಿ ಸಂಸದರಾಗುವ ಅರ್ಹತೆ-ಯೋಗ್ಯತೆಯಿರುವುದು ಕಾಂಗ್ರೆಸ್‌ನ ಕೆ. ಜಯಪ್ರಕಾಶ್ ಹೆಗ್ಡೆ ಒಬ್ಬರಿಗೇ. ಆತ ಪಳಗಿದ ಪಾರ್ಲಿಮೆಂಟರಿಯನ್. ತನ್ನ ಕ್ಷೇತ್ರದ ಬೇಕು-ಬೇಡಗಳ ಬಗ್ಗೆ ಕಾಳಜಿ-ನಿಷ್ಠೆ-ಬದ್ಧತೆ-ಪ್ರಾಮಾಣಿಕತೆಯಿಂದ ಹೋಮ್‌ವರ್ಕ್ ಮಾಡಿ ಸಾಧಿಸುವ ಛಲಗಾರ. ಶಾಸಕ-ಮಂತ್ರಿಯಾಗಿದ್ದಾಗ ತಾನೆಂಥ ಜನಪರ ಯೋಜನೆಯ ರಾಜಕಾರಣಿ ಎಂಬುದನ್ನು ನಿರೂಪಿಸಿ ಕೊಂಡಿದ್ದ ಜೆಪಿ ಸಂಸದನಾಗಿ ಸಿಕ್ಕ ಎರಡು ವರ್ಷವನ್ನು ಸಮರ್ಥವಾಗಿ ಜನ ಹಿತಕ್ಕೆ ಬಳಸಿದ್ದಾರೆ. ಮಲೆನಾಡಿನ ಕೆಲವು ರೈಲು ಯೋಜನೆ, ಅಡಿಕೆ ಬೆಳೆಗಾರರ ಆತಂಕ ನಿಭಾಯಿಸಿ ಭರವಸೆ ಮೂಡಿಸಿದ ಜೆಪಿ ಕರಾವಳಿ ಪ್ರದೇಶದಲ್ಲೂ ಹಲವು ಕೆಲಸ-ಕಾಮಗಾರಿ ಮಾಡಿದ್ದಾರೆ. ಜನಸಂಪರ್ಕದಲ್ಲಿ ಆತ ಇತರ ಜನಪ್ರತಿನಿಧಿಗಳಿಗೆ ಆದರ್ಶ. ಜನರ ಕೈಗೆ ಸುಲಭವಾಗಿ ಸಿಗುವ ಈ ಸರಳ-ಸಜ್ಜನ ದೂರದೃಷ್ಟಿಯ ರಾಜಕಾರಣಿ, ದಣಿವರಿಯದ ಕೆಲಸಗಾರ. ಸದಾ ಕ್ಷೇತ್ರವನ್ನು ಸುತ್ತುಹೊಡೆವ ಹೆಗ್ಡೆಗೆ ಮತ್ತೊಂದು ಛಾನ್ಸ್ ಕೊಡಲು ಮತದಾರರು ತೀರ್ಮಾನಿಸಿದ್ದಾರೆ!! ಒಂದಂತೂ ಖರೆ. ಉಡುಪಿ-ಚಿಕ್ಕಮಗಳೂರಲ್ಲಿ ಮೋದಿ ಅಲೆಯಿಲ್ಲ; ಜೆಪಿ ಹವಾ ಇದೆ.

ಉತ್ತರ ಕನ್ನಡ: ನಾಯ್ಕ್ ನಗಾರಿ ಸದ್ದು!!

ಚಿತ್ರ-ವಿಚಿತ್ರ ಕುತೂಹಲ ಕೆರಳಿಸಿದ್ದ ಉತ್ತರ ಕನ್ನಡ ಕಾಂಗ್ರೆಸ್ ಟಿಕೆಟ್ ಕಾಳಗದಲ್ಲಿ ಪ್ರಶಾಂತ ದೇಶಪಾಂಡೆ ಗೆದ್ದಿದ್ದಾನೆ! ಮಂತ್ರಿ ದೇಶಪಾಂಡೆ, ಕೇಂದ್ರ ಮಂತ್ರಿ ಪ್ರಫುಲ್ ಪಟೇಲ್ (ಎನ್‌ಸಿಪಿ) ಮತ್ತು ಆಸ್ಕರ್ ಫರ್ನಾಂಡಿಸ್ ಪ್ರಶಾಂತ್ ಕೈಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದಾರೆ. ಮಂತ್ರಿ ದೇಶಪಾಂಡೆ ಕಾಂಗ್ರೆಸ್ ಅಭ್ಯರ್ಥಿಯ ಹೆತ್ತ ತಂದೆಯಾದರೆ, ಪಟೇಲ್ ಹೆಣ್ಣು ಕೊಟ್ಟ ಮಾವ. ಆಸ್ಕರ್ ಫರ್ನಾಂಡಿಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ನಿವೇದಿತ್ ಆಳ್ವರ ತಾಯಿ ಮಾರ್ಗರೇಟ್ ಆಳ್ವರ ಕಡು ಶತ್ರು. ಇದು ಕ್ರಿಶ್ಚಿಯನ್ ಒಳ ರಾಜಕೀಯ ಬಿಡಿ.

ಪಕ್ಕಾ ಜಾತಿ ಲೆಕ್ಕಾಚಾರದ ಉತ್ತರ ಕನ್ನಡ ಅಖಾಡದಲ್ಲಿ ಹೈಗರ ನಾಲಾಯಕ್ ಮಾಣಿ ಅನಂತ್‌ಕುಮಾರ್ ಹೆಗಡೆ ಬಿಜೆಪಿ ಅಭ್ಯರ್ಥಿ. ಜೆಡಿಎಸ್ ಹುರಿಯಾಳು ಮಾಜಿ ಮಂತ್ರಿ ಶಿವಾನಂದ ನಾಯ್ಕ್ ಎಂಬ ನಿನ್ನೆ-ಮೊನ್ನೆವರೆಗೂ ಕೆಜೆಪಿ-ಬಿಜೆಪಿಯಲ್ಲಿದ್ದ ಬ್ರಾಹ್ಮಣರ ಗರ್ಭಗುಡಿಯ ಬಲಿ ಪಶು. ಈ ನಾಯ್ಕ್‌ಗೆ ಬಿಜೆಪಿಯಲ್ಲಿ ಸತಾಯಿಸಿದ್ದು ಅನಂತ ಕುಮಾರ್-ಕಾಗೇರಿ ವಗೈರೆ ಬ್ರಾಹ್ಮಣರಾದರೆ, ಕಾಂಗ್ರೆಸ್‌ಗೆ ಸೇರದಂತೆ ತಡೆದು ತೊಂದರೆ ಕೊಟ್ಟಿದ್ದು ದೇಶಪಾಂಡೆ ಎಂಬ ಕೊಂಕಣಿ ಬ್ರಾಹ್ಮಣ. ಈ ಎಚ್‌ಬಿ-ಜಿಎಸ್‌ಬಿ ಮೇಲ್ವರ್ಗದ ಠೇಂಕಾರಕ್ಕೆ ಶೂದ್ರ ಶಕ್ತಿ ತೋರಿಸುವ ಇರಾದೆಯಿಂದ ಯುದ್ಧಾಂಗಣಕ್ಕೆ ನಾಯ್ಕ್ ಧುಮುಕಿದ್ದಾರೆ. ಜೆಡಿಎಸ್ ಹಣೆಪಟ್ಟಿ ಕಟ್ಟಿ ಅಶ್ವಮೇಧಕ್ಕೆ ಇಳಿಸಿದೆ.

ಒಂದೊಮ್ಮೆ ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್ ಅಥವಾ ಮಾರ್ಗರೆಟ್ ಆಳ್ವ ಕ್ಯಾಂಡಿಡೇಟಾಗಿದ್ದರೆ ನಾಯ್ಕ್ ಅಖಾಡದಿಂದ ಹಿಂದೆ ಸರಿಯುವುದು ಗ್ಯಾರಂಟಿಯಾಗಿತ್ತು. ಆದರೀಗ ಪಾಳೆಗಾರಿ ಪೊಗರಿನ ದೇಶಪಾಂಡೆಯ ಮಗ ಪ್ರಶಾಂತ್ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾನೆ. ಇದು ನಾಯ್ಕ್ ಪಾಳೆಯದ ರಣೋತ್ಸಾಹವನ್ನು ಹೆಚ್ಚಿಸಿದೆ. ಅಷ್ಟೇ ಅಲ್ಲ ಜಿಲ್ಲೆಯ ಅಬ್ರಾಹ್ಮಣ ಧ್ರುವೀಕರಣ ಮಾಡುವ ಸೂಚನೆ ಬಿತ್ತರಿಸುತ್ತಿದೆ. ದೇಶಪಾಂಡೆ ಹಠದಿಂದ ಮಗನಿಗೆ ಟಿಕೆಟ್ ತಂದಿರುವುದು ಆತನ ಧನಬಲ-ಧಡಪ್‌ಶಾಹಿ ಸಂಕೇತ ದಂತಿದೆ. ಇದು ಕಾಂಗ್ರೆಸ್‌ನಲ್ಲಿನ ನಿಷ್ಠಾವಂತರನ್ನಷ್ಟೇ ಅಲ್ಲ, ಇಡೀ ಕ್ಷೇತ್ರದ ಹಿಂದುಳಿದವರನ್ನು ಕೆಣಕಿದೆ. "ಕಾಂಗ್ರೆಸ್ ಅಪ್ಪಾ-ಮಗನ ಆಸ್ತಿಯಾ...?" ಎಂದು ಜನ ಮಾತಾಡಿ ಕೊಳ್ಳುತ್ತಿದ್ದಾರೆ. ಇದು ಗೆಲ್ಲುವ ಅವಕಾಶವಿದ್ದ ಕಾಂಗ್ರೆಸ್‌ಗೆ ಮುಳುವಾಗಿದೆ.

ಬಿಜೆಪಿ ಕ್ಯಾಂಡಿಡೇಟ್ ಅನಂತ್ಮಾಣಿ ಬಗ್ಗೆ ಜಿಲ್ಲೆಯ ಜನರಿಗೆ ಅದೆಂಥ ಆಕ್ರೋಶ-ಅಸಹ್ಯ ಇದೆಯೋ ಅಂಥದೇ ಬೇಸರ-ಬೇಗುದಿ ದೇಶಪಾಂಡೆಯ ದಾದಾಗಿರಿ ರಾಜಕಾರಣದ ಬಗ್ಗೆ ಇದೆ. ಅನಂತ್ಮಾಣಿ ಪ್ರಚಾರಕ್ಕೆಂದು ಹೋದಲ್ಲೆಲ್ಲ ಜನ "ಛೀ.... ಥೂ...." ಎಂದು ಉಗಿಯುತ್ತಿದ್ದಾರೆ. ಇಷ್ಟು ದಿನ "ನಾಟ್ ರಿಚೇಬಲ್ ಆಗಿದ್ದ ನೀನು ಏಕೆ ಬಂದೆ....? ಸರಿಯಾಗಿ ಸಂಸದ ನಿಧಿ ಬಳಕೆ ಮಾಡದ ರಾಜ್ಯದ 26 ನೇ ನಂಬರ್ ಎಂಪಿ ನೀನು....? ಮತ್ಯಾವ ಭಾಗ್ಯಕ್ಕೆ ನಿಂಗೆ ಓಟು ಕೊಡಬೇಕಪ್ಪಾ...?" ಎಂದು ಜನ ಅನಂತ್ಮಾಣಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಬರೋಬ್ಬರಿ ಹತ್ತು ವರ್ಷ ಪಾರ್ಲಿಮೆಂಟ್‌ನಲ್ಲಿ ನಿದ್ದೆ ಹೊಡೆದ ಅನಂತ್ಮಾಣಿ ಜನರ ಕಂಡಾಗೆಲ್ಲ ಶಿರಸಿಯ ತನ್ನ ಬಂಗಲೆಯ ಬಾಗಿಲು ಹಾಕಿಕೊಂಡು ಅಡಗಿಕೊಳ್ಳುತ್ತಿದ್ದ. ಜನಸಾಮಾನ್ಯರಿರಲಿ ಚೆಡ್ಡಿಗಳೇ ಫೋನ್ ಮಾಡಿದರೂ ಮಾತಾಡುತ್ತಿರಲಿಲ್ಲ. ಹಾಗಂತ ದುಡ್ಡು-ಕಾಸು-ಜಮೀನು-ತೋಟ-ಹೆಂಡತಿಗೆ ಸರ್ಕಾರಿ ಸಂಬಳ ಬರುವ ಎಂಪಿ ಪಿಎಗಿರಿ.... ಎಲ್ಲ ಮಜಬೂತಾಗಿ ಮಾಡಿಕೊಂಡಿದ್ದಾನೆ.

ಭಟ್ಕಳದಿಂದ ಬೆಳಗಾವಿಯ ಖಾನಾಪುರ-ಕಿತ್ತೂರು ತನಕ ಅನಂತ್ಮಾಣಿ ವಿರುದ್ಧ ಚಂಡಮಾರುತವೇ ಎದ್ದಿದೆ. ಈ ಚಂಡಮಾರುತ ದಿನದಿಂದ ದಿನಕ್ಕೆ ಆತನನ್ನು ಹೈರಾಣಾಗಿ ಸುತ್ತಿದೆ. ಆತ ಗೆಲ್ಲುವ ಛಾನ್ಸೇ ಇಲ್ಲವೆಂದು ಜಿಲ್ಲೆಯಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ. ಈಗ ಏನಿದ್ದರೂ ಜೆಡಿಎಸ್‌ನ ಶಿವಾನಂದ ನಾಯ್ಕ್ ಮತ್ತು ಕಾಂಗ್ರೆಸ್‌ನ ಪ್ರಶಾಂತ ದೇಶಪಾಂಡೆ ನಡುವೆ ಜಿದ್ದಾಜಿದ್ದಿ ನಡೆಯಲಿದೆ. ಇದು ಬ್ರಾಹ್ಮಣ V/s ಅಬ್ರಾಹ್ಮಣ ಧರ್ಮಯುದ್ಧ ಆಗಲಿದೆ ಯೆಂದು ವ್ಯಾಖ್ಯಾನಿಸಲಾಗುತ್ತಿದೆ. ದೇಶಪಾಂಡೆಯ ಫ್ಯೂಡಲ್ ಠೇಂಕಾರ-ಹಿಂದುಳಿದವರ ತುಳಿದು ಸ್ವಜಾತಿ ಬಾಂಧವರ ಮತ್ತು ಮೇಲ್ವರ್ಗದವರ ಕೊಬ್ಬಿಸುವ ರಾಜಕಾರಣ, ಅಬ್ರಾಹ್ಮಣರ ಆತ್ಮಗೌರವ ಕೆರಳಿಸಿದೆ. ಹಿಂದುಳಿದವರು ದೇಶಪಾಂಡೆಗೆ ತಿರುಗಿ ಬಿದ್ದಿದ್ದಾರೆ.

ಇದು ಸಹಜವಾಗೇ ಶೂದ್ರ ಶಿವಾನಂದ ನಾಯ್ಕ್‌ನನ್ನು ಪ್ರಬಲ ಪ್ರತಿಸ್ಪರ್ಧಿಯಾಗಿ ರೂಪಿಸಿಬಿಟ್ಟಿದೆ. ಜೆಡಿಎಸ್‌ಗೆ ಜಿಲ್ಲೆಯಲ್ಲಿ ಅನುಕೂಲಕರ ವಾತಾವರಣವೂ ಈ ಬಾರಿ ತಯಾರಾಗಿದೆ. ಭಟ್ಕಳ-ಶಿರಸಿ-ಸಿದ್ದಾಪುರ-ಕುಮಟಾದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ದೀವರು (ಈಡಿಗರು) ಸ್ವಜಾತಿ ಕುಡಿ ಶಿವಾನಂದ ನಾಯ್ಕಗೆ ಮತ ಹಾಕೋದು ಖಂಡಿತ. ಹಾಗೆಯೇ ಇತರ ಹಿಂದುಳಿದವರೂ ಬಿಜೆಪಿ-ಕಾಂಗ್ರೆಸ್‌ನ ಭ್ರಷ್ಟ-ದುಷ್ಟ ವಂಶಪಾರಂಪರ್ಯ ರಾಜಕಾರಣದಿಂದ ಬೇಸತ್ತು ಜೆಡಿಎಸ್‌ನತ್ತ ವಾಲುತ್ತಿದ್ದಾರೆ. ದೇಶಪಾಂಡೆ-ಅನಂತ್ಮಾಣಿ ಎಂದೂ ಅಬ್ರಾಹ್ಮಣರ ಹಿತ ಚಿಂತಿಸಿದವರಲ್ಲ, ಮುಂದೆಯೂ ಅದವರಿಂದ ಸಾಧ್ಯವೇ ಇಲ್ಲ. ಈ ಭಾವನೆ ಶಿವಾನಂದ ನಾಯ್ಕ್‌ಗೆ ವರವಾಗಲಿದೆ. ಜೆಡಿಎಸ್ ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಭಟ್ಕಳ-ಕುಮಟಾ-ಹಳಿಯಾಳ ಮತ್ತು ಶಿರಸಿಯಲ್ಲಿ ಸಣ್ಣ ಅಂತರದಲ್ಲಿ ಸೋತಿದೆ. ಹಳಿಯಾಳ-ಖಾನಾಪುರ-ಕಿತ್ತೂರಲ್ಲಿನ ಮರಾಠರು ದೇಶಪಾಂಡೆ ಬಗ್ಗೆ ಬೇಜಾರಲ್ಲಿದ್ದಾರೆ. ಅಲ್ಲಿ ಜೆಡಿಎಸ್‌ನ ರಾಜ್ಯ ಕಾರ್ಯಾಧ್ಯಕ್ಷ ಮಾಜಿ ಶಾಸಕ-ಸುನಿಲ್ ಹೆಗ್ಡೆ ಮತ್ತವನ ತಂದೆ ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆ ಬಗ್ಗೆ ಒಲವಿದೆ.

ಖಾನಾಪುರ-ಕಿತ್ತೂರು-ಕಾರವಾರ-ಯಲ್ಲಾಪುರ ಭಾಗದಲ್ಲಿ ಶಿವನಂದ ನಾಯ್ಕ್ ಒಂಚೂರು ಚೇತರಿಸಿಕೊಂಡರೆ ದೇಶಪಾಂಡೆಯ ಫ್ಯೂಡಲ್ ಸೊಕ್ಕು ಅಡಗಿಸುವುದೇನೂ ಕಷ್ಟವಲ್ಲ. ಆದರೂ ದೇಶಪಾಂಡೆ ಪಳಗಿದ ಹಳೇ ಹಿಕಮತ್ತುಗಾರ. ಹಣವಂತೂ ಕೋಟಿ-ಕೋಟಿ ಲೆಕ್ಕದಲ್ಲಿದೆ. ಆತ ವಂಶೋದ್ಧಾರಕತನನ್ನು ದಿಲ್ಲಿ ವಿಮಾನ ಹತ್ತಿಸಲು ತನ್ನೆಲ್ಲ ಕಪ್ಪುಹಣ, ಸಾಮ-ಭೇದ-ದಂಡ ತಂತ್ರ ಬಳಸದೇ ಬಿಡಲಾರ. ಈ ತ್ರಿಕೋನ ಕಾಳಗದಲ್ಲಿ ಹವ್ಯಕ ಅನಂತ್ಮಾಣಿ ಮೇಲೆ ಬೇಸತ್ತಿರುವ ಹವ್ಯಕ ಬ್ರಾಹ್ಮಣರು ಶೂದ್ರ ನಾಯ್ಕಗಿಂತ ಕೊಂಕಣಿ ಬ್ರಾಹ್ಮಣ ಪ್ರಶಾಂತ್ ದೇಶಪಾಂಡೆಯೇ ಆದೀತೆಂದು ತೀರ್ಮಾನಿಸುವ ಅಪಾಯವೂ ಇದೆ. ಪ್ರತಿ ಚುನಾವಣೆಯಲ್ಲಿ ಪಕ್ಷದ್ರೋಹ ಮಾಡಿ ಅನಂತ್ಮಾಣಿ ನೆರವಾಗುತ್ತಿದ್ದ ದೇಶಪಾಂಡೆ ಈ ಬಾರಿ ಮಗನ ಪಟ್ಟಾಭಿಷೇಕಕ್ಕೆ ಮಾಣಿಯನ್ನು ಬಲಿ ಪಡೆಯಲೇಬೇಕಾಗಿದೆ.

ಏನೇ ಇರಲಿ. ಉತ್ತರ ಕನ್ನಡದಲ್ಲಿ ನಿರ್ಣಾಯಕ ಬ್ರಾಹ್ಮಣV/s ಅಬ್ರಾಹ್ಮಣ ಸಮರ ಈ ಬಾರಿ ಜಿದ್ದಾಜಿದ್ದಿಯಿಂದ ನಡೆಯುವುದಂತೂ ಖರೆ!

■ ನಹುಷ

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rule, 1956.

FORM - IV

(See Rule 8)


1. Place of Publication	:	Bangalore
2. Periodicity of Publication	:	Weekly
3. Printer's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.
4. Publisher's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.
5. Editor's Name	:	Gauri Lankesh
Whether Citizen of India	:	Yes
Address	:	No. 9, E.A.T. Street, Basavanagudi, Bangalore-560 004.

I, Gauri Lankesh, hereby declare that the particulars given above are true to the best of my knowledge and belief.

Date: 20.3.2014

Sd/-
GAURI LANKESH

ಮೈಸೂರು-ಕೊಡಗು: ಬಿಜೆಪಿಯ ಸಿಂಹನನ್ನು ಕಂಡು ನಿರಾಳರಾದ ವಿಶ್ವನಾಥ್!



ಕರ್ನಾಟಕದ ಲೋಕಸಭಾ ಕ್ಷೇತ್ರಗಳಲ್ಲಿ ಅತ್ಯಂತ ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಒಂದು ಮೈಸೂರು-ಕೊಡಗು ಕ್ಷೇತ್ರ. ಇನ್ನುಳಿದಂತೆ ಶಿವಮೊಗ್ಗ ಮತ್ತು ಚಿಕ್ಕಬಳ್ಳಾಪುರ ಕೂಡ ಪ್ರತಿಷ್ಠೆಯ ಕ್ಷೇತ್ರಗಳೇ. ಜನತೆಯ ಕಣ್ಣೆಲ್ಲಾ ಈ ಕ್ಷೇತ್ರಗಳ ಮೇಲೆ ನೆಟ್ಟಿರುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಮೈಸೂರು. ಇಲ್ಲಿ ಸಿದ್ದರಾಮಯ್ಯನವರಿಗೆ ಹೊಡೆತ ನೀಡಲು ಎಲ್ಲಾ ಪಕ್ಷಗಳು ಪ್ರಯತ್ನಿಸುವುದರಿಂದ ಈ ಕ್ಷೇತ್ರ ಚುನಾವಣೆಯ ಕಾವು ಏರುತ್ತಿರುವಂತೆ ರಂಗೇರುತ್ತದೆ. ಕಾಂಗ್ರೆಸ್ ಪಕ್ಷ 'ಹಳ್ಳಿಯ ಹಕ್ಕಿ' ವಿಶ್ವನಾಥ್‌ರಿಗೆ ಬಿಜೆಪಿಯಿಂದ ಪ್ರತಿಸ್ಪರ್ಧಿಯಾಗಿರುವವರು ಪತ್ರಿಕಾ ಅಂಕಣಕಾರ ಪ್ರತಾಪ ಸಿಂಹ. ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಯವರೆಗೂ ಜೆ.ಡಿ.ಎಸ್.ನ ಅಭ್ಯರ್ಥಿ ಯಾರು ಎಂಬುದು ಬಹಿರಂಗಗೊಂಡಿಲ್ಲ. ಈ ಹಂತದಲ್ಲಿ ಇಲ್ಲಿನ ಚಿತ್ರಣವನ್ನು ನೀಡುವುದು ಕಷ್ಟದ ವಿಚಾರವಾದರೂ, ಹಾಲಿ ಪರಿಸ್ಥಿತಿಯಲ್ಲಿ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಪೈಪೋಟಿ ಇರುತ್ತದೆ ಎಂಬ ಭಾವನೆ ಇದೆ. ಯಾವುದೇ ಕಾರಣಕ್ಕೂ ತ್ರಿಕೋನ ಸ್ಪರ್ಧೆ ಕಷ್ಟ.

ದೇವೇಗೌಡರಿಗೆ ಹಾಸನದಲ್ಲಿ ತಾನು ಗೆಲ್ಲುವುದು ಹೇಗೆ ಮುಖ್ಯವೋ, ಅದೇ ರೀತಿಯಲ್ಲಿ ಮೈಸೂರಿನಲ್ಲಿ ಕಾಂಗ್ರೆಸ್‌ಅನ್ನು ಸೋಲಿಸುವುದು ಕೂಡ ಅವರ ಪರಮಗುರಿಯಾಗಿರುತ್ತದೆ. ಒಂದು ಕಡೆ ತಮ್ಮ ಕಡು ವೈರಿ ಸಿದ್ದರಾಮಯ್ಯ, ಮತ್ತೊಂದು ಕಡೆ ತಮ್ಮನ್ನು ಯಾವಾಗಲೂ ಟೀಕಿಸುವ ವಿಶ್ವನಾಥ್. ವಿಶ್ವನಾಥ್‌ರನ್ನು ಸೋಲಿಸಿದರೆ ಒಂದೇ ಪೆಟ್ಟಿಗೆ ಎರಡು ಹಕ್ಕಿಗಳು ಉರುಳುತ್ತದೆ ಎಂಬ ಲೆಕ್ಕಾಚಾರ. ಹಾಗಾಗಿ ಕಾಂಗ್ರೆಸ್ ಜೊತೆ ಮುನಿಸಿಕೊಂಡಿರುವ ಜಾಫರ್ ಶರೀಫ್‌ರನ್ನು ಕರೆ ತಂದು ಅಲ್ಪಸಂಖ್ಯಾತರ ಮತಗಳನ್ನು ಛಿದ್ರ ಮಾಡಿ, ಸಿದ್ದರಾಮಯ್ಯನವರಿಗೆ ಪೆಟ್ಟು ಕೊಡುವ ಅಂದಾಜು ದೇವೇಗೌಡರದ್ದು. ಏನೇ ಸರ್ಕಸ್ ಮಾಡಿದರೂ ಜಾಫರ್ ಶರೀಫ್ ಮೈಸೂರಿನಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂಬುದು ದೇವೇಗೌಡರಿಗೆ ಎಲ್ಲರಿಗಿಂತ ಸ್ಪಷ್ಟವಾಗಿ ಗೊತ್ತಿದೆ. ಆದರೆ ಅವರ ಉದ್ದೇಶ ತಮ್ಮ ಅಭ್ಯರ್ಥಿ ಗೆಲ್ಲುವುದು ಅಲ್ಲ, ಒಂದು ವೇಳೆ ಶರೀಫ್ ತಮ್ಮ ತೆಕ್ಕೆಗೆ ಬಾರದಿದ್ದರೆ, ಮಲ್ಲಿಕಾರ್ಜುನಯ್ಯನವರನ್ನು ಕಣಕ್ಕೆ ಇಳಿಸುವ ಮೂಲಕ ತಮ್ಮ ಒಕ್ಕಲಿಗ ಪರವಾದ ಮತ ಮತ್ತು ಲಿಂಗಾಯತ ಮತಗಳನ್ನು ತಮ್ಮ ಅಭ್ಯರ್ಥಿಗೆ ಕೊಡಿಸುವ ವಿಚಾರ ದೇವೇಗೌಡರದ್ದು. ಕುಮಾರಸ್ವಾಮಿ ಬಹುತೇಕ ಚಿಕ್ಕಬಳ್ಳಾಪುರದಿಂದ ಸ್ಪರ್ಧಿಸುವ ಸಾಧ್ಯತೆ ಇರುವುದರಿಂದ ಅಲ್ಲಿ ಮೊಯ್ಲಿಯ ಪ್ರಭಾವದ ಎದುರು ಪೈಪೋಟಿ ನೀಡಬೇಕಾದರೆ, ಅಪ್ಪ ಮಗ ಇಬ್ಬರೂ ಆ ಕ್ಷೇತ್ರದಲ್ಲಿಯೇ ಹೆಚ್ಚು ಸಮಯ ಕಳೆಯಬೇಕಾಗಬಹುದು. ಹಾಗಾಗಿ ಮೈಸೂರು ಕ್ಷೇತ್ರ ಅವರು ಬಯಸಿದಂತೆ ಫಲಿತಾಂಶ ತರಲು ಅವರಿಗೆ ಸಾಧ್ಯವಾಗದಿರಬಹುದು.


ಇವುಗಳೆಲ್ಲದರ ನಡುವೆ ಪ್ರತಾಪ ಸಿಂಹ ಬಿಜೆಪಿಯ ಅಧಿಕೃತ ಅಭ್ಯರ್ಥಿ ಎಂದು ಘೋಷಣೆ ಆಗುತ್ತಿದ್ದಂತೆ ನೆಮ್ಮದಿಯ ನಿಟ್ಟುಸಿರು ಬಿಟ್ಟವರು ವಿಶ್ವನಾಥ್. ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಅಭ್ಯರ್ಥಿಯಾಗಿದ್ದರೆ, ವಿಶ್ವನಾಥರು ಬಹಳ ಕಷ್ಟಪಡಬೇಕಾದಂತಹ ಪರಿಸ್ಥಿತಿ ಇತ್ತು. ಆದರೆ ಪ್ರತಾಪ ಸಿಂಹ ಎಂಬ ಅಭ್ಯರ್ಥಿ ಆಯ್ಕೆಯಾದ ಕೂಡಲೇ ವಿಶ್ವನಾಥ್ ನಿರಾಳರಾದರು. ಪ್ರತಾಪ ಸಿಂಹ ಯಾರು ಎಂಬುದು ಯಾರಿಗೂ ತಿಳಿದಿಲ್ಲ, ಸ್ವತಃ ಬಿಜೆಪಿಯವರಿಗೂ ತಿಳಿದಿಲ್ಲ. ಪ್ರತಾಪ ಸಿಂಹ ಓರ್ವ ಅಂಕಣಕಾರ ಎಂಬುದು ಆತ ಕೆಲಸ ಮಾಡುತ್ತಿದ್ದ ಪತ್ರಿಕೆಯ ಸೀಮಿತ ಓದುವವರಿಗೆ ಮಾತ್ರ ತಿಳಿದಿದೆಯೇ ವಿನಹ, ಬೇರೆ ಯಾರಿಗೂ ತಿಳಿದಿಲ್ಲ. ಆ ಪತ್ರಿಕೆಯನ್ನು ಓದುವವರು ಎಷ್ಟು ಜನ, ಅದರಲ್ಲೂ ಆತ ಬರೆಯುತ್ತಿದ್ದ ಅಂಕಣವನ್ನು ಓದುವವರು ಎಷ್ಟು ಜನ ಎಂಬುದೇ ಈಗ ಪ್ರಮುಖ ಪ್ರಶ್ನೆ. ಜೊತೆಗೆ ಓದಿದ ಈ ಅಂಕಣವನ್ನು ಎಷ್ಟು ಜನ ಒಪ್ಪುತ್ತಾರೆ ಎಂಬುದು ಕೂಡ ಚರ್ಚೆಯ ವಿಚಾರ. ಪ್ರತಾಪ ಸಿಂಹ ನರೇಂದ್ರ ಮೋದಿಯವರ ನೇರ ಅಭ್ಯರ್ಥಿ ಎಂಬ ಪ್ರಚಾರವಿದೆ. ಅಂಕಣಕಾರರಾದ ಸಿಂಹ, ಮೋದಿಯ ಬಗ್ಗೆ ಒಂದು ಕೃತಿಯನ್ನು ಬರೆದ ಕಾರಣಕ್ಕಾಗಿ ನೀಡಿದ ಕೊಡುಗೆ ಇದು ಎಂಬುದು ಬಿಜೆಪಿಯವರ ಅನಿಸಿಕೆ.

ಚುನಾವಣೆ ದಿನದಿಂದ ದಿನಕ್ಕೆ ತನ್ನ ಸ್ವರೂಪವನ್ನು ಬದಲಿಸುತ್ತಾ ಇರುತ್ತದೆ. ಚುನಾವಣೆ ಘೋಷಣೆಯಾಗುವ ಮುನ್ನ ವಿಶ್ವನಾಥರಿಗೆ ಬಹಳ ಕಷ್ಟದ ಪರಿಸ್ಥಿತಿ ಎಂದು ಇದ್ದದ್ದು, ಈಗ ವಿಶ್ವನಾಥರೇ ಗೆಲ್ಲಬಲ್ಲ ವ್ಯಕ್ತಿ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಚುನಾವಣೆಯಲ್ಲಿ ಈಗ ಯಾವುದೇ ರಾಷ್ಟ್ರೀಯ ವಿಚಾರಗಳಾಗಲಿ, ರಾಜ್ಯ ವಿಚಾರಗಳಾಗಲಿ ಚರ್ಚೆಯಲ್ಲಿ ಇಲ್ಲ. ಇರುವುದು ಕೇವಲ ಮೋದಿ ಮತ್ತು ಮೋದಿಯ ವಿರೋಧ. ಬಿಜೆಪಿ ಪಕ್ಷವನ್ನು ಕೇಸರಿ ಬಣದವರು ಮೋದಿಗೆ ಅಡ ಇಟ್ಟಿರುವುದರಿಂದ ಪೈಪೋಟಿ ರಾಜಕೀಯ ಪಕ್ಷಗಳ ನಡುವೆ ಇಲ್ಲ, ಬಿಜೆಪಿಯು ಸಂವಿಧಾನಬಾಹಿರವಾಗಿ ತನ್ನ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಎಂದು ಘೋಷಿಸಿದ ನಂತರ ಈಗ ಮೋದಿ ಪ್ರಧಾನಿಯಾಗಬೇಕೋ ಅಥವಾ ಬೇಡವೋ ಎನ್ನುವುದಷ್ಟೇ ಚುನಾವಣೆಯ ಚರ್ಚೆಯ ವಿಚಾರವಾಗಿ ರೂಪುಗೊಂಡಿದೆ. ಹಾಗಾಗಿ ಪ್ರಧಾನಿ ಅಭ್ಯರ್ಥಿಯನ್ನು ಸೋಲಿಸಬೇಕಾದರೆ ಯಾರನ್ನು ಆಯ್ಕೆ ಮಾಡಬೇಕು ಮತ್ತು ಗೆಲ್ಲಿಸಬೇಕಾದರೆ ಪ್ರತಾಪ ಸಿಂಹನನ್ನು ಆಯ್ಕೆ ಮಾಡಬೇಕು ಎನ್ನುವುದಷ್ಟೇ ಈ ಚುನಾವಣೆಯಲ್ಲಿ ಇರುವಂತಹ ವಿಚಾರ.


ರಾಷ್ಟ್ರದಲ್ಲಿ ಮೋದಿಯ ಅಲೆ ಎಲ್ಲಿಯೂ ಕಂಡುಬರುತ್ತಿಲ್ಲ. ಜನಸಾಮಾನ್ಯರ ನಡುವೆ ಅಲೆಯ ವಿಚಾರವಾಗಲಿ, ಚಾಯ್‌ಪೆ ವಿಚಾರವಾಗಲಿ ಚರ್ಚೆಯ ವಿಚಾರವಲ್ಲ. ಇದು ಕೇವಲ ಕಟ್ಟಾ ಚಡ್ಡಿಗಳ ನಡುವೆ ಮತ್ತು ಬಿಜೆಪಿಯಲ್ಲಿ ಇರುವಂತಹ ವಿಚಾರ. ಉಳಿದಂತೆ ಯಾರೂ ಈ ಬಗ್ಗೆ ಚರ್ಚಿಸುವುದಿಲ್ಲ. ಕೊಡಗು-ಮೈಸೂರು ಕ್ಷೇತ್ರದಲ್ಲಂತೂ ಯಾವ ಮೋದಿ ಅಲೆಯೂ ಇಲ್ಲ, ಬಿಜೆಪಿ ಅಲೆಯೂ ಇಲ್ಲ, ಎಲ್ಲಿಯೋ ಕೇಳಿಬರುತ್ತಿದ್ದ ಮೋದಿ ಅಲೆಯ ಕೂಗು ಆಮ್ ಆದ್ಮಿಯವರು ಲಕ್ನೋದಲ್ಲಿ ಬಿಜೆಪಿ ಕಚೇರಿಗೆ ನುಗ್ಗಿ ಹೊಡೆದಾಗ ಮಾಯವಾಯಿತು.

ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಕೊಡಗಿನ ಎರಡು ಕ್ಷೇತ್ರಗಳು ಮಾತ್ರ ಬಿಜೆಪಿಯ ಕೈಯಲ್ಲಿ ಇದೆ. ಐದು ಕ್ಷೇತ್ರಗಳು ಕಾಂಗ್ರೆಸ್ ಕೈಯಲ್ಲಿದ್ದರೆ, ಒಂದು ಕ್ಷೇತ್ರ ಜೆ.ಡಿ.ಎಸ್.ನ ಜಿ.ಟಿ. ದೇವೇಗೌಡರ ಕೈಯಲ್ಲಿ ಇದೆ. ಮೈಸೂರು ಜಿಲ್ಲೆಯು ಕಾಂಗ್ರೆಸಿನ ಘಟಾನುಘಟಿಗಳಾದ ಸಿದ್ದರಾಮಯ್ಯ, ಶ್ರೀನಿವಾಸ್ ಪ್ರಸಾದ್, ಡಾ. ಮಹದೇವಪ್ಪ ಇವರುಗಳ ತವರು. ಹಾಗಾಗಿ ಅವರೆಲ್ಲರಿಗೂ ಪ್ರತಿಷ್ಠೆ. ಕೊಡಗಿನ ಎರಡೂ ಕ್ಷೇತ್ರಗಳು ಬಿಜೆಪಿ ಕೈಯಲ್ಲಿ ಇದ್ದು, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿಗಳು ಕೂಡ ಬಿಜೆಪಿ ಕೈಯಲ್ಲಿ ಇದೆ. ಆದರೆ ಹಿಂದೆ ಇದ್ದ ಬಿಜೆಪಿ ಒಲವು ಕೊಡಗಿನಲ್ಲಿ ಈಗ ಕಡಿಮೆಯಾಗಿದೆ. ಹಿಂದೆ ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿ ಇತ್ತು. ಹಾಗಾಗಿ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿಗಳು ಬಿಜೆಪಿ ಪಾಲಾಗಿದ್ದವು. ಈಗ ಆ ಸ್ಥಿತಿ ಇಲ್ಲ.



ಕಳೆದ ಬಾರಿ ವಿಶ್ವನಾಥ ಏಳು ಸಾವಿರದಷ್ಟು ಸಣ್ಣ ಮತಗಳ ಅಂತರದಿಂದ ಈ ಕ್ಷೇತ್ರದಲ್ಲಿ ಗೆದ್ದಿದ್ದರು. ಆಗಿನ ಪರಿಸ್ಥಿತಿಯಲ್ಲಿ ಜೆ.ಡಿ.ಎಸ್.ನ ಅಭ್ಯರ್ಥಿಯಾಗಿದ್ದವರು ಬಿ.ಎ. ಜೀವಿಜಯ. ಅವರಿಗೆ ಕೊಡಗಿನಲ್ಲಿ ಹೆಚ್ಚಿನ ಮತ ಲಭಿಸಿತ್ತು. ಹಾಗಾಗಿ ಅವರ ಮತಗಳಿಕೆಯಿಂದ ವಿಶ್ವನಾಥರಿಗೆ ಗೆಲ್ಲಲು ಸಾಧ್ಯವಾಗಿತ್ತು. ಈಗ ಆ ಸ್ಥಿತಿ ಇಲ್ಲ. ಆದರೆ ಪ್ರತಾಪ ಸಿಂಹ ಬಿಜೆಪಿಯ ಅಭ್ಯರ್ಥಿ ಎಂದಾಗಲೇ ಚುನಾವಣೆಯ ದೃಷ್ಟಿಯಿಂದ ಆತನೊಬ್ಬ ಎಡವಟ್ಟು ಅಭ್ಯರ್ಥಿ ಎಂಬುದು ಖಚಿತವಾಗಿತ್ತು. ಜೊತೆಗೆ ವಿಶ್ವನಾಥರಿಗೆ ಬಹುತೇಕ ಚಿನ್ನದ ತಟ್ಟೆಯಲ್ಲಿ ಈ ಕ್ಷೇತ್ರವನ್ನು ಇಟ್ಟುಕೊಟ್ಟಂತೆ ಆಗಿದೆ.

ಕೊಡಗು ಮತ್ತು ಮೈಸೂರಿನಲ್ಲಿ ಭಾರತೀಯ ಜನತಾ ಪಕ್ಷ ಇರುವುದು ವ್ಯಾಪಾರಿಗಳ ಕೈಯಲ್ಲಿ. ಕೊಡಗಿನಲ್ಲಿ ಇತ್ತೀಚೆಗಷ್ಟೇ ಗುಂಡಿನ ಕಾಳಗದಿಂದ ತಪ್ಪಿಸಿಕೊಂಡ ಮಡಿಕೇರಿ ಕ್ಷೇತ್ರದ ಶಾಸಕ ಅಪ್ಪಚ್ಚು ರಂಜನ್‌ರವರ ಸಹೋದರ ಎಲ್ಲಾ ರೀತಿಯ ಉದ್ಯಮಗಳಲ್ಲಿ ಇರುವಂತಹ ಸುಜಾಕುಶಾಲಪ್ಪ ಬಿಜೆಪಿ ಅಧ್ಯಕ್ಷ. ಮತ್ತು ಇನ್ನೋರ್ವ ವ್ಯಾಪಾರಿ ಸಹೋದರ ರಾಜ್ಯ ಸಮಿತಿಯ ಸದಸ್ಯ ಸುನಿಲ್ ಸುಬ್ರಹ್ಮಣಿ ಕೈಯಲ್ಲಿ ಪಕ್ಷವಿದೆ. ಇವರೆಲ್ಲರೂ ದಂಧೆಕೋರರು.



ಅಪ್ಪಚ್ಚು ರಂಜನ್ ಟಿಕೆಟಿಗಾಗಿ ಪ್ರಯತ್ನ ನಡೆಸಿದ ವ್ಯಕ್ತಿ. ಸಹಜವಾಗಿ ತಮಗೆ ಟಿಕೆಟು ದೊರೆಯಲಿಲ್ಲ ಎಂಬ ಕೊರಗು ಅವರಲ್ಲಿ ಇದೆ. ಪ್ರತಾಪ ಸಿಂಹರನ್ನು ವಿರೋಧಿಸಲು ಈ ಕಾರಣ ಅವರಿಗೆ ಸಾಕು. ಆದರೆ ಇದನ್ನೂ ಮೀರಿದ ಲೆಕ್ಕಾಚಾರ ಈ ಸಹೋದರರಲ್ಲಿ ಇದೆ. ಅದೇನೆಂದರೆ, ಕೊಡಗು ಜಿಲ್ಲೆ ತಮ್ಮ ವಶದಲ್ಲಿಯೇ ಇರಬೇಕೆಂಬುದು ಅವರುಗಳ ಬಯಕೆ. ಪ್ರತಾಪ ಸಿಂಹ ಆಯ್ಕೆ ಆದರೆ ಆತ ಖಂಡಿತವಾಗಿಯೂ ತಮ್ಮ ಕೈಗೆ ಸಿಗುವುದಿಲ್ಲ ಮತ್ತು ತಾವು ಹೇಳಿದಂತೆ ಕೇಳುವ ವ್ಯಕ್ತಿಯೂ ಅಲ್ಲ. ಮಾತ್ರವಲ್ಲ ಒಂದು ವೇಳೆ ಆತ ಆಯ್ಕೆಯಾದರೆ ನರೇಂದ್ರ ಮೋದಿಯವರೊಂದಿಗೆ ನೇರ ಸಂಪರ್ಕದಲ್ಲಿ ಇರುವುದರಿಂದ ತಮಗೇನಾದರೂ ಫಿಟ್ಟಿಂಗ್ ಇಡಬಲ್ಲ ಎಂಬ ಭಯವೂ ಅವರಿಗೆ ಇದೆ. ಹಾಗಾಗಿ ಯಾವುದೇ ಕಾರಣಕ್ಕೂ ಅವರಿಗೆ ಪ್ರತಾಪ ಸಿಂಹ ಗೆಲ್ಲಬೇಕಾದಂತಹ ವ್ಯಕ್ತಿಯಲ್ಲ. ಮೈಸೂರಿನಲ್ಲಿಯೂ ರಾಮದಾಸ ಎಂಬ ಸ್ತ್ರೀ ದಾಸನ ಕೈಯಲ್ಲಿ ಪಕ್ಷವಿದ್ದು, ಆತನೂ ವ್ಯಾಪಾರಸ್ಥ. ಆತನ ಭಯದಿಂದಲೇ ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವೆಯಾಗಿದ್ದರೂ ಈ ಬಾರಿ ಶೋಭಾ ಈ ಕ್ಷೇತ್ರ ತನಗೆ ಬೇಡ ಅಂದದ್ದು. ರಾಮದಾಸ್ ಕೂಡ ಪ್ರತಾಪ ಸಿಂಹನ ಪರವಾಗಿ ಇರಲು ಸಾಧ್ಯವೇ ಇಲ್ಲ. ಜೊತೆಗೆ ಬಿಜೆಪಿಗೆ ಯಾವಾಗಲೂ ತಮ್ಮ ಪಕ್ಷದವರು ಗೆದ್ದಾಗ ಆಗುವ ಲಾಭಕ್ಕಿಂತಲೂ ಹೆಚ್ಚು ಲಾಭ ಕಾಂಗ್ರೆಸಿಗರು ಗೆದ್ದಾಗ ಆಗುತ್ತದೆ. ಕಾಂಗ್ರೆಸಿಗರಿಗೆ ಒಂದಷ್ಟು ಕಪ್ಪಕಾಣಿಕೆಯನ್ನು ನೀಡಿ, ತಮ್ಮ ಕೆಲಸ ಕಾರ್ಯಗಳನ್ನು ಸುಲಭವಾಗಿ ಮಾಡಿಸಿಕೊಳ್ಳಬಹುದು. ಬಿಜೆಪಿಯವರೇ ಆದರೆ ತಮ್ಮ ಬಂಡವಾಳ ಬಹಿರಂಗವಾಗುವ ಭಯವೂ ಅವರಿಗೆ ಇದೆ. ಹಾಗಾಗಿ ವ್ಯಾಪಾರಿ ಬಿಜೆಪಿಯವರಿಗೆ ಪ್ರತಾಪ ಸಿಂಹ ಗೆಲ್ಲುವುದಕ್ಕಿಂತ ವಿಶ್ವನಾಥ ಗೆದ್ದರೆ ಲಾಭದಾಯಕ.

ಸ್ವತಃ ಪ್ರತಾಪ ಸಿಂಹನಿಗೆ ಇದು ಮೊದಲ ಚುನಾವಣೆ. ಅಂಕಣ ಬರೆದಷ್ಟು ಸುಲಭವಲ್ಲ ಚುನಾವಣೆ. ಜೊತೆಗೆ ಆತ ಬಹುತೇಕ ಬರಿಗೈ ದಾಸ. ಹಾಗಾಗಿ ಖರ್ಚುವೆಚ್ಚಗಳಿಗೆ ಆತ ಈ ಕ್ಷೇತ್ರದ ವ್ಯಾಪಾರಿಗಳತ್ತಲೇ ನೋಡಬೇಕು. ಪ್ರತಾಪ ಸಿಂಹ ಸ್ವಲ್ಪಮಟ್ಟಿಗೆ ಆತ್ಮಾಭಿಮಾನ ಹಾಗೂ ಸ್ವಂತಿಕೆ ಇರುವಂತಹ ವ್ಯಕ್ತಿಯಾದ್ದರಿಂದ ಹೀಗೆ ಕೈಒಡ್ಡುವುದು ಆತನಿಗೆ ಕಷ್ಟವಾಗಬಹುದು.

ಎಲ್ಲ ಪಕ್ಷಗಳ ಅಭ್ಯರ್ಥಿಗಳ ನಾಮಪತ್ರಗಳ ಸಲ್ಲಿಕೆ ಹಾಗೂ ಚುನಾವಣಾ ಪ್ರಚಾರದ ಕಾರ್ಯದಲ್ಲಿ ಒಂದಷ್ಟು ಪ್ರಗತಿಯಾದ ನಂತರ ಈ ಕ್ಷೇತ್ರದ ಸ್ಪಷ್ಟ ಚಿತ್ರಣ ಸಿಗಬಹುದು. ಆದರೆ ಈಗಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನ ವಿಶ್ವನಾಥ್ ಬೇರೆಲ್ಲರಿಗಿಂತಲೂ ನಾಲ್ಕು ಹೆಜ್ಜೆ ಮುಂದೆ ಇದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ.

● ಮನು ಶೆಣೈ

ಟ್ವಿಟರ್‌ನಲ್ಲಿ ಪ್ರತಾಪ ಸಿಂಹನ ನುಡಿಮುತ್ತುಗಳು

ಪ್ರತಾಪ ಸಿಂಹ ಅಂಕಣಕಾರನಾಗಿದ್ದ ವೇಳೆಯಲ್ಲಿ ತನ್ನ ಟ್ವಿಟರ್‌ನಲ್ಲಿ ಬಿಜೆಪಿ ನಾಯಕರುಗಳ ಬಗ್ಗೆ ಬರೆದ ನುಡಿಮುತ್ತುಗಳು ಹೀಗಿವೆ.

1. ಕರ್ನಾಟಕದ ಚುನಾವಣಾ ಪ್ರಚಾರ ಸಭೆಯಲ್ಲಿ ಎಲ್.ಕೆ.ಎ. (ಅಡ್ವಾನಿ) ವೇದಿಕೆಯನ್ನು ಹೆಚ್ಚು ಕುತಂತ್ರಿಗಳ ಜೊತೆಯಲ್ಲಿ ಹಂಚಿಕೊಂಡಿದ್ದರು. ಆದರೂ ಯಡಿಯೂರಪ್ಪನವರನ್ನು ಮಾತ್ರ ತೆಗಳುತ್ತಿದ್ದರು.

2. ಸುಷ್ಮಾ ಸ್ವರಾಜ್‌ರವರೇ ನಿಮ್ಮ ಮಾನಸ ಪುತ್ರರಾದ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಹೇಗಿದ್ದಾರೆ?

3. ಕರ್ನಾಟಕದಲ್ಲಿ ಅತ್ಯಂತ ಭ್ರಷ್ಟರೆಂದರೆ ಅನಂತಕುಮಾರ, ಯಡಿಯೂರಪ್ಪ, ಈಶ್ವರಪ್ಪ, ಅಶೋಕ ಮತ್ತು ಕಟ್ಟಾ ಸುಬ್ರಹ್ಮಣ್ಯ.

4. ಕರ್ನಾಟಕದ ಬಿಜೆಪಿ ಅಧ್ಯಕ್ಷರಾಗಿ ಅನಂತಕುಮಾರ್‌ರವರ ಹಿಂಬಾಲಕ ಪ್ರಹ್ಲಾದ ಜೋಷಿಯವರನ್ನು ನೇಮಿಸುವ ಬದಲು ಸದಾನಂದಗೌಡರನ್ನು ನೇಮಿಸಬಹುದಿತ್ತು.

5. ಆ ಪುಸ್ತಕವು ನಿನ್ನ ಪ್ರೀತಿಯ ಯಡ್ಡಿ ಮತ್ತು ಶೋಭಾ ನಡುವಿನ ಶಂಕಿತ ಸಂಬಂಧದ ಬಗ್ಗೆ ಎಂಬುದು ನಿನಗೆ ಗೊತ್ತಾ?

6. ಸುಷ್ಮಾ ಸ್ವರಾಜ್ ಅವರೇ, ನೀವು ಬಿಜೆಪಿಗೆ ಒಳ್ಳೆಯದಾಗುವುದನ್ನೆಲ್ಲ ವಿರೋಧಿಸುತ್ತಿದ್ದೀರಿ.


7. ಆಕೆ (ಸುಷ್ಮಾ ಸ್ವರಾಜ್) ಸುಮ್ಮನೆ ನಾಟಕವಾಡುತ್ತಿದ್ದಾಳೆ. ಆಕೆ ಬಳ್ಳಾರಿಯ ಸಹೋದರರನ್ನು ಹೇಗೆ ರಕ್ಷಿಸಿದರು ಎಂಬುದು ಎಲ್ಲರಿಗೂ ಗೊತ್ತು.

8. ರಾಮುಲು ಬಿಜೆಪಿಗೆ ವಾಪಸ್ ಆಗದಿದ್ದರೆ ಬಿಜೆಪಿ ನಾಲ್ಕು ಕ್ಷೇತ್ರಗಳನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ರಾಮುಲುವನ್ನು ವಾಪಸ್ ಕರೆದುಕೊಳ್ಳುವುದು ಅನಿವಾರ್ಯ. ಆದರೆ ಇದರ ಬಗ್ಗೆ ಸುಷ್ಮಾ ಸ್ವರಾಜ್ ತಾಳುತ್ತಿರುವ ನೈತಿಕ ನಿಲುವು ನನ್ನಲ್ಲಿ ಹೇಸಿಗೆಯನ್ನು ಹುಟ್ಟಿಸುತ್ತಿದೆ.

9. ಯೂಸ್‌ಲೆಸ್ ಅನಂತಕುಮಾರ್, ನಾಯ್ಡು, ಸುಷ್ಮಾ ಅವರೆಲ್ಲರನ್ನೂ ಬಿಜೆಪಿ ಬದಿಗಿರಿಸಿ ಖಂಡೂರಿ, ಜೈಟ್ಲಿ, ಪರಿಕ್ಕರ್ ಮತ್ತು ಮೋದಿಯನ್ನು ಮುಂದೆ ತರಬೇಕು.

10. ಬರಿ ಅನಂತಕುಮಾರ್ ಯಾಕೆ, ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ನಾಯಿಯೊಂದು ಸ್ಪರ್ಧಿಸಿದರೂ ಸುಲಭವಾಗಿ ಗೆಲ್ಲುತ್ತದೆ!!





ಬುದ್ಧಿ ಖರೀದಿಸಲು ಮೆಕ್ಕಾಕ್ಕೆ ತೆರಳಿದ ಜಾಫರ್ ಶರೀಫ್



ವಿಭಜನಾಪೂರ್ವ ಕಾಂಗ್ರೆಸ್‌ನಲ್ಲಿ ಕಚೇರಿ ಚಾಲಕನಾಗಿದ್ದ, ಅನಂತರ ಕಾಂಗ್ರೆಸ್‌ನಿಂದ ಹತ್ತು ತಲೆಮಾರಿಗಾಗುವಷ್ಟು ಲಾಭ ಪಡೆದಿರುವ ಜಾಫರ್ ಶರೀಫ್ ಈಗ 'ಕಾಂಗ್ರೆಸಿಗರು ನನ್ನ ಬೆನ್ನಿಗೆ ಚೂರಿ ಹಾಕುತ್ತಿದ್ದಾರೆ' ಎಂದು ಹೇಳುತ್ತಿದ್ದಾರೆ. ಈ ಹಿಂದೆ ತನ್ನ ಕುಟುಂಬದವರೇ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರೂ ಅವರ್‍ಯಾರನ್ನೂ ಗೆಲ್ಲಿಸದಿದ್ದ ಜಾಫರ್ ಸಾಹೇಬರು ಈಗ ತಮ್ಮ 84ರ ಇಳಿ ವಯಸ್ಸಿನಲ್ಲಿ ಮತ್ತೆ ಬೆಂಗಳೂರು ಕೇಂದ್ರ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಹಠ ಮಾಡುತ್ತಿದ್ದಾರೆ.

ಕಾಂಗ್ರೆಸ್ ಪಕ್ಷ ಇಲ್ಲಿ ಮುಸ್ಲಿಮ್ ಯುವಕ ರಿಜ್ವಾನ್ ಅರ್ಷದ್‌ಗೆ ಸ್ಪರ್ಧಿಸಲು ಅವಕಾಶ ನೀಡಿದೆ. ಒಂದು ವೇಳೆ ಈ ಕ್ಷೇತ್ರವನ್ನು ಮುಸ್ಲಿಮರನ್ನು ಬಿಟ್ಟು ಬೇರೆ ಸಮುದಾಯದವರಿಗೆ ನೀಡಿದ್ದರೆ ಜಾಫರ್ ಶರೀಫರು ಆಕ್ಷೇಪಣೆಗೆ ಕಾರಣವಿರುತ್ತಿತ್ತು. ಆದರೆ ತಾನೊಬ್ಬನೇ ಮುಸ್ಲಿಂ ನಾಯಕ ಮತ್ತು ತನಗೆ ಅವಕಾಶ ಸಿಗಲಿಲ್ಲ ಎಂದರೆ ಕಾಂಗ್ರೆಸಿನಿಂದ ಮುಸ್ಲಿಂ ಜನಾಂಗಕ್ಕೆ ಅನ್ಯಾಯವಾಗಿದೆ ಎಂದು ಜಾಫರ್ ಸಾಹೇಬರು ಹೇಳುವುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದಷ್ಟು ಮುಠ್ಠಾಳರಲ್ಲ ಮುಸ್ಲಿಮರು. ಮೈಸೂರಿನಲ್ಲಿ ಇರುವವರು ಹನಫಿ ಮುಸ್ಲಿಮರು. ಕೊಡಗಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವವರು ಶಾಫಿ ಮುಸ್ಲಿಮರು (ಕೇರಳದವರು). ಇವರೆಲ್ಲರೂ ಹೇಳುವುದೇನೆಂದರೆ "ವಿಶ್ವನಾಥ ಜಾತ್ಯತೀತ ವ್ಯಕ್ತಿ ಹಾಗೂ ಪ್ರಗತಿಪರ ವ್ಯಕ್ತಿ. ಜೊತೆಗೆ ಸೂಕ್ಷ್ಮ ಜೀವಿ. ಹಾಗಾಗಿ ವಿಶ್ವನಾಥರ ವಿರುದ್ಧ ಜಾಫರ್ ಶರೀಫ್ ನಿಲ್ಲಬಾರದು ಹಾಗೊಂದು ವೇಳೆ ಅವರು ಸ್ಪರ್ಧಿಸಿದರೂ, ಅವರು ಮುಸ್ಲಿಮರು ಎಂಬ ಕಾರಣಕ್ಕಾಗಿ ಮತವನ್ನು ಅವರಿಗೆ ನೀಡಿ ಮೋದಿಯ ತದ್ರೂಪವಾದ ಪ್ರತಾಪ ಸಿಂಹನನ್ನು ಆಯ್ಕೆಯಾಗುವಂತೆ ನಾವು ಮಾಡುವುದಿಲ್ಲ" ಎಂಬುದಾಗಿದೆ.

ಅಂಬಿ ಶಿಷ್ಯರು ರಾಂಗಾಗಿದ್ದರೂ ರಂಗುರಂಗಾಗಿರುವ ರಮ್ಯಾ


ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಘೋಷಣೆ ಮಾಡುವುದರೊಂದಿಗೆ ಚುನಾವಣಾ ಕಣ ರಂಗೇರಿದೆ. ಕಾಂಗ್ರೆಸ್ ಹಾಲಿ ಸಂಸದೆ ಚಿತ್ರನಟಿ ರಮ್ಯಾರನ್ನು ಕಣಕ್ಕಿಳಿಸಿದ್ದು ಜೆಡಿಎಸ್ ಮಾಜಿ ಶಾಸಕ ಸಿ.ಎಸ್.ಪುಟ್ಟರಾಜುರವರನ್ನು, ಬಿಜೆಪಿ ಹಾಲಿಗರ ಸಂಘದ ಹಾಲಿ ನಿರ್ದೇಶಕ ಬಿ.ಶಿವಲಿಂಗಯ್ಯನನ್ನು ಕಣಕ್ಕಿಳಿಸಲಿದೆ. ಕಳೆದ ಲೋಕಸಭಾ ಉಪಚುನಾವಣೆಯಲ್ಲಿ, ಧುತ್ತೆಂದು ಪ್ರತ್ಯಕ್ಷಳಾದ ಗ್ಲಾಮರ್‌ಗೊಂಬೆ ರಮ್ಯಾ ಜೆಡಿಎಸ್ ಭದ್ರಕೋಟೆಯನ್ನೇ ಛಿದ್ರಗೊಳಿಸಿ 67 ಸಾವಿರಕ್ಕೂ ಅಧಿಕ ಮತಗಳಿಂದ ಜೆಡಿಎಸ್‌ನ ಪುಟ್ಟರಾಜುರನ್ನು ಮಕಾಡೆ ಮಲಗಿಸಿ ಸಂಸತ್ ಪ್ರವೇಶಿಸಿದ್ದರು. ಕಳೆದ ಬಾರಿ ರಮ್ಯಾ ಪರವಿದ್ದ ಹವಾ ಈ ಬಾರಿ ಅಷ್ಟಾಗಿ ಕಾಣುತ್ತಿಲ್ಲವಾದರೂ ರಾಜ್ಯದಲ್ಲಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಾಗೂ ತನ್ನ ರಾಜಕೀಯ ಗುರುಗಳಾದ ಎಸ್.ಎಂ.ಕೃಷ್ಣ, ಡಿ.ಕೆ.ಶಿವಕುಮಾರವರ ಮ್ಯಾಜಿಕ್ ಈ ಬಾರಿಯೂ ತನ್ನನ್ನು ಪಾರ್ಲಿಮೆಂಟ್‌ಗೆ ಕಳುಹಿಸಲಿದೆ ಎಂಬ ಅಹಂ ರಮ್ಯರಲ್ಲಿದ್ದು, ಕ್ಷೇತ್ರದಾದ್ಯಂತ ಬಿಡು ಬೀಸಾಗಿ ಸುತ್ತುತ್ತಿದ್ದಾರೆ.

ರಮ್ಯಾ ರಂಗು

ಕಳೆದ ಹತ್ತು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿರುವ ರಮ್ಯಾ ತನ್ನ ಗ್ಲಾಮರ್ ಚರಿಷ್ಮಾದಿಂದ ಇಂದಿಗೂ ಬೇಡಿಕೆ ಉಳಿಸಿಕೊಂಡಿರುವ ಜನಪ್ರಿಯ ನಟಿ. ಕಲಾವಿದೆಯಾಗಿದ್ದ ರಮ್ಯಾರನ್ನು ರಾಜಕೀಯಕ್ಕೆ ಕರೆತಂದಿದ್ದೇ ಎಸ್.ಎಂ.ಕೃಷ್ಣ ಮತ್ತು ಡಿ.ಕೆ.ಶಿವಕುಮಾರ್. ತಮ್ಮ ಪರಮಾಪ್ತ ಆರ್.ಟಿ.ನಾರಾಯಣ್ ಅವರ ಸಾಕುಮಗಳಾದ ರಮ್ಯಾರನ್ನು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ಮೂಲಕ ಎಸ್.ಎಂ.ಕೃಷ್ಣ ಅಂಬಿಗೆ ಸರಿಯಾಗಿಯೇ ಟಾಂಗ್ ನೀಡಿದ್ದರು. ಸಾಕು ತಂದೆ ಆರ್.ಟಿ.ನಾರಾಯಣ್ ರಮ್ಯಾ ನಾಮಪತ್ರ ಸಲ್ಲಿಸಿದ ದಿನವೇ ಹೃದಯಾಘಾತದಿಂದ ಸಾವನ್ನಪ್ಪಿದ್ದು, ರಮ್ಯಾ ಪರ ಮಂಡ್ಯ ಜನ ಅನುಕಂಪ ತೋರಿಸಲು ಕಾರಣವಾಯಿತು. ತಂದೆಯ ಸಾವಿನ ಅನುಕಂಪ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ತಂತ್ರಗಾರಿಕೆ, ಆಡಳಿತ ಪಕ್ಷದ ಬೆಂಬಲ, ಪುಟ್ಟರಾಜು ವಿರುದ್ಧ ದಳಪತಿಗಳ ಒಳೇಟು - ಇವೆಲ್ಲ ಜೊತೆಗೂಡಿ ರಮ್ಯಾ ಸಂಸದೆಯಾಗಿ ಆಯ್ಕೆಯಾಗಲು ಸಾಧ್ಯವಾಯಿತು. ಸಂಸದೆಯಾಗಿ ರಮ್ಯಾ ಕೇವಲ ಆರೇಳು ತಿಂಗಳಾಗಿದೆ. ಇಷ್ಟು ಸಣ್ಣ ಅವಧಿಯಲ್ಲಿ ರಮ್ಯಾ ಹೇಳಿಕೊಳ್ಳುವಂತಹ ಸಾಧನೆ ಮಾಡಲು ಆಗಿರದಿದ್ದರೂ ಕಳಪೆಯಂತೂ ಅಲ್ಲ. ಚಿತ್ರರಂಗದಲ್ಲಿ ಸಾಕಷ್ಟು ಜವಾಬ್ದಾರಿ ಇದ್ದರೂ ಸಂಸದೆಯಾಗಿ ಕ್ಷೇತ್ರದಲ್ಲಿ ಅತಿಹೆಚ್ಚು ಸುತ್ತಾಡಿದ್ದಾರೆ. ಕ್ಷೇತ್ರಕ್ಕೆ ಕೇಂದ್ರೀಯ ವಿದ್ಯಾಲಯ, ಕ್ಯಾನ್ಸರ್ ಆಸ್ಪತ್ರೆ ಹಾಗೂ ಮಹಿಳಾ ಬ್ಯಾಂಕ್ ತಂದಿರುವುದಾಗಿ ರಮ್ಯಾ ಈಗ ಹೇಳುತ್ತಿದ್ದಾರೆ. ಆದರೆ ಇಷ್ಟು ಕಡಿಮೆ ಅವಧಿಯಲ್ಲಿ ಇದು ಹೇಗೆ ಸಾಧ್ಯವಾಯಿತು ಎಂದು ಕೇಳಿದರೆ "ಹಿಂದಿದ್ದ ಸಂಸದರು ಈ ಕೆಲಸವನ್ನು ಹತ್ತು ವರ್ಷಗಳ ಹಿಂದೆಯೇ ಮಾಡಬಹುದಿತ್ತು" ಎಂದು ಉತ್ತರಿಸುವ ಮೂಲಕ ಆಗ ಸಂಸದರಾಗಿದ್ದ ಅಂಬರೀಶ್‌ಗೆ ತಿರುಗೇಟು ಕೊಟ್ಟು ಯಡವಟ್ಟು ಮಾಡಿಕೊಳ್ಳುತ್ತಾರೆ. ಅಂಬಿ ಬೆಂಬಲಿಗರು ಸಿಟ್ಟು ಮಾಡಿಕೊಳ್ಳುತ್ತಾರೆಂಬ ಪರಿವೆಯೇ ಇಲ್ಲದೆ ಇಂತಹ ಮಾತುಗಳನ್ನು ಆಡುವ ರಮ್ಯಾ ಈಗ ಅಂಬಿ ಹಿಂಬಾಲಕರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಕಳೆದ ಆರು ತಿಂಗಳಲ್ಲಿ ಸಂಸದರ ನಿಧಿಯಿಂದ 2.50 ಕೋಟಿ ರೂ.ಗಳನ್ನು ಎಲ್ಲಾ ಕ್ಷೇತ್ರಗಳಿಗೂ ಹಂಚಿರುವ ರಮ್ಯಾ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಕೊಟ್ಟಿದ್ದಾರೆ. ಆದರೆ ಅವೆಲ್ಲಾ ಕಾಮಗಾರಿಗಳು ಇನ್ನಷ್ಟೇ ನಡೆಯಬೇಕಿದೆ. "ನಾನು ಸಂಸದೆಯಾಗಿ ಕೇವಲ ಆರು ತಿಂಗಳಷ್ಟೇ ಆಗಿದೆ. ಇಷ್ಟು ಕಡಿಮೆ ಅವಧಿಯಲ್ಲಿ ನಾನು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದೇನೆ. ಮುಂದಿನ ಚುನಾವಣೆಯಲ್ಲಿ ನನಗೆ ಆಶೀರ್ವದಿಸಿ ಐದು ವರ್ಷಗಳ ಅಧಿಕಾರ ನೀಡಿದರೆ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಕಾಣಲಿದೆ" ಎಂಬ ರಮ್ಯಾ ಮಾತಿಗೆ ಮತದಾರರು ತಲೆದೂಗಿದರೆ ಈ ಬಾರಿಯೂ ಅವರಿಗೊಂದು ಛಾನ್ಸ್ ಸಿಗಬಹುದು. "ಈಗಾಗಲೇ ಕ್ಷೇತ್ರದಲ್ಲಿರುವ 800 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಭೇಟಿ ಕೊಟ್ಟಿದ್ದೇನೆ" ಎನ್ನುವ ರಮ್ಯಾ ಭೇಟಿ ಕೊಟ್ಟು ಏನು ಮಾಡಿದ್ದೇನೆ ಎಂಬುದನ್ನು ಹೇಳುವುದಿಲ್ಲ. ಇವರ ಭೇಟಿಯಿಂದ ಏನು ಬಂತು ಭಾಗ್ಯ ಎನ್ನುವ ವಿರೋಧಿಗಳ ಮಾತಿಗೇನು ಉತ್ತರದಲ್ಲಿ ಬರವಿಲ್ಲ.

ರಾಜಕಾರಣದಲ್ಲಿ ಏನೇ ಯಡವಟ್ಟುಗಳನ್ನು ಮಾಡಿಕೊಂಡರೂ ಕ್ಷೇತ್ರದ ಮತದಾರರ ಮಧ್ಯೆ ರಮ್ಯಾ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ. ಅಂಬರೀಶ್‌ಗಿಂತಲೂ ಚುರುಕಾಗಿರುವ ರಮ್ಯಾ ಸಾಕಷ್ಟು ಬಾರಿ ಕ್ಷೇತ್ರಕ್ಕೆ ಬರುತ್ತಾರೆ. ಕಾಲೇಜುಗಳಿಗೆ ತೆರಳಿ ಯುವಜನತೆಯ ಜೊತೆ ಸಂವಾದ ನಡೆಸುವ ರಮ್ಯಾ ಸಾಮಾಜಿಕರ ಜೊತೆಯಲ್ಲೂ ಬೆರೆಯುತ್ತಾರೆ. ಮೊದಲು ಕನ್ನಡ ಚಿತ್ರರಂಗದ ಜನಪ್ರಿಯ ನಟಿ, ಗ್ಲಾಮರ್‌ನಿಂದಲೇ ಯುವಜನತೆಯ ಮನಸೂರೆಗೊಂಡಿರುವ ರಮ್ಯಾ ಎಲ್ಲೇ ಹೋದರೂ ಜನ ಮುತ್ತಿಕೊಳ್ಳುತ್ತಾರೆ. ಜನರೊಂದಿಗೆ ಸಲೀಸಾಗಿ ಬೆರೆಯುವ ಈ ಗುಣವೇ ರಮ್ಯಾ ಪಾಲಿಗೆ ಪ್ಲಸ್ ಪಾಯಿಂಟ್.

ಅಂಬಿ ಬೆಂಬಲಿಗರು ಗರಂ

ಕಳೆದ ಲೋಕಸಭಾ ಉಪಚುನಾವಣೆಯಲ್ಲಿ ಗೆದ್ದು ಅಚ್ಚರಿ ಮೂಡಿಸಿದ್ದ ರಮ್ಯಾ ಮಂಡ್ಯ ಕ್ಷೇತ್ರದಲ್ಲಿ ಅಂಬಿ-ಕೃಷ್ಣ ಬಣಗಳ ರಾಜಕೀಯವನ್ನು ಅರ್ಥಮಾಡಿಕೊಂಡು ನಾಜೂಕಾಗಿ ನಡೆಯಬೇಕಿತ್ತು, ಆದರೆ ಇವೆರಡೂ ಬಣಗಳ ರಾಜಕೀಯವನ್ನು ಸರಿಯಾಗಿ ನಿಭಾಯಿಸದ ಕಾರಣ ರಮ್ಯಾ ಮಾಡಿಕೊಂಡ ಯಡವಟ್ಟುಗಳು ಈ ಬಾರಿ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರಲಿರುವುದಂತೂ ನಿಚ್ಚಳವಾಗಿದೆ. ರಮ್ಯಾ ವಿರುದ್ಧ ಬಂಡೆದ್ದಿರುವ ಅಂಬಿ ಬೆಂಬಲಿಗರು ರಮ್ಯಾ ವಿರುದ್ಧ ದಿನಕ್ಕೊಂದು ಹೇಳಿಕೆಗಳನ್ನು ಕೊಡುತ್ತಾ ಭಿನ್ನಮತವನ್ನು ಬಹಿರಂಗವಾಗಿಯೇ ಹೊರಹಾಕುತ್ತಿದ್ದಾರೆ. ಅಂಬಿ-ಕೃಷ್ಣ ಬಣಗಳ ರಾಜಕೀಯದಲ್ಲಿ ರಮ್ಯಾ ನಿಜಕ್ಕೂ ಹೈರಾಣಾಗಿದ್ದು ಇದರ ಲಾಭವನ್ನು ಪಡೆಯಲು ಜೆಡಿಎಸ್ ಕಾರ್ಯತಂತ್ರ ರೂಪಿಸುತ್ತಿದೆ. ಕಳೆದ ಉಪಚುನಾವಣೆಯಲ್ಲಿ ಕೇವಲ ಒಂದು ವಾರವಷ್ಟೇ ಪ್ರಚಾರ ನಡೆಸಿದ್ದ ರಮ್ಯಾ ಭರ್ಜರಿ ಗೆಲುವು ಕಂಡಿದ್ದರು. ಈ ಬಾರಿ ತಿಂಗಳ ಹಿಂದಿನಿಂದಲೂ ಪ್ರಚಾರ ಆರಂಭಿಸಿದ್ದರೂ ಅಂಬಿ ಬೆಂಬಲಿಗರು ರಮ್ಯಾ ಪ್ರಚಾರಕ್ಕೆ ಅಡ್ಡಿಪಡಿಸಿರುವುದು ರಮ್ಯಾ ಪಾಲಿಗೆ ನುಂಗಲಾರದ ತುತ್ತಾಗಿದೆ.

"ಸಂಸದೆಯಾದ ಆರು ತಿಂಗಳಲ್ಲೇ ರಮ್ಯಾರ ಉಪಟಳ ಈ ಪರಿಯಾದರೆ ಇನ್ನು ಐದು ವರ್ಷ ಸಂಸದೆಯಾದರೆ ಹೇಗಪ್ಪಾ ಸಹಿಸೋದು" ಎಂಬ ನಿರ್ಧಾರಕ್ಕೆ ಬಂದಿರುವ ಅಂಬಿ ಬೆಂಬಲಿಗರು ಒಳಗೊಳಗೆ ಕೈಕೊಡುವ ಹಿಕಮತ್ತು ನಡೆಸಿದ್ದಾರೆ. ಅಂಬಿ ಬೆಂಬಲಿಗರು ರಮ್ಯಾ ವಿರುದ್ಧ ಕೆಲಸ ಮಾಡುವ ವಾಸನೆ ಗ್ರಹಿಸಿರುವ ರಾಹುಲ್ ಗಾಂಧಿ ಮಂಡ್ಯ ಲೋಕಸಭಾ ಕ್ಷೇತ್ರದ ಮೇಲೆ ಕಣ್ಣಿಡಲು ಎಐಸಿಸಿಯಲ್ಲಿರುವ ಕೆಲವರನ್ನು ತಂಡವನ್ನಾಗಿ ಮಾಡಿ ಕ್ಷೇತ್ರಕ್ಕೆ ಕಳುಹಿಸಿದ್ದಾರೆ. ರಮ್ಯಾ ವಿರುದ್ಧ ಕಲಸ ಮಾಡುವವರ ಮೇಲೆ ಕಣ್ಣಿಡುವ ರಾಹುಲ್ ಗಾಂಧಿಯ ಈ ತಂತ್ರಕ್ಕೆ ಅಂಬಿ ಬೆಂಬಲಿಗರು ಶರಣಾಗುವರೋ? ಇಲ್ಲಾ ಪ್ರತಿತಂತ್ರ ಹೂಡುವರೋ? ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ. ರಾಹುಲ್ ಗಾಂಧಿ ಚಾಪೆ ಕೆಳಗೆ ತೂರಿದರೆ ರಂಗೋಲಿ ಕೆಳಗೆ ತೂರುವ ಕಲೆ ನಮಗೆ ಕರಗತವಾಗಿದೆ ಎಂದು ಅಂಬಿ ಬೆಂಬಲಿಗರು ಹೇಳುತ್ತಾ ಈ ಬಾರಿ ರಮ್ಯಾಗೆ ಪಾಠ ಕಲಿಸುವುದಾಗಿ ಹೂಂಕರಿಸುತ್ತಿದ್ದಾರೆ.

ಅಂಬರೀಶ್ ಅನಾರೋಗ್ಯದಿಂದ ಬೆಂಗಳೂರಿನ ವಿಕ್ರಂ ಆಸ್ಪತ್ರೆಯಲ್ಲಿದ್ದಾಗ ರಮ್ಯಾ ಹೇಳಿದ ಮಾತುಗಳು ಅಂಬರೀಶ್ ಬೆಂಬಲಿಗರ ಕಣ್ಣುರಿಗೆ ಕಾರಣವಾಗಿದೆ. ಅಂಬಿ ವಿರುದ್ಧ ರಮ್ಯಾ ಅಪಪ್ರಚಾರ ಮಾಡುತ್ತಿದ್ದು, ಈ ಬಗ್ಗೆ ದೊಡ್ಡ ಸಭೆಯನ್ನೇ ಕರೆದು ಕ್ಷಮೆಯಾಚಿಸುವಂತೆ ಆಗ್ರಹಿಸಿದ ಅಂಬಿ ಅಭಿಮಾನಿಗಳಿಗೆ ಕ್ಯಾರೇ ಎನ್ನದ ರಮ್ಯಾ ತನ್ನ ಹೇಳಿಕೆಗೆ ಬದ್ಧವಾಗಿದ್ದೇನೆ ಎನ್ನುವ ಮೂಲಕ ಮುಟ್ಟಿ ನೋಡಿಕೊಳ್ಳುವಂತೆ ಮಾಡಿದ್ದರು. ಇದರಿಂದ ಇನ್ನಷ್ಟು ಕೋಪಗೊಂಡ ಅಂಬಿ ಬೆಂಬಲಿಗರು ಸಿಂಗಾಪುರಕ್ಕೆ ತೆರಳಿ ರಮ್ಯಾ ವಿರುದ್ಧ ಅಂಬರೀಶ್‌ಗೆ ವರದಿ ಒಪ್ಪಿಸಿ ಬಂದಿದ್ದಾರೆ, ಇನ್ನೊಂದು ವಾದದ ಪ್ರಕಾರ ಅಂಬಿ ಬೆಂಬಲಿಗರ ಈ ಉರಿಗೆ ಕಾರಣ ರಮ್ಯಾ ತಮ್ಮನ್ನು ಸರಿಯಾಗಿ ಗಮನಿಸಿಕೊಳ್ಳಲಿಲ್ಲ ಎಂಬುದೇ ಆಗಿದೆ. ನಮ್ಮ ಕೈಗೂ ಕಪ್ಪ-ಕಾಣಿಕೆ ಒಪ್ಪಿಸಿ ಚುನಾವಣೆ ನಡೆಸಬೇಕೆಂಬುದು ಅಂಬಿ ಬೆಂಬಲಿಗರ ಆಸೆ. ಆದರೆ ಎಲ್ಲವನ್ನು ಪಡೆದು ಕೈ ಎತ್ತಿದರೆ ಏನು ಮಾಡೋದು ಎಂಬುದು ರಮ್ಯಾ ಗುಂಪಿನ ವಾದ. ಹಾಗಾಗಿ ಇವೆಲ್ಲವನ್ನು ಡಿ.ಕೆ.ಶಿವಕುಮಾರ್ ಹಾಗೂ ಎಸ್.ಎಂ.ಕೃಷ್ಣ ಬಗೆಹರಿಸುತ್ತಾರೆಂಬ ಭರವಸೆಯಲ್ಲಿ ರಮ್ಯಾ ತನ್ನ ಪಾಡಿಗೆ ಚುನಾವಣೆ ಪ್ರಚಾರದಲ್ಲಿ ಬ್ಯುಸಿಯಾಗಿದ್ದಾರೆ. ಅಂಬಿ ಬಣ ಗರಂ ಆಗಿರುವ ಹಿನ್ನೆಲೆಯಲ್ಲಿ ರಮ್ಯಾ ಎಸ್.ಎಂ.ಕೃಷ್ಣ ಬಣದೊಂದಿಗೆ ಹತ್ತಿರವಾಗಿದ್ದಾರೆ.

ರಮ್ಯಾ ಲೆಕ್ಕಾಚಾರ

ಕಳೆದ ಲೋಕಸಭಾ ಉಪಚುನಾವಣೆಯಲ್ಲಿ ರಮ್ಯಾ ಅಭ್ಯರ್ಥಿಯಾಗುವುದು ಅಂಬಿಗೆ ಇಷ್ಟವಿಲ್ಲದಿದ್ದರೂ ಹೈಕಮಾಂಡ್ ನಿರ್ಧಾರದ ವಿರುದ್ಧ ಅಂಬಿ ಕೂಡ ಸುಮ್ಮನಾಗಬೇಕಾಯಿತು. ಆಗತಾನೇ ಸರ್ಕಾರ ಬಂದ ಹೊಸತು, ಅಂಬಿ ಕೂಡ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ್ದರಿಂದ ರಮ್ಯಾರನ್ನು ಗೆಲ್ಲಿಸಬೇಕಾದ ಅನಿವಾರ್ಯತೆ ಇತ್ತು, ಸರ್ಕಾರದ ಮರ್ಯಾದೆ ಪ್ರಶ್ನೆಯಾಗಿದ್ದರಿಂದ ಅಂಬಿ ಕ್ಷೇತ್ರದಲ್ಲಿ ಸುತ್ತಾಡಿ ರಮ್ಯಾ ಗೆಲುವಿಗೆ ಕಾರಣರಾಗಿದ್ದರು. ಆದರೆ ಆರೇಳು ತಿಂಗಳಲ್ಲೇ ಅಂಬಿ-ರಮ್ಯಾ ನಡುವೆ ಸಾಕಷ್ಟು ಬಿರುಕುಗಳು ಕಾಣಿಸಿಕೊಂಡಿದೆ. ಈಗ ಅಂಬಿಗೂ ರಮ್ಯಾ ಅಂದ್ರೆ ಅಷ್ಟಕಷ್ಟೇ. ಆದರಲ್ಲೂ ಅಂಬಿ ಬೆಂಬಲಿಗರು ರಮ್ಯಾ ಕಂಡರಂತೂ ಉರಿದುರಿದು ಬೀಳುತ್ತಾರೆ. ಅಲ್ಲದೆ ಅಂಬಿ ಕೂಡ ಸಿಂಗಾಪುರದ ಆಸ್ಪತ್ರೆಯಲ್ಲಿದ್ದಾರೆ. ಅವರು ಚೇತರಿಸಿಕೊಳ್ಳಲು ತಿಂಗಳುಗಳೇ ಬೇಕಾಗಿರುವುದರಿಂದ ಚುನಾವಣೆಯಲ್ಲಿ ರಮ್ಯಾ ಅವರನ್ನು ನೆಚ್ಚಿಕೊಳ್ಳುವ ಹಾಗಿಲ್ಲ, ಹಾಗಾಗಿ ರಮ್ಯಾ ಗೆಲುವಿಗೆ ಈ ಬಾರಿ ಸ್ವಲ್ಪ ಹೆಚ್ಚಾಗಿಯೇ ಬೆವರು ಹರಿಸಬೇಕಿದೆ.

ಮಂಡ್ಯ ಹಾಗೂ ಕನಕಪುರ ಲೋಕಸಭಾ ಕ್ಷೇತ್ರಗಳನ್ನು ಗೆದ್ದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಎದುರು ಮುಖ ಉಳಿಸಿಕೊಳ್ಳುವ ಅನಿವಾರ್ಯತೆ ಸಿದ್ದರಾಮಯ್ಯನವರಿಗಿತ್ತು, ಈ ಹಿನ್ನೆಲೆಯಲ್ಲಿ ಮಂಡ್ಯದಿಂದ ರಮ್ಯಾರನ್ನು ಗೆಲ್ಲಿಸಲೇಬೇಕೆಂದು ಲೆಕ್ಕಾಚಾರಗಳನ್ನು ಮಾಡಿದ ಸಿದ್ದರಾಮಯ್ಯ ದಳಪತಿಗಳನ್ನು ಕರೆದು ಮಾತನಾಡಿದ್ದರು. ಕಲ್ಪನಾ ಸಿದ್ದರಾಜು, ಕೆ.ಆರ್.ಪೇಟೆ ಕೃಷ್ಣರನ್ನು ಪಕ್ಷಕ್ಕೆ ಸೇರಿಸಿಕೊಂಡು ರಮ್ಯಾ ಗೆಲುವಿಗೆ ಕಾರಣರಾಗಿದ್ದರು. ಎಲ್ಲಕ್ಕಿಂತಲೂ ಮುಖ್ಯವಾಗಿ ಅಂಬಿ ಹೆಗಲಿಗೆ ರಮ್ಯಾ ಗೆಲ್ಲಿಸುವ ಜವಾಬ್ದಾರಿ ವಹಿಸಿದ್ದರು. ಮತ್ತೊಂದೆಡೆ ತನ್ನ ಪರಮಾಪ್ತರಾದ ಲೋಕೋಪಯೋಗಿ ಸಚಿವ ಹೆಚ್.ಸಿ.ಮಹದೇವಪ್ಪನವರನ್ನು ಚುನಾವಣಾ ಉಸ್ತುವಾರಿಗೆ ಬಿಟ್ಟಿದ್ದರು. ತನ್ನ ಮೆಚ್ಚಿನ ಶಿಷ್ಯ ಮಳವಳ್ಳಿ ಶಾಸಕ ನರೇಂದ್ರಸ್ವಾಮಿಗೆ ರಮ್ಯಾಗೆ ಹೆಚ್ಚಿನ ಲೀಡ್ ಕೊಡಿಸುವ ಜವಾಬ್ದಾರಿ ವಹಿಸಿದ್ದರು. ಅದರಂತೆ ಮಳವಳ್ಳಿ ಕ್ಷೇತ್ರದಲ್ಲಿ ಎಡಬಿಡದೆ ನಿರಂತರವಾಗಿ ಸುತ್ತಿದ ನರೇಂದ್ರಸ್ವಾಮಿ ರಮ್ಯಗೆ ಎಂಟು ಕ್ಷೇತ್ರಗಳಲ್ಲಿ ಮಳವಳ್ಳಿಯೊಂದರಲ್ಲೇ ಬರೋಬ್ಬರಿ 23 ಸಾವಿರಕ್ಕೂ ಅಧಿಕ ಮತಗಳ ಲೀಡ್ ಕೊಡಿಸಿದ್ದರು. ಹಾಗಾಗಿ ರಮ್ಯಾ ಕ್ಷೇತ್ರವನ್ನೇ ಅತಿಯಾಗಿ ನೆಚ್ಚಿಕೊಂಡಿದ್ದಾರೆ. ನರೇಂದ್ರಸ್ವಾಮಿ ಕೂಡ ರಮ್ಯಾ ಪರ ಈಗಾಗಲೇ ಕ್ಷೇತ್ರದಲ್ಲಿ ದಿನನಿತ್ಯ ಬಿರುಸಾಗಿ ಪ್ರಚಾರ ನಡೆಸುತ್ತಿರುವುದು ರಮ್ಯಾ ಪಾಲಿಗೆ ವರದಾನವಾಗಲಿದೆ.

ಹಾಗೆಯೇ ಕೆ.ಆರ್.ಪೇಟೆ ಕೆ.ಬಿ.ಚಂದ್ರಶೇಖರ್, ಮಾಜಿ ಸ್ಪೀಕರ್ ಕೃಷ್ಣ ಜೊತೆ ಹಲವು ಬಾರಿ ಸುತ್ತುಹಾಕಿರುವ ರಮ್ಯಾ ಈಗಾಗಲೇ ಒಂದು ಸುತ್ತು ಪ್ರಚಾರ ಕಾರ್ಯವನ್ನು ಮುಗಿಸಿದ್ದಾರೆ. ರೈತನಾಯಕ, ಮೇಲುಕೋಟೆ ಕ್ಷೇತ್ರದ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಜೈ ಅಂದದ್ದರಿಂದ ರಮ್ಯಾರಿಗೆ ಪ್ಲಸ್ ಆಗಿತ್ತು, ಈ ಬಾರಿಯೂ ಪುಟ್ಟಣ್ಣಯ್ಯನವರ ಬಲವನ್ನು ರಮ್ಯಾ ನೆಚ್ಚಿಕೊಂಡಿದ್ದಾರೆ. ಇನ್ನು ಮೈಸೂರು ಜಿಲ್ಲೆಯ ಕೆ.ಆರ್.ನಗರ ಕೂಡ ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ಸಂಸದ ಹೆಚ್.ವಿಶ್ವನಾಥ್ ಬೆಂಬಲ ರಮ್ಯಾ ಮೇಲಿದ್ದು, ಈ ಬಾರಿಯೂ ಲೀಡ್ ಸಿಗುವ ಸಾಧ್ಯತೆ ಇದೆ. ಹಾಗಾಗಿ ರಮ್ಯಾ ಕೂಡ ತಂತ್ರಗಾರಿಕೆಯ ಭಾಗವಾಗಿಯೇ ಈ ಕ್ಷೇತ್ರಗಳಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ.

ಮಂಡ್ಯದಲ್ಲಿ ಅಂಬಿ ಬೆಂಬಲಿಗರು ರಮ್ಯಾ ವಿರುದ್ಧ ಸಿಟ್ಟಾಗಿದ್ದು ಮದ್ದೂರಿನಲ್ಲಿ ಮಧು ಮಾದೇಗೌಡ ಬೆಂಬಲಿಗರು ರಮ್ಯಾ ವಿರುದ್ಧ ಗರಂ ಆಗಿದ್ದಾರೆ. ಶ್ರೀರಂಗಪಟ್ಟಣದಲ್ಲಿ ಅಂಬಿ ಶಿಷ್ಯರಾದ ಸಚ್ಚಿದಾನಂದ, ಲಿಂಗರಾಜು ರಮ್ಯಾ ವಿರುದ್ಧ ಬಹಿರಂಗವಾಗಿ ಕಿಡಿಕಾರಿರುವುದರಿಂದ ಅಲ್ಲಿ ಎಸ್.ಎಂ.ಕೃಷ್ಣ ಡಿ.ಕೆ.ಶಿವಕುಮಾರ್ ಶಿಷ್ಯ ರವೀಂದ್ರ ಶ್ರೀಕಂಠಯ್ಯ ಇರುವುದರಿಂದ ರಮ್ಯಾಗೆ ತಲೆನೋವಿಲ್ಲ, ಅಂಬಿ ಶಿಷ್ಯರು ಎಷ್ಟೇ ಅಸಮಾಧಾನ ಹೊಂದಿದ್ದರೂ ಸಿದ್ದರಾಮಯ್ಯ, ಎಸ್.ಎಂ.ಕೃಷ್ಣ, ಡಿ.ಕೆ.ಶಿವಕುಮಾರ್ ಭಿನ್ನಮತವನ್ನು ಬಗೆಹರಿಸುತ್ತಾರೆಂಬ ಭರವಸೆ ಹೊಂದಿರುವ ರಮ್ಯಾ ತನ್ನ ಪಾಡಿಗೆ ಪ್ರಚಾರ ನಡೆಸುತ್ತಾ ಕ್ಷೇತ್ರದಾದ್ಯಂತ ಬಿರುಬಿಸಿಲಿನಲ್ಲೂ ಸುತ್ತುತ್ತಿದ್ದಾರೆ.

ಇಷ್ಟೆಲ್ಲಾ ಇದ್ದರೂ ರಮ್ಯಾ ಈ ಬಾರಿ ಚುನಾವಣೆಯಲ್ಲಿ ಸಾಕಷ್ಟು ಬೆವರು ಹರಿಸಬೇಕಿದೆ. ಕಳೆದ ಉಪಚುನಾವಣೆಯಲ್ಲಿ ಜೆಡಿಎಸ್ ಶಾಸಕರಿರುವ ಕ್ಷೇತ್ರಗಳಲ್ಲೇ ಕಾಂಗ್ರೆಸ್ ಲೀಡ್ ಸಿಕ್ಕಿದ್ದರಿಂದ ಖುದ್ದು ಹೋದ ದೇವೇಗೌಡ ಹಾಗೂ ಕುಮಾರಸ್ವಾಮಿ ಈ ಬಾರಿಯೂ ಸೋತ ಸಿ.ಎಸ್.ಪುಟ್ಟರಾಜುಗೆ ಮತ್ತೆ ಟಿಕೆಟ್ ನೀಡಿದ್ದಾರೆ. ಚಲುವರಾಯಸ್ವಾಮಿ ನೇತೃತ್ವದಲ್ಲಿ ಈ ಬಾರಿ ಪುಟ್ಟರಾಜು ಚುನಾವಣೆ ಎದುರಿಸುತ್ತಿದ್ದು ರಮ್ಯಾ ಎದುರು ಸುಲಭದ ತುತ್ತೇನೂ ಅಲ್ಲ. ಇನ್ನು ಬಿಜೆಪಿಯಿಂದ ದುಡ್ಡಿನಕುಳ ಬಿ.ಶಿವಲಿಂಗಯ್ಯ ಸ್ಪರ್ಧಿಸುತ್ತಿದ್ದು ಮೋದಿ ಅಲೆಯಲ್ಲಿ ಗೆದ್ದು ಬರುವ ಮಾತುಗಳನ್ನಾಡುತ್ತಿದ್ದಾರೆ. ಮಂಡ್ಯ ಕ್ಷೇತ್ರದಲ್ಲೆಲ್ಲೂ ಮೋದಿ ಅಲೆ ಕಾಣದಿದ್ದರೂ 'ಮೋದಿ ಅಲೆ, ಮೋದಿ ಅಲೆ' ಎಂದು ಬಾಯಿ ಬಡಿದುಕೊಳ್ಳುತ್ತಿರುವ ಮೂರು ಮುಕ್ಕಾಲು ಜನರಿರುವ ಬಿಜೆಪಿ ಪಕ್ಷದ ಬಿ.ಶಿವಲಿಂಗಯ್ಯನ ಸೋಲು ಈಗಾಗಲೇ ಖಚಿತವಾಗಿದೆ.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರಮ್ಯಾ ಹಾಗೂ ಜೆಡಿಎಸ್‌ನ ಸಿ.ಎಸ್.ಪುಟ್ಟರಾಜು ನಡುವೆಯೇ ಬಿಗ್‌ಫೈಟ್ ನಡೆಯಲಿದ್ದು ಯಾರು ಯಾರನ್ನು ಸೋಲಿಸಿ ಸಂಸತ್ ಪ್ರವೇಶಿಸುವರೋ ಎಂಬುದಕ್ಕೆ ಕಾಯಬೇಕಿದೆ.

● ಮಂಡ್ಯ ನಾಗೇಶ್

ಮಲೇಷಿಯಾ ಏರ್‌ಲೈನ್ಸ್



ನಿಗೂಢತೆಯ ಬೆನ್ನುಹತ್ತಿ....

ಹದಿಮೂರು ದಿನಗಳ ಹಿಂದೆ ನಿಗೂಢವಾಗಿ ನಾಪತ್ತೆಯಾಗಿದ್ದ ಮಲೇಷಿಯಾ ಏರ್‌ಲೈನ್ಸ್‌ನ ಒಂದೆರಡು ಭಾಗಗಳು ಇವತ್ತು - ಗುರುವಾರ - ಆಸ್ಟ್ರೇಲಿಯಾ ಹತ್ತಿರ ಸಮುದ್ರದಲ್ಲಿ ಪತ್ತೆ ಆಗಿರುವ ಸಾಧ್ಯತೆ ಇದೆ. ಆದರೆ ಪತ್ತೆ ಆಗಿರುವ 82 ಅಡಿ ಉದ್ದದ ಒಂದು ಭಾಗ ಮತ್ತು ಅದಕ್ಕಿಂತ ಚಿಕ್ಕದಾದ ಇನ್ನೊಂದು ಭಾಗ ಇದೇ ವಿಮಾನಕ್ಕೆ ಸಂಬಂಧಿಸಿದ್ದಾ ಎಂಬುದು ಪತ್ರಿಕೆ ಮುದ್ರಣಕ್ಕೆ ಹೋಗುವ ತನಕ ಸಾಬೀತಾಗಿರಲಿಲ್ಲ.

ಜಗತ್ತಿನಾದ್ಯಂತ ಕುತೂಹಲ ಕೆರಳಿಸಿದ್ದ ಈ ವಿಮಾನ ನಾಪತ್ತೆ ಪ್ರಕರಣದ ಸುತ್ತ ಇನ್ನೂ ಹಲವಾರು ಪ್ರಶ್ನೆಗಳು ಉತ್ತರಗಳಿಲ್ಲದೆ ಹಾಗೆ ಉಳಿದಿವೆ.

ಈಗ ಆಸ್ಟ್ರೇಲಿಯಾ ಸಮೀಪ ದೊರಕಿರುವ ಭಾಗಗಳು ಈ ವಿಮಾನದ್ದೇ ಆಗಿದ್ದರೆ ಯಾಕೆ ಆ ವಿಮಾನ ಚೀನಾ ಬದಲಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿತ್ತು?

ವಿಮಾನಗಳಿಗೆ ಅಳವಡಿಸಲಾಗುವ 'ಬ್ಲಾಕ್ ಬಾಕ್ಸ್'ಗಳು 30 ದಿನಗಳ ಬ್ಯಾಟರಿ ಶಕ್ತಿ ಹೊಂದಿದ್ದು ಸಮುದ್ರದಲ್ಲಿ 14,000 ಅಡಿ ಮುಳುಗಿದ್ದರೂ ಸಿಗ್ನಲ್‌ಗಳನ್ನು ಕಳುಹಿಸುತ್ತಿರುತ್ತವೆ. ಆದರೆ ಈ ವಿಮಾನದ 'ಬ್ಲಾಕ್ ಬಾಕ್ಸ್' ಯಾಕೆ ನಾಪತ್ತೆಯಾದ ಕ್ಷಣದಿಂದ ಒಂದೇ ಒಂದು ಸಿಗ್ನಲ್ ಅನ್ನೂ ಕಳುಹಿಸಲಿಲ್ಲ?

ವಿಮಾನ ಅಪಘಾತಕ್ಕೀಡಾಗಿದ್ದರೆ ಅದು ಯಾಕೆ ಆಪತ್ತಿನ ಸಮಯದಲ್ಲಿ ಕಳುಹಿಸುವ 'ಮೇಡೇ' ಸಂದೇಶವನ್ನು ರವಾನಿಸಲಿಲ್ಲ?.

ಹಾಗೊಮ್ಮೆ ಭಯೋತ್ಪಾದಕರು ಅದನ್ನು ಅಪಹರಿಸಲು ಯತ್ನಿಸಿದ್ದರಿಂದ ಅದು ಸಮುದ್ರದಲ್ಲಿ ಮುಳುಗಿದ್ದರೆ ಯಾಕೆ ವಿಮಾನದಲ್ಲಿ ಬಳಸುವ ಇಂಧನ ನೀರಿನ ಮೇಲೆ ಇಷ್ಟು ದಿನವಾದರೂ ಕಾಣಿಸಿಕೊಳ್ಳಲಿಲ್ಲ?

ಅಕಸ್ಮಾತ್ ಆಮ್ಲಜನಕದ ಕೊರತೆಯಿಂದಾಗಿ ವಿಮಾನದಲ್ಲಿದ್ದ ಎಲ್ಲರೂ ಪ್ರಾಣ ಕಳೆದುಕೊಂಡರು ಎಂದೇ ಇಟ್ಟುಕೊಂಡರೂ ವಿಮಾನದಲ್ಲಿದ್ದ ಯಂತ್ರಗಳಾದರೂ ವಿಮಾನ ಆಪತ್ತಿನಲ್ಲಿರುವ ಬಗ್ಗೆ ಸಂದೇಶ ಕಳುಹಿಸಬೇಕಿತ್ತಲ್ಲವೇ. ಆದರೆ ಅವೆಲ್ಲ ಸ್ತಬ್ಧಗೊಂಡಿದ್ದು ಹೇಗೆ?

ವಿಮಾನದಲ್ಲಿದ್ದ ಪ್ರಯಾಣಿಕರಲ್ಲಿ ಕನಿಷ್ಟ 20 ಮಂದಿ ಕಂಪ್ಯೂಟರ್ ಪರಿಣಿತರಾಗಿದ್ದರು. ಅಷ್ಟೇ ಅಲ್ಲ, ಅವರೆಲ್ಲ ಯುದ್ಧ ಆಯುಧಗಳನ್ನು ತಯಾರಿಸುವ ಕಂಪನಿಗಳಿಗೆ ಕೆಲಸ ಮಾಡುತ್ತಿದ್ದು, ವಿಮಾನಗಳು ಮತ್ತು ಹಡಗುಗಳು ವಿರೋಧಿಗಳ ರೇಡಾರ್‌ಗಳಿಗೆ ಪತ್ತೆಯಾಗದಂತೆ ನೋಡಿಕೊಳ್ಳುವ ತಂತ್ರಜ್ಞಾನವನ್ನು ತಯಾರಿಸುವ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರಲ್ಲೆ ಯಾರಾದರೊಬ್ಬರು ಬೇಕಂತಲೇ ಈ ವಿಮಾನದ ಸಿಗ್ನಲ್ ಶಕ್ತಿಯನ್ನು ನಿಯಂತ್ರಿಸಿದ್ದರೆ?

ಇಂತಹ ಹಲವಾರು ಪ್ರಶ್ನೆಗಳ ಹಿನ್ನೆಲೆಯಲ್ಲಿ ನಿಗೂಢವಾಗಿ ನಾಪತ್ತೆಯಾದ ಮಲೇಷಿಯಾ ವಿಮಾನದ ಸುತ್ತ ಒಂದು ಕುತೂಹಲಕಾರಿ ಲೇಖನ ಇಲ್ಲಿದೆ.

ಆಧುನಿಕ ತಂತ್ರಜ್ಞಾನ ಹೇಗೆ ದಾಪುಗಾಲಿಡುತ್ತಿದೆ ಎಂಬ ಬಗ್ಗೆ ನಿತ್ಯವೂ ತರಹೇವಾರಿ ಸುದ್ದಿಗಳನ್ನು ನಾವು ಕೇಳುತ್ತಲೇ ಇದ್ದೇವೆ. ಅದರಲ್ಲೂ ನಾನಾ ನಮೂನೆಯ ಎಲೆಕ್ಟ್ರಾನಿಕ್ ಉಪಕರಣಗಳ ಆವಿಷ್ಕಾರದಿಂದಾಗಿ ಇಂದು ಜಗತ್ತೇ ನಮ್ಮ ಅಂಗೈನಲ್ಲಿದೆ ಎಂದು ನಾವು ಬೀಗುತ್ತಿದ್ದೇವೆ. ಅಂತರ್ಜಾಲದಲ್ಲಿ ಗೂಗಲ್ ಅರ್ಥ್ ವೆಬ್‌ಸೈಟಿಗೆ ಪ್ರವೇಶಿಸಿ ಅದರಲ್ಲಿ ಜಗತ್ತಿನ ಯಾವುದೋ ಮೂಲೆಯ ರಸ್ತೆ ಮನೆ ಮುಂತಾದವುಗಳನ್ನು ಬ್ರೌಸ್ ಮಾಡಿ ರೋಮಾಂಚಿತರಾಗುತ್ತಿದ್ದೇವೆ. ತಮ್ಮ ಮನೆಯ ಮುಂದೆ ನಿಲ್ಲಿಸಿರುವ ಸ್ಕೂಟರ್, ಅಂಗಳದಲ್ಲಿ ಆಡುತ್ತಿರುವ ಮಕ್ಕಳೂ ಕೂಡ ಗೂಗಲ್ ಅರ್ಥ್‌ನಲ್ಲಿ ನಿಚ್ಚಳವಾಗಿ ಕಾಣುವುದನ್ನು ಕಂಡು ಪುಳಕಿತರಾದವರಿಗೆ ಲೆಕ್ಕವಿಲ್ಲ.

ಆದರೆ ಇದೇ ಸಂದರ್ಭದಲ್ಲಿ ಎಲ್ಲ ಬಗೆಯ ತಂತ್ರಜ್ಞಾನಕ್ಕೂ ಸವಾಲೊಡ್ಡಿರುವ ಒಂದು ಘೋರ ಘಟನೆ ಸಂಭವಿಸಿದೆ. ಇಲ್ಲಿಗೆ 13 ದಿನಗಳ ಹಿಂದೆ ನಿಗೂಢವಾಗಿ ಕಣ್ಮರೆಯಾಗಿರುವ ಮಲೇಷಿಯಾ ಏರ್‌ಲೈನ್ಸ್‌ನ ವಿಮಾನದ ಬಗ್ಗೆ ಯಾವುದೇ ಸುಳಿವೂ ಸಿಕ್ಕಿಲ್ಲ. ಈ ವಿಮಾನದ ಪತ್ತೆಗಾಗಿ ತಂತ್ರಜ್ಞಾನದಲ್ಲಿ ಅಪಾರ ಸಾಧನೆಗೈದಿರುವ ಅಮೆರಿಕ, ಬ್ರಿಟನ್, ಚೀನಾ, ಫ್ರಾನ್ಸ್, ಆಸ್ಟ್ರೇಲಿಯಾ ಒಳಗೊಂಡು ಒಟ್ಟು 26 ದೇಶಗಳು ಕಾರ್ಯಾಚರಣೆಗೆ ಇಳಿದಿವೆ. ಆದರೆ ಶೋಧಕಾರ್ಯದ ಫಲಿತಾಂಶ ಮಾತ್ರ ಶೂನ್ಯ ಎಂಬುದು ಆಶ್ಚರ್ಯಕರ ಕಟುಸತ್ಯ.

ಎಚ್370 ಜೆಟ್‌ಲೈನರ್ ವಿಮಾನ ಮಲೇಷಿಯಾ ರಾಜಧಾನಿ ಕೌಲಾಲಂಪುರ್‌ದಿಂದ ಚೀನಾದ ರಾಜಧಾನಿ ಬೀಜಿಂಗ್‌ಗೆ ಶನಿವಾರ ಮುಂಜಾನೆ 12.21 ಗಂಟೆಗೆ ಹೊರಟಿತು. ಈ ವಿಮಾನದಲ್ಲಿ 227 ಮಂದಿ ಪ್ರಯಾಣಿಕರು ಮತ್ತು 12 ಮಂದಿ ಸಿಬ್ಬಂದಿ ಸೇರಿ ಒಟ್ಟು 239 ಮಂದಿ ಇದ್ದರು. ಅದರಲ್ಲಿ ಮೂರನೇ ಎರಡು ಭಾಗದಷ್ಟು ಅಂದರೆ 152 ಮಂದಿ ಚೀನೀಯರು, 38 ಮಂದಿ ಮಲೇಷಿಯನ್ನರು, ಇನ್ನುಳಿದಂತೆ 5 ಮಂದಿ ಭಾರತೀಯರು, 6 ಮಂದಿ ಆಸ್ಟ್ರೇಲಿಯನ್ನರು, 4 ಮಂದಿ ಫ್ರೆಂಚರು, 3 ಮಂದಿ ಅಮೆರಿಕನ್ನರು. ಇನ್ನು ಒಬ್ಬಿಬ್ಬರು ಕೆನಡಾ, ಹಾಂಗ್‌ಕಾಂಗ್, ನ್ಯೂಜಿಲ್ಯಾಂಡ್ ಮುಂತಾದ ದೇಶದವರು. ಸಿಬ್ಬಂದಿ ವರ್ಗದ ಎಲ್ಲ 12 ಮಂದಿ ಮಲೇಷಿಯನ್ನರು.

ವಿಮಾನದ ಕ್ಯಾಪ್ಟನ್ ಆಗಿದ್ದ 53 ವರ್ಷದ ಅನುಭವಿ ಪೈಲಟ್ ಜಹಾರಿ ಅಹಮದ್ ಈ ಸಂಸ್ಥೆಗೆ ಸೇರಿದ್ದು 1981ರಲ್ಲಿ. ಕರಾರುವಾಕ್ಕಾದ ವಿಮಾನ ಚಾಲನೆಗೆ ಹೆಸರಾದ ಈತನಿಗೆ ಇದುವರೆಗೆ 18,365 ಗಂಟೆಗಳ ಕಾಲ ಹಾರಾಟ ನಡೆಸಿದ ಅನುಭವವಿದೆ. ಈತ ಸಂಸ್ಥೆಯ ಪರವಾಗಿ ಹೊಸ ಪೈಲಟ್‌ಗಳಿಗೆ ಟೆಸ್ಟ್ ನಡೆಸುವ ಪರೀಕ್ಷಕನೂ ಆಗಿದ್ದಾನೆ. ಇನ್ನೊಬ್ಬ ಪೈಲಟ್ 27 ವರ್ಷದ ಫಾರಿಕ್ ಅಬ್ದುಲ್ 2007ರಲ್ಲಿ ಕಂಪನಿ ಸೇರಿದ್ದಾನೆ. ಆತನಿಗೆ 2763 ಗಂಟೆಗಳ ವಿಮಾನ ಚಾಲನೆಯ ಅನುಭವವಿದೆ. ಹೀಗೆ ಈ ಸಿಬ್ಬಂದಿ ವಿಮಾನ ಚಾಲನೆಯಲ್ಲಿ ಸಾಕಷ್ಟು ನುರಿತವರೇ ಆಗಿದ್ದು, ಚಾಲನೆಯಲ್ಲಿ ದೋಷವುಂಟಾಗಿರುವ ಸಾಧ್ಯತೆ ತೀರಾ ಕಡಿಮೆ.


ಮಲೇಷಿಯನ್ ಏರ್ ಟ್ರಾಫಿಕ್ ಕಂಟ್ರೋಲರ್‌ಗಳನ್ನು ರಾತ್ರಿ 01.19 ರ ವೇಳೆಯಲ್ಲಿ ಸಂಪರ್ಕಿಸಿದ ವಿಮಾನದ ಸಹ-ಪೈಲಟ್ "ಆಲ್ ರೈಟ್, ಗುಡ್ ನೈಟ್" ಎಂಬ ಸಂದೇಶ ನೀಡಿದ. ಬಹುಶಃ ಇದೇ ಅಂತಿಮ ವಿದಾಯವಾಗುತ್ತದೆಂದು ಯಾರೂ ಭಾವಿಸಿರಲಿಲ್ಲ.

ಸ್ಥಳೀಯ ಕಾಲಮಾನ 01.30ರ ವೇಳೆಗೆ ಈ ವಿಮಾನ ವಿಯೆಟ್ನಾಂ ಬಾಹ್ಯಾಕಾಶವನ್ನು ಹಾದುಹೋಗುತ್ತದೆ. ಹೀಗೆ ಹಾದುಹೋಗುವಾಗ ವಿಮಾನವು ಎಂದಿನಂತೆ ವಿಯೆಟ್ನಾಂ ವಾಯುಯಾನ ಅಧಿಕಾರಿಗಳಿಗೆ ರಿಪೋರ್ಟ್ ಮಾಡಿಕೊಳ್ಳಬೇಕಿತ್ತು. ಆದರೆ ಅಂಥಾ ಯಾವ ಸುಳಿವನ್ನೂ ನೀಡಿಲ್ಲ. ಹಾಗೆಯೇ ಆರು ಗಂಟೆಗಳ ಕಾಲ ವಾಯುಸಂಚಾರ ಮಾಡಿ ಬೆಳಿಗ್ಗೆ 6.30ಕ್ಕೆ ಸರಿಯಾಗಿ ಬೀಜಿಂಗ್ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು. ಆದರೆ ಮಾರ್ಗಮಧ್ಯದಲ್ಲಿ ಹಠಾತ್ತನೆ ದಿಕ್ಕು ಬದಲಾಯಿಸಿ ತದ್ವಿರುದ್ಧ ದಿಕ್ಕಿನತ್ತ ಸಾಗಿದೆ ಎಂದು ಈಗ ವಿಶ್ಲೇಷಿಸಲಾಗುತ್ತಿದೆ. ಆದರೆ ಅದು ತಲುಪಿದ್ದಾದರೂ ಎಲ್ಲಿಗೆ ಎಂಬುದು ಈಗ ಮಿಲಿಯನ್ ಡಾಲರ್ ಪ್ರಶ್ನೆ.

ವಿಮಾನದ ಗರಿಷ್ಠ ವೇಗ ಗಂಟೆಗೆ 850 ಕಿಮೀ ವೇಗದಲ್ಲಿ ಸಂಚರಿಸಿದರೆ ಸುಮಾರು 8 ಗಂಟೆಗಳ ಕಾಲ ಹಾರಾಟ ನಡೆಸಲು ಬೇಕಾಗುವಷ್ಟು ಇಂಧನ ದಾಸ್ತಾನಿತ್ತು. ಹಾಗಾದರೆ 8 ಗಂಟೆಗಳ ಹಾರಾಟದ ನಂತರದ ಕತೆ?

ವಿಮಾನ ಟೇಕ್ ಆಫ್ ಆದ ಸುಮಾರು ಒಂದು ಗಂಟೆಯಲ್ಲೇ ಏರ್ ಟ್ರಾಫಿಕ್ ಕಂಟ್ರೋಲಿಂಗ್ ವ್ಯವಸ್ಥೆಯಿಂದ ಇದ್ದಕ್ಕಿದ್ದಂತೆ ಸಂಪರ್ಕ ಕಡಿದುಕೊಂಡಿತು. ಏನಾದರೂ ತಾಂತ್ರಿಕ ದೋಷ ಅಥವ ಇನ್ನಾವುದೇ ಅಪಾಯ ಎದುರಾಗಿದ್ದ ಪಕ್ಷದಲ್ಲಿ ಅಪಾಯದ ಮುನ್ಸೂಚನೆಯನ್ನು ರವಾನಿಸಬೇಕಿತ್ತು. ಆದರೆ ಅಂಥಾ ಯಾವ ಮುನ್ಸೂಚನೆಯನ್ನೂ ರವಾನಿಸಿಲ್ಲ. ಹವಾಮಾನದಲ್ಲೂ ಯಾವುದೇ ಏರುಪೇರು ಉಂಟಾಗಿರಲಿಲ್ಲ.

ಏರ್ ಟ್ರಾಫಿಕ್ ನಿಯಂತ್ರಣ ರಾಡಾರ್‌ಗೆ ಲಭ್ಯವಾಗಿರುವ ಅಂತಿಮ ಕ್ಷಣದ ಮಾಹಿತಿ ಪ್ರಕಾರ ಎಚ್370 ಜೆಟ್‌ಲೈನರ್ ವಿಮಾನವು, ಒಮ್ಮೆ ತನ್ನ ನಿಗದಿತ ಎತ್ತರಕ್ಕಿಂತ ದುಪ್ಪಟ್ಟು ಎತ್ತರಕ್ಕೆ ಏರಿದೆ. ನಂತರ ಇದ್ದಕ್ಕಿದ್ದಂತೆ ಕೆಳಕ್ಕೆ ಇಳಿದು ಭೂಮಿಗೆ ಅತಿ ಹತ್ತಿರದಲ್ಲಿ ಅಂದರೆ ಸುಮಾರು 1000 - 1500 ಅಡಿಗಳ ಅಂತರದಲ್ಲಿ ಹಾರಾಟ ನಡೆಸಿರುವುದಾಗಿ ಮಾಹಿತಿ ಲಭ್ಯವಾಗಿದೆ.




ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಮುಕ್ತೇಶ್ ಮುಖರ್ಜಿ ಮತ್ತವನ ಚೀನಿ ಪತ್ನಿ

ವಿಮಾನದ ಇಂಜಿನ್‌ನ ತಯಾರಕರು ಇಂಜಿನ್‌ನ ಅಂತರ್ಭಾಗದಲ್ಲಿ ವಿಶೇಷವಾಗಿ ಉಪಕರಣವೊಂದನ್ನು ಅಳವಡಿಸಿರುತ್ತಾರೆ. ಈ ಉಪಕರಣ ಇಂಜಿನ್ ಚಾಲನೆಯಲ್ಲಿದ್ದಾಗ ಉಪಗ್ರಹವೊಂದಕ್ಕೆ ಸಂಕೇತಗಳನ್ನು ರವಾನಿಸುತ್ತಿರುತ್ತದೆ. ಬ್ರಿಟನ್ ದೇಶ ನಿರ್ವಹಿಸುವ ಇಂಥಾ ಉಪಗ್ರಹ ನೀಡಿರುವ ಮಾಹಿತಿ ಪ್ರಕಾರ ಬೆಳಿಗ್ಗೆ ಸುಮಾರು 8.30ರವರೆಗೂ ಇಂಜಿನ್ ಚಾಲನೆಯ ಸಂಕೇತಗಳನ್ನು ಸ್ವೀಕರಿಸಿದೆ.. ಅಂದರೆ ವಿಮಾನದ ಯಂತ್ರ ಬೆಳಗ್ಗೆ 8.30ರವರೆಗೂ ಚಾಲನೆಯಲ್ಲಿತ್ತು ಎಂದರ್ಥ. ನಂತರ ಯಾವ ಸುಳಿವೂ ಇಲ್ಲ. ಎಲ್ಲವೂ ನಿಶ್ಯಬ್ದ! ನೀರವ ಮೌನ!!

ಇನ್ನು ಉಳಿದದ್ದು ಊಹಾಪೋಹ ಮತ್ತು ವಿಶ್ಲೇಷಣೆಗಳು ಮಾತ್ರ.

ಅಮೆರಿಕ ಮತ್ತಿತರ ದೇಶಗಳ ವಾಯುಯಾನ ತಜ್ಞರು ಮತ್ತು ಮಿಲಿಟರಿ ತಂತ್ರ ನಿಪುಣರು ಒಂದು ಊಹೆಯನ್ನು ತೇಲಿಬಿಟ್ಟಿದ್ದಾರೆ. ಆ ಕಥನದ ಪ್ರಕಾರ 'ವಿಮಾನದಲ್ಲಿ ಸಂಪರ್ಕ ವ್ಯವಸ್ಥೆಗಾಗಿ ಅಳವಡಿಸಲಾಗಿದ್ದ ಟ್ರಾನ್ಸ್‌ಪಾಂಡರ್‌ಗಳನ್ನು ಉದ್ದೇಶಪೂರ್ವಕವಾಗಿ ಸ್ವಿಚ್‌ಆಫ್ ಮಾಡಲಾಗಿದೆ. ರಾಡಾರ್ ವ್ಯವಸ್ಥೆಯ ನಿಗಾ ವಿಚಕ್ಷಣೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ಅತ್ಯಂತ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸಲಾಗಿದೆ. ಒಟ್ಟಾರೆ ವಿಮಾನಯಾನದ ಬಗ್ಗೆ ಅತ್ಯಂತ ನುರಿತ ವ್ಯಕ್ತಿಯೇ ವಿಮಾನ ಚಾಲನೆ ಮಾಡುತ್ತಿದ್ದಾರೆ. ಆದ್ದರಿಂದ ಭಯೋತ್ಪಾದಕರು ವಿಮಾನವನ್ನು ಹೈಜಾಕ್ ಮಾಡಿ ರಹಸ್ಯ ತಾಣದಲ್ಲಿ ಇಳಿಸಿರುವ ಸಾಧ್ಯತೆಯಿದೆ.'

ತಾಲಿಬಾನ್ ಕೈವಾಡವಿರಬಹುದೆಂಬ ಕತೆಗಳು ಹರಿದಾಡಿದವು. ಅಲ್‌ಕೈದಾ ಸಂಚಿರಬಹುದೆಂಬ ಊಹೆಗಳೂ ರೆಕ್ಕೆ ಬಿಚ್ಚಿದವು. ಸೊಮಾಲಿಯಾ ದ್ವೀಪದಲ್ಲಿ ಈಗ ಬಳಸದೆ ಬಿಟ್ಟಿರುವ ರನ್‌ವೇಯಲ್ಲಿ ವಿಮಾನ ಇಳಿದಿರಬಹುದೆಂಬ ಕತೆಗಳೂ ಕೇಳಿಬಂದವು. ಉಪಗ್ರಹಗಳ ಕಣ್ಣಿಗೆ ಬೀಳದಂತೆ ಮರೆಮಾಚಿಟ್ಟಿರಬಹುದೆಂದೂ





ವಿಮಾನ ಪತ್ತೆ ಕಾರ್ಯಾಚರಣೆ

ನಿಗೂಢವಾಗಿ ಕಣ್ಮರೆಯಾದ ವಿಮಾನಗಳು

ವಿಮಾನಗಳು ಹೀಗೆ ನಿಗೂಢವಾಗಿ ಕಣ್ಮರೆಯಾಗಿ ಹಲವು ದಿನಗಳವರೆಗೂ ಪತ್ತೆಯಾಗದೆ ಇರುವುದು ಮೊದಲ ಸಲವೇನಲ್ಲ. ಅಮೆರಿಕವನ್ನು ಒಳಗೊಂಡಂತೆ ಹಲವು ದೇಶಗಳಲ್ಲಿ ಇಂಥಾ ದುರ್ಘಟನೆಗಳು ಸಂಭವಿಸಿವೆ. ಕೆಲವು ಉದಾಹರಣೆಗಳನ್ನು ನೋಡಿ.

• 2009ರ ಜೂನ್‌ನಲ್ಲಿ ಬ್ರೆಜಿಲ್‌ನಿಂದ ಫ್ರಾನ್ಸ್‌ಗೆ ಹೊರಟ ವಿಮಾನ ಕೆಲವೇ ಗಂಟೆಗಳಲ್ಲಿ ನಿಗೂಢವಾಗಿ ಕಣ್ಮರೆಯಾಯಿತು. ಐದು ದಿನಗಳ ನಂತರ ಬ್ರೆಜಿಲ್ ದೇಶದ ನೌಕಾಪಡೆ ಅಟ್ಲಾಂಟಿಕ್ ಸಾಗರದಲ್ಲಿ ತೇಲುತ್ತಿದ್ದ ಅಪಘಾತಕ್ಕೀಡಾದ ವಿಮಾನದ ಅವಶೇಷದ ತುಣುಕೊಂದನ್ನು ಮತ್ತು ಎರಡು ಮೃತದೇಹಗಳನ್ನು ಹೊರತೆಗೆಯಿತು. ಆದರೆ ಇದಾದ ನಂತರ ವಿಮಾನದ ಪ್ರಮುಖ ಭಾಗಗಳನ್ನು ಪತ್ತೆಹಚ್ಚಲು ನಡೆಸಿದ ಎಲ್ಲ ಪ್ರಯತ್ನಗಳು ವಿಫಲಗೊಂಡಿದ್ದವು. ಸುಮಾರು ಎರಡು ವರ್ಷಗಳ ನಂತರವಷ್ಟೆ, ಅಂದರೆ 2011ರ ಮೇನಲ್ಲಿ ವಿಮಾನದ ಪ್ರಮುಖ ಭಾಗವನ್ನು ಅಟ್ಲಾಂಟಿಕ್ ಸಾಗರದಿಂದ ಹೊರತೆಗೆಯಲಾಯಿತು.

• 2007ರಲ್ಲಿ ಇಂಡೋನೇಷಿಯಾ ಏರ್‌ಲೈನ್ಸ್‌ನ ವಿಮಾನ ಪತನಗೊಂಡಿತು. ಕೆಲದಿನಗಳ ನಂತರ ವಿಮಾನದ ಒಂದು ರೆಕ್ಕೆ ಪತ್ತೆಯಾಯಿತು. ಒಂಬತ್ತು ತಿಂಗಳ ನಂತರ ವಿಮಾನದ ಪ್ರಮುಖ ಭಾಗ ಪತ್ತೆಯಾಯಿತಾದರೂ ಅದು ಇನ್ನೂ ಸಾಗರ ತಳದಲ್ಲೇ ಇದೆ.

• 1995ರಲ್ಲಿ ಇಂಡೋನೇಷಿಯದ ದ್ವೀಪವೊಂದರಿಂದ ನಾಪತ್ತೆಯಾದ ಮತ್ತೊಂದು ವಿಮಾನದ ಸುಳಿವು ಇನ್ನೂ ಸಿಕ್ಕಿಲ್ಲ.

• 1990ರಲ್ಲಿ ಪೆರು ದೇಶದ ಬೋಯಿಂಗ್ 727 ವಿಮಾನದಲ್ಲಿದ್ದ ಇಂಧನ ಖಾಲಿಯಾಗಿ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಪತನಗೊಂಡಿತು. ಅದರ ಅವಶೇಷಗಳು ಇನ್ನೂ ಪತ್ತೆಯಾಗಿಲ್ಲ.


• 1962ರಲ್ಲಿ ಫಿಲಿಪ್ಪೈನ್ಸ್ ಮಾರ್ಗವಾಗಿ ವಿಯೆಟ್ನಾಂಗೆ 107 ಪ್ರಯಾಣಿಕರನ್ನು ಹೊತ್ತು ಹೊರಟಿದ್ದ ಅಮೆರಿಕನ್ ಮಿಲಿಟರಿ ವಿಮಾನ ನಿಗೂಢವಾಗಿ ನಾಪತ್ತೆಯಾಯಿತು. ಡಜನ್‌ಗಟ್ಟಲೆ ವಿಮಾನಗಳು ಮತ್ತು ಹಡಗುಗಳು ಶೋಧ ಕಾರ್ಯದಲ್ಲಿ ತೊಡಗಿಕೊಂಡರೂ, ಅದರ ಸುಳಿವು ಪತ್ತೆಯಾಗದೆ ಕೊನೆಗೆ ಅಮೆರಿಕ ಕೈಚೆಲ್ಲಿತು.

• 1972ರಲ್ಲಿ ಉರುಗ್ವೆ ದೇಶದ ರಗ್‌ಬೈ ಕ್ರೀಡಾ ತಂಡ ಮತ್ತು ಅವರ ಬಳಗದವರನ್ನು ಹೊತ್ತು ಹೊರಟಿದ್ದ ವಿಮಾನದ ಪ್ರತಿಕೂಲ ಹವಾಮಾನದಿಂದಾಗಿ ರೆಕ್ಕೆಯೊಂದು ಆಂಡೀಸ್ ಪರ್ವತ ಶ್ರೇಣಿಗೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾಯಿತು.

ಪತನಗೊಂಡ ವಿಮಾನವನ್ನು ಪತ್ತೆಹಚ್ಚುವಲ್ಲಿ ಸರ್ಕಾರಗಳು ನಡೆಸಿದ ಎಲ್ಲ ಪ್ರಯತ್ನಗಳು ವಿಫಲವಾದವು. ಆದರೆ ಕೊರೆಯುವ ಚಳಿಯಲ್ಲಿ ಹಿಮಪರ್ವತದಲ್ಲಿ ಬದುಕುಳಿದ ಸುಮಾರು 18 ಮಂದಿ ಬೇರೆ ವಿಧಿಯಿಲ್ಲದೆ ತಮ್ಮ ಬಂಧುಗಳ ಕಳೇಬರವನ್ನೇ ತಿಂದು ಪ್ರಾಣ ಉಳಿಸಿಕೊಂಡರು. ಅಂತಿಮವಾಗಿ ಈ ತಂಡದ ಇಬ್ಬರು ಸದಸ್ಯರು ಹೇಗೋ ಹಿಮಪರ್ವತವನ್ನೇರಿ ದೂರದ ಹಳ್ಳಿಯೊಂದನ್ನು ತಲುಪುವಲ್ಲಿ ಯಶಸ್ವಿಯಾದರು. 72 ದಿನಗಳ ನಂತರ ಹೀಗೆ ಚಿಲಿ ದೇಶದ ಒಂದು ಊರನ್ನು ತಲುಪಿದ ಸದಸ್ಯರು ನೀಡಿದ ಮಾಹಿತಿಯನ್ನಾಧರಿಸಿ ಅಂತಿಮವಾಗಿ ಅಪಘಾತ ಸ್ಥಳದಲ್ಲಿದ್ದ 16 ಜನರನ್ನು ರಕ್ಷಿಸಲಾಯಿತು.

ಒಂದು ಹುಲ್ಲುಕಡ್ಡಿಯಾಗಲಿ, ಯಾವುದೇ ಜೀವಜಂತು, ಪ್ರಾಣಿ ಪಕ್ಷಿಗಳಾಗಲೀ ಕಂಡುಬರದ ಹಿಮಪರ್ವತ ಶ್ರೇಣಿಯಲ್ಲಿ ಸತತ 72 ದಿನಗಳ ಕಾಲ ಸಾವಿನ ಜೊತೆ ಸೆಣಸಾಡಿ ಗೆದ್ದುಬಂದ ಈ ವೀರಯೋಧರ ಕುರಿತಾಗಿ ಜಗತ್ತಿನಾದ್ಯಂತ ಹಲವು ಭಾಷೆಗಳಲ್ಲಿ ಹತ್ತಾರು ಸಾಕ್ಷ್ಯಚಿತ್ರಗಳು, ಅಡ್ವೆಂಚರ್ ಸಿನಿಮಾಗಳು ಬಂದಿವೆ.

ಮಲೇಷಿಯ ಏರ್‌ಲೈನ್ಸ್‌ನ ನತದೃಷ್ಟ ಪ್ರಯಾಣಿಕರೂ ಹೀಗೆ ಪವಾಡ ಸದೃಶವಾಗಿ ಮರಳಿ ಬರಲಿ ಎಂದು ಆಶಿಸೋಣ.



ಇಲ್ಲಿ ಪತ್ತೆಯಾಗಿರುವ ಅವಶೇಷಗಳು ನಿಗೂಢವಾಗಿ ಕಣ್ಮರೆಯಾದ ವಿಮಾನದ್ದ?

ವಿಮಾನದ ಬಣ್ಣ ಮತ್ತು ಚಹರೆಯನ್ನು ಬದಲಾಯಿಸಿರಬಹುದೆಂದೂ ತಮ್ಮ ಹಳೆಯ ಗುಜರಿ ಚಿಂತನೆಗಳನ್ನು ಕೆಲವು 'ತಜ್ಞರು' ಹರಿಯಬಿಟ್ಟರು. ರೋಚಕ ಸುದ್ದಿಗಳಿಗಾಗಿ ಕಾಯುತ್ತಿರುವ ಮಾಧ್ಯಮಗಳು ಈ ಪ್ರಕರಣಕ್ಕೆ ದಿನಕ್ಕೊಂದು ಹೊಸ ತಿರುವು ನೀಡಿ ಧನ್ಯವಾದವು.

ಅಷ್ಟರಲ್ಲಿ ವಿಮಾನದಲ್ಲಿದ್ದ ಪ್ರಯಾಣಿಕರ ಪೈಕಿ ಇಬ್ಬರು ಕಳುವಾದ ಪಾಸ್‌ಪೋರ್ಟ್‌ಗಳನ್ನು ಬಳಸಿ ವಿಮಾನ ಏರಿದ್ದಾರೆಂಬ ಸುದ್ದಿ ಹರಡಿ ಮೇಲಿನ ಭಯೋತ್ಪಾದಕ ಕತೆಗಳಿಗೆ ಮತ್ತಷ್ಟು ಇಂಬು ಸಿಕ್ಕಂತಾಯಿತು. ಆದರೆ ಹೀಗೆ ನಕಲಿ ಪಾಸ್‌ಪೋರ್ಟ್ ಮೂಲಕ ಪ್ರಯಾಣಿಸುತ್ತಿದ್ದ ಇಬ್ಬರು ವ್ಯಕ್ತಿಗಳ ಪೂರ್ವಾಪರವನ್ನು ಜಾಲಾಡಿದ ಮಲೇಷಿಯಾ, ಚೀನಾ ಹಾಗೂ ಇಂಟರ್‌ಪೋಲ್ ಅಧಿಕಾರಿಗಳು ಹೀಗೆ ಪ್ರಯಾಣಿಸುತ್ತಿದ್ದ ಆ ಇಬ್ಬರು ಇರಾನಿ ಪ್ರಜೆಗಳು ಉದ್ಯೋಗ/ಆಶ್ರಯಕ್ಕಾಗಿ ವಾಮಮಾರ್ಗ ಅನುಸರಿಸಿದ್ದಾರೆಂದೂ, ಭಯೋತ್ಪಾದನೆ ಜೊತೆಗೆ ಅವರಿಗೆ ಯಾವುದೇ ನಂಟಿಲ್ಲವೆಂದೂ ಸ್ಪಷ್ಟಪಡಿಸಿದ್ದಾರೆ.

ಭಯೋತ್ಪಾದನೆ ಪ್ರಿಯ ಅಮೆರಿಕ ಹಾಗೂ ನಮ್ಮ ಸುದ್ದಿ ಮಾಧ್ಯಮಗಳಿಗೆ ಇನ್ನು ಉಳಿದಿರುವುದು ಒಂದೇ ಆಯ್ಕೆ, ಅದು ವಿಮಾನ ಚಾಲನೆಯಲ್ಲಿದ್ದ ಪೈಲಟ್‌ಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು. ಅದರಲ್ಲೂ ಹೇಳಿಕೇಳಿ ಮಲೇಷಿಯಾ ಮುಸ್ಲಿಂ ಪ್ರಾಬಲ್ಯವಿರುವ ದೇಶ. ವಿಮಾನದ ಪೈಲಟ್‌ಗಳೂ ಮುಸ್ಲಿಂ ಧರ್ಮೀಯರೇ.

ಏನಾದರೂ ಸುಳಿವು ಸಿಗಬಹುದೆಂಬ ಗುಮಾನಿಯಿಂದ ಮಲೇಷಿಯಾದ ಅಧಿಕಾರಿಗಳು ಪೈಲಟ್‌ಗಳ ಮನೆಯನ್ನು ಜಾಲಾಡಿದ್ದಾರೆ. ಹಿರಿಯ ಪೈಲಟ್‌ನ ಮನೆಯಲ್ಲಿ ವಿಮಾನ ಮಾರ್ಗಗಳನ್ನು ಸೂಚಿಸುವ ಸಿಮ್ಯುಲೇಟರ್ ಸಿಕ್ಕಿದ್ದು ಅದರಲ್ಲಿ ಹಲವಾರು ವಾಯುಮಾರ್ಗಗಳ ಕುರಿತು ವಿವರಣೆಯಿದೆ. ವಿಮಾನಯಾನದ ಬಗ್ಗೆ ಭಾರೀ ಸೆಳೆತ ಹೊಂದಿದ್ದ ಆ ಹಿರಿಯ ಪೈಲಟ್ ಬಳಿ ಇಂಥಾ ಮಾಹಿತಿ ಇರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಎಂದು ಆತನ ಸಹೋದ್ಯೋಗಿಗಳು ಹಾಗೂ ಮಿತ್ರರು ತಿಳಿಸಿದ್ದಾರೆ. ಅಲ್ಲಿಗೆ ಸಿಮ್ಯುಲೇಟರ್ ಕತೆ ಮುಗಿಯಿತು ಎಂದುಕೊಳ್ಳುವಷ್ಟರಲ್ಲಿ ಸಿಮ್ಯುಲೇಟರ್‌ನಿಂದ ಕೆಲವು ಮಾಹಿತಿಗಳನ್ನು ಸುಮಾರು ಒಂದು ತಿಂಗಳ ಹಿಂದೆ ಅಳಿಸಿಹಾಕಲಾಗಿದೆ ಎಂಬ ಸಂಗತಿಯನ್ನು 'ಭಾರೀ ಸಂಶೋಧನೆಯೆಂಬಂತೆ ಜಗತ್ತಿನಾದ್ಯಂತ ಬಿತ್ತರಿಸಲಾಗಿದೆ.

ಈ ಸಿಮ್ಯುಲೇಟರ್‌ನ್ನು ತನಿಖೆಯನ್ನು ಅಮೆರಿಕದ ಎಫ್‌ಬಿಐ ವಹಿಸಿಕೊಂಡಿದೆ. ಅಳಿಸಿಹಾಕಲಾದ ದತ್ತಾಂಶಗಳನ್ನು ಮರಳಿ ಪಡೆದುಕೊಳ್ಳುವ 'ಸಾಹಸ ಕಾರ್ಯ'ದಲ್ಲಿ ಪೆಂಟಗಾನ್ ತೊಡಗಿಸಿಕೊಂಡಿದೆ.

ಹೀಗೆ ತೀವ್ರ ಗೊಂದಲದ ಸನ್ನಿವೇಶ ನಿರ್ಮಾಣವಾಗಿರುವುದರಿಂದ ವಿಮಾನದಲ್ಲಿದ್ದವರ ಬಂಧುಗಳು ಮತ್ತಷ್ಟು ಆತಂಕಿತರಾಗಿ ಶೋಧಕಾರ್ಯವನ್ನು ಚುರುಕುಗೊಳಿಸುವಂತೆ ಹಲವೆಡೆ ಪ್ರತಿಭಟನೆಗೆ ಮುಂದಾಗಿದ್ದಾರೆ.

ಅಮೆರಿಕ ಮತ್ತು ಪ್ರಪಂಚಾದ್ಯಂತ ಸುದ್ದಿ ಮಾಧ್ಯಮಗಳು ಬೆಟ್ಟ ಅಗೆದು ಇಲಿಯನ್ನೂ ಹಿಡಿಯಲಾಗದೇ ದಿಕ್ಕೆಟ್ಟು ಕೂತಿವೆ. ಆದರೆ ವಾಯುಯಾನದ ಬಗ್ಗೆ ಪರಿಣತಿ ಹೊಂದಿರುವ ತಜ್ಞರು ಹೇಳುವುದೇ ಬೇರೆ. ಈ ಘಟನಾವಳಿಗಳನ್ನು ವಿಶ್ಲೇಷಿಸಿರುವ ಕೆಲ ತಜ್ಞರ ಪ್ರಕಾರ ವಿಮಾನ ತಾಂತ್ರಿಕ ದೋಷದಿಂದ ಅಪಘಾತಕ್ಕೀಡಾಗಿರುವ ಸಾಧ್ಯತೆ ನಿಚ್ಚಳವಾಗಿದೆ. ಕೆಲವು ಪ್ರತ್ಯಕ್ಷದರ್ಶಿಗಳು ಕೊಟ್ಟಿರುವ ಹೇಳಿಕೆಗಳೇ ಅದಕ್ಕೆ ಸ್ಪಷ್ಟ ಪುರಾವೆ.


ಇದೇ 8 ನೇ ತಾರೀಕು ರಾತ್ರಿ ಸುಮಾರು 1.20ರ ವೇಳೆಯಲ್ಲಿ ಮಲೇಷಿಯಾದ ಪೂರ್ವ ಕರಾವಳಿಯ ಮರಾಂಗ್ ಬೀಚ್‌ನಲ್ಲಿ 8 ಮಂದಿ ಹಳ್ಳಿಗರು ವಿಹರಿಸುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಭಾರೀ ಶಬ್ದವೊಂದು ಇವರತ್ತಲೇ ನುಗ್ಗಿಬಂದಂತೆ ಕೇಳಿಬರುತ್ತಿತ್ತು, ಇದರಿಂದ ಭಯಭೀತರಾದ ಈ ಮಂದಿ ಅಲ್ಲಿಂದ ಕಾಲ್ಕಿತ್ತರು. ಆದರೆ ಸ್ವಲ್ಪ ಸಮಯದಲ್ಲೇ ಶಬ್ದ ಮರೆಯಾಯಿತು. ಈ ವೈಚಿತ್ರ್ಯವನ್ನು ಹಳ್ಳಿಗರು ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿ ದಾಖಲಿಸಿದ್ದಾರೆ.

ಅಲಿಫ್ ಫಾತಿ ಎಂಬ 29 ವರ್ಷದ ವ್ಯಾಪಾರಿ ಅದೇ 8ರ ರಾತ್ರಿ ಸುಮಾರು 1.45ರ ವೇಳೆಯಲ್ಲಿ ಮರಾಂಗ್ ಬೀಚ್‌ನಿಂದ ಸುಮಾರು 150 ಕಿಮೀ ದೂರದಲ್ಲಿರುವ ಬಚೋಕ್ ಬೀಚ್‌ನ ಬಳಿಯಿರುವ ತನ್ನ ಮನೆಯ ಕಾಂಪೌಂಡ್‌ನಲ್ಲಿ ನಿಂತಿದ್ದ. ಆಗ ಪ್ರಜ್ವಲಿಸುತ್ತಿದ್ದ ಬಿಳಿ ಬಣ್ಣದ ಬೆಳಕೊಂದು ಆಕಾಶದಿಂದ ಸಮುದ್ರದತ್ತ ಧಾವಿಸಿ ಬರುತ್ತಿದ್ದನ್ನು ಗಮನಿಸಿದ. ಆಕಾಶದ ಮೇಲಿನಿಂದ ನೇರವಾಗಿ ಕುಸಿದು ಬೀಳುತ್ತಿದ್ದಂತೆ ಕಾಣುತ್ತಿದ್ದ ಆ ಬೆಳಕು ಸುಮಾರು 5 ನಿಮಿಷಗಳಲ್ಲಿ ಕಣ್ಮರೆಯಾಯಿತು.

ಮರುದಿನ ವಿಮಾನ ನಾಪತ್ತೆಯ ಸುದ್ದಿ ಕೇಳಿದ ಅಲಿಫ್ ತಾನು ಹಿಂದಿನ ರಾತ್ರಿ ಕಣ್ಣಾರೆ ಕಂಡ ಸಂಗತಿಯನ್ನು ಮಲೇಷಿಯನ್ ಕರಾವಳಿ ರಕ್ಷಣಾ ಪಡೆಯ ಅಧಿಕಾರಿಗಳಿಗೆ ತಿಳಿಸಿದ.


ಈ ಮೇಲಿನ ಎರಡೂ ಸಂಗತಿಗಳು ರಾಡಾರ್‌ನಿಂದ ಪಡೆಯಲಾಗಿರುವ ಮಾಹಿತಿ ಹಾಗೂ ಉಪಗ್ರಹದ ಮಾಹಿತಿಗಳ ಜೊತೆ ಪರಸ್ಪರ ಹೊಂದಾಣಿಕೆಯಾಗುತ್ತವೆ ಎಂದು 'ಇಂಡಿಯನ್ ಏವಿಯೇಷನ್‌ನ್ಯೂಸ್ ನೆಟ್'ನ ಸಂಪಾದಕ ಜಾಕೋಬ್ ಕೆ ಫಿಲಿಪ್ ಅಭಿಪ್ರಾಯಪಟ್ಟಿದ್ದಾರೆ.

ಆದರೆ ಈ ವಿಷಯವನ್ನು ಮಲೇಷಿಯಾ ಸರ್ಕಾರವಾಗಲಿ, ಇನ್ನಿತರೆ ಯಾವುದೇ ದೇಶವಾಗಲಿ ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಚೀನಾದ ಟಿಬೆಟ್ ಪ್ರಾಂತ್ಯದಲ್ಲಿ, ಆಸ್ಟ್ರೇಲಿಯಾದ ತೀರ ಪ್ರದೇಶ, ಭಾರತದ ಅಂಡಮಾನ್ ನಿಕೋಬಾರ್ ದ್ವೀಪ ಪ್ರದೇಶ ಹೀಗೆ ಭಿನ್ನವಿಭಿನ್ನವಾದ ಪ್ರದೇಶಗಳಲ್ಲಿ ಶೋಧಕಾರ್ಯ ನಡೆದಿದೆ. ಮಲೇಷಿಯ ಸರ್ಕಾರದ ಮನವಿಯ ಮೇರೆಗೆ ಭಾರತದ ವಾಯುಪಡೆ ಹಾಗೂ ನೌಕಾಪಡೆಯ ಹಲವು ನೌಕೆಗಳು ಶೋಧ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಹಲವು ಊಹಾಪೋಹಗಳು ಕೇಳಿಬಂದ ಹಿನ್ನೆಲೆಯಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಹಾಗೂ ಬಂಗಾಳಕೊಲ್ಲಿಯ ಸುತ್ತಣ ಸುಮಾರು 500 ಕಿಮೀ ಸಮುದ್ರ ಪ್ರದೇಶದಲ್ಲಿ ಜಾಲಾಡಿದರೂ ಯಾವುದೇ ಕುರುಹು ಪತ್ತೆಯಾಗಿಲ್ಲ.



ತಂತ್ರಜ್ಞಾನ, ವಿಜ್ಞಾನದ ಅಭಿವೃದ್ಧಿಯ ಮಾತುಗಳೆಲ್ಲಾ ಇಲ್ಲಿ ಅರ್ಥಹೀನವಾದಂತೆ ಕಾಣಿಸುತ್ತಿವೆ. ತಮ್ಮ ವೈಫಲ್ಯವನ್ನು ಮರೆಮಾಚಿಕೊಳ್ಳಲು ಸರ್ಕಾರಗಳು ಯಾವುದೇ ಸಾಕ್ಷಿ ಪುರಾವೆ ಏನೂ ಇಲ್ಲದಿದ್ದರೂ ಇದನ್ನು ಭಯೋತ್ಪಾದಕ ಕೃತ್ಯವೆಂದು ಸಾರಾಸಗಟಾಗಿ ಸಾರಿಬಿಡಲು ತುದಿಗಾಲಲ್ಲಿ ನಿಂತಿವೆ. ಸರ್ಕಾರಗಳ ವೈಫಲ್ಯವನ್ನು ಬೇಜವಾಬ್ದಾರಿತನವನ್ನು ಬಯಲಿಗೆಳೆಯಬೇಕಾಗಿದ್ದ ಸುದ್ದಿ ಮಾಧ್ಯಮಗಳು ರೋಚಕತೆಯ ಬೆನ್ನು ಹತ್ತಿ ಬಾಯಿ ಚಪ್ಪರಿಸುತ್ತಿವೆ. ಮತ್ತೊಂದೆಡೆ ಕಳೆದುಹೋದವರಿಗಾಗಿ ಬಂಧುಗಳ ಆಕ್ರಂದನ ಮುಗಿಲುಮುಟ್ಟಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ




ವಿಮಾನ ಪತ್ತೆ ಕಾರ್ಯಾಚರಣೆ

ಅಣ್ಣಾವ್ರ ಮನೆಯ ಮಾನ ಸೊಸೆ ಕೈಗೆ?




ಚುನಾವಣೆ ಮತ್ತು ರಾಜಕಾರಣ ಕುರಿತಂತೆ ವರನಟ ರಾಜ್ ಸ್ಪಷ್ಟ ನಿಲುವೊಂದಕ್ಕೆ ಬರಲೇಬೇಕಾದ ಅನಿವಾರ್ಯ ಸನ್ನಿವೇಶವೊಂದು ತಲೆಯೆತ್ತಿದ್ದು 1987ರಲ್ಲಿ. ಆವತ್ತು ಬೆಂಗಳೂರಿನ ಮಲ್ಲೇಶ್ವರಕ್ಕೆ ಅಖಿಲ ಕರ್ನಾಟಕ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧಿಕೃತ ಅಭ್ಯರ್ಥಿ ಎಂದೇ ಕಣಕ್ಕಿಳಿದಿದ್ದ ಅಭಿಮಾನಿ ಸಮೂಹದ ಮಾಲಿಕ ಟಿ. ವೆಂಕಟೇಶ್ ಆ ಹೊತ್ತಿಗೆ ಸಂಘದ ಪ್ರಧಾನ ಕಾರ್ಯದರ್ಶಿ. ಮಲ್ಲೇಶ್ವರವೆಂದರೆ ಅದು ಮಾಮೂಲಿನ ಕ್ಷೇತ್ರವೇನಲ್ಲ, ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಪ್ರತಿಷ್ಠೆ, ವರ್ಚಸ್ಸಿಗೇ ಸವಾಲೆಂಬಂತೆ ಜನತಾ ಪಕ್ಷದ ಅಭ್ಯರ್ಥಿಯಾಗಿದ್ದ ಎಂ. ರಘುಪತಿಯವರ ವಿರುದ್ಧ ಎನ್‌ಟಿಆರ್ 'ತೆಲುಗುದೇಶಂ' ಸ್ಥಾಪಿಸಿ ಮುಖ್ಯಮಂತ್ರಿಯಾದಂತೆ ಕರ್ನಾಟಕದಲ್ಲಿ ರಾಜ್ ಪ್ರಾದೇಶಿಕ ಪಕ್ಷ ಸ್ಥಾಪಿಸಿ ಮುಖ್ಯಮಂತ್ರಿಯಾಗಲಿದ್ದಾರೆಂಬ ನಿರೀಕ್ಷೆಯಿತ್ತು. ಮಲ್ಲೇಶ್ವರದಲ್ಲಿ ರಾಜ್ ಅಭಿಮಾನಿ ಸಂಘವನ್ನು ಬೆಂಬಲಿಸಿದ್ದ ಬಿಜೆಪಿಯೇ ಆರೆಸ್ಸೆಸ್ ಮೂಲಕ ಅಂಥಾದ್ದೊಂದು ಪ್ರಯತ್ನಕ್ಕೆ ಕೈಯಿಟ್ಟಿತ್ತು. ನೀವು ರಾಜಕೀಯಕ್ಕೆ ಬರೋದಾದ್ರೆ ನಾನು ಕುದುರೆ ಆಗ್ತೀನಿ ಎಂದೇ ಬಹಿರಂಗವಾಗಿ ಎ.ಕೆ. ಸುಬ್ಬಯ್ಯ ಆಹ್ವಾನವಿತ್ತಾಗಲೂ ರಾಜ್ ಅದನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿ ಸುಬ್ಬಯ್ಯನವರ ಕೆಂಗಣ್ಣಿಗೆ ಗುರಿಯಾದರು. ಮುಂದೆ ಇದೇ ರಾದ್ಧಾಂತವಾಗಿ ಅಭಿಮಾನಿಗಳಿಗೂ, ಸುಬ್ಬಯ್ಯನವರಿಗೂ ಘರ್ಷಣೆಯಾಯಿತು. ರಾಜಕಾರಣದ ಮಗನೆ. ರಾಜ್ ಕುಟುಂಬದ ಘನತೆಯ ಹಿತದೃಷ್ಟಿಯಿಂದಲೇ ಬಂಗಾರಪ್ಪ ಫ್ಯಾಮಿಲಿ ತನ್ನ ರಾಜಕೀಯವನ್ನು ನಿರ್ಧರಿಸಿದ್ದೇ ಆದ ಪಕ್ಷದಲ್ಲಿ ಆವತ್ತಿನಿಂದ ಈವತ್ತಿನ ತನಕ ರಾಜ್ ಕುಟುಂಬವನ್ನು ದ್ವೇಷಿಸುತ್ತಲೇ ಬಂದ ಕುಮಾರಸ್ವಾಮಿ ಮತ್ತು ದೇವೇಗೌಡರ ಮರ್ಜಿಗೆ ತಮ್ಮ ಕರುಳಕುಡಿಯನ್ನು ತಳ್ಳುತ್ತಿರಲಿಲ್ಲ!

ಸೂಕ್ಷ್ಮವಾಗಿ ಗಮನಿಸಿದರೆ; ಬಂಗಾರಪ್ಪನವರ ಕೊನೆಯಾಸೆಗೋ ಅಥವಾ ಅವರ ಶ್ರೀಮತಿಯವರಿಗೆ ಮಾರಕ ಕ್ಯಾನ್ಸರ್ ಎಂದೋ ರಾಜಕೀಯಕ್ಕೆ ಬರಲೇಬೇಕಾದ ಅನಿವಾರ್ಯತೆ ಖಂಡಿತಾ ಗೀತಾ ಶಿವರಾಜ್‌ಕುಮಾರ್‌ಗಿರಲಿಲ್ಲ. ಒಬ್ಬ ಅಣ್ಣ ಮತ್ತೊಬ್ಬ ತಮ್ಮ ಈಗಾಗಲೇ 'ಬಂ' ವಾರಸುದಾರಿಕೆಗೆ ಪೈಪೋಟಿಗಿಳಿದಾಗಿತ್ತು. ಮಧು ಬಂಗಾರಪ್ಪನವರನ್ನು ಸೊರಬದ ಜನ ಗೆಲ್ಲಿಸಿದ ಮೇಲೆ ಬಂಗಾರಪ್ಪನವರ ರಾಜಕೀಯ ಉತ್ತರಾಧಿಕಾರತ್ವವೂ ಸಾಬೀತಾಗಿತ್ತು. ಇನ್ನು ಲೋಕಸಭಾ ಚುನಾವಣೆಯಲ್ಲಿ ಯಡ್ಡಿ ಮಗನಿಂದಾದ ಸೋಲಿಗೆ ಪ್ರತೀಕಾರ ಅಂತಿದ್ದರೆ ಖುದ್ದು ಮಧುವೇ ಲೋಕಸಭೆಗೆ ನಿಲ್ಲುವ ಅವಕಾಶವಿತ್ತು.

ಕುಮಾರನ ದೋಖಾ

ಇಷ್ಟೆಲ್ಲವನ್ನೂ ಬದಿಗೊತ್ತಿ ಗೀತಾ ಶಿವರಾಜ್ ಕುಮಾರ್‌ರನ್ನೇ ಏಕೆ ಯಡ್ಡಿ ವಿರುದ್ಧ ಅಖಾಡಕ್ಕಿಳಿಸಲಾಗುತ್ತಿದೆಯೆಂದರೆ ತನ್ನ ರಾಜಕೀಯ ಹಿತಾಸಕ್ತಿಗೆ ರಾಜ್ ಕುಟುಂಬವನ್ನು ಪರೋಕ್ಷವಾಗಿಯಾದರೂ ಬಳಸಿಕೊಳ್ಳುವುದೇ ಬಂಗಾರಪ್ಪ ಫ್ಯಾಮಿಲಿಯ ಉದ್ದೇಶ. ಅದಕ್ಕಿರುವ ಇನ್ನೂ ಒಂದು ಉದ್ದೇಶವೆಂದರೆ ಬಂಗಾರಪ್ಪ ವಾರಸುದಾರಿಕೆಯಿಂದ ಕುಮಾರ್ ಬಂಗಾರಪ್ಪನನ್ನು ಶಾಶ್ವತವಾಗಿ ನಿವಾರಿಸುವುದು!

ತಂದೆಯ ಕೊನೆಗಾಲದಲ್ಲಿ ಹೆಂಡತಿಯನ್ನು ಓಲೈಸಲೆತ್ನಿಸಿ ತಂದೆತಾಯಿಯರನ್ನೇ ಮನೆಯಿಂದ ಹೊರದಬ್ಬಿದ್ದು, ಆಸ್ತಿ ವಿಷಯದಲ್ಲಿ ಒಡಹುಟ್ಟಿದವರನ್ನು ದೂರ ಮಾಡಿದ್ದು, ರಾಜಕೀಯವಾಗಿ ತಂದೆ ಆಣತಿಯನ್ನು ಧಿಕ್ಕರಿಸಿ ಕಾಂಗ್ರೆಸ್ ಪಕ್ಷದಲ್ಲಿ ಉಳಿದಿದ್ದು, ಮಗ ಮಾಡಿದ ದ್ರೋಹದ ಕೊರಗಿಗೆ



ಪಾರ್ವತಮ್ಮ, ಶಿವಣ್ಣನ ಜೊತೆ ಗೀತಾ, ರಾಘಣ್ಣ, ಪುನೀತ್

ಅಭಿಮಾನಿಗಳ ಸಂಘದ ಟಿ. ವೆಂಕಟೇಶ್ ಆರ್ಭಟ ಜೋರಾಗೇ ಇತ್ತು.

ಚಿತ್ರರಂಗದ ಹೆಸರಾಂತ ನಟನಟಿಯರೆಲ್ಲ ಮಲ್ಲೇಶ್ವರದ ಮೈದಾನಕ್ಕೆ ಬಂದು ವೆಂಕಟೇಶ್ ಪರ ಮತ ಯಾಚಿಸಿದರಾದರೂ ರಾಜ್ ಮಾತ್ರ ಈ ಬಗ್ಗೆ ನಿರ್ಲಿಪ್ತರಾಗೇ ಇದ್ದುಬಿಟ್ಟರು. ಕೊನೆಗೆ ವಿಧಿಯಿಲ್ಲದೆ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ಮತ್ತು ವೆಂಕಟೇಶ್ ನೇರವಾಗಿ ರಾಜ್‌ರನ್ನೇ ಭೇಟಿಯಾಗಿ 'ನೀವು ಬೇರೆ ಏನೂ ಮಾಡೋದು ಬೇಡ; ಸುಮ್ಮನೆ ಅರ್ಧ ದಿನದ ಮಟ್ಟಿಗೆ ಆನೆ ಮೇಲೆ ಕೂತು ಮಲ್ಲೇಶ್ವರಕ್ಕೊಂದು ಸುತ್ತು ಹಾಕಿ ಜನಕ್ಕೆ ಕೈ ಮುಗಿದರೆ ಸಾಕು, ನಾವು ಗೆದ್ದು ಬಿದ್ತೀವಿ...!' ಎಂದು ಸಂಘದ ನಾಯಕರಿಬ್ಬರೂ ಅಂಗಲಾಚಿದ್ದಕ್ಕೆ ರಾಜ್ ಪ್ರತಿಕ್ರಿಯೆಯೂ ಆಘಾತಕಾರಿಯಾಗಿತ್ತು.



'ನೋಡೀ... ಬೇಕಿದ್ರೆ ಈ ಸಂಘಾನೇ ಬಂದ್ ಮಾಡಿಬಿಡಿ. ನೀವು ಸಂಘ ಕಟ್ಕೊಂಡ್ ಮಾತ್ರಕ್ಕೆ ನನಗೆ ಅಭಿಮಾನಿಗಳಿಗೆ ಗತಿಯಿಲ್ಲ ಅಂತ ತಿಳ್ಕೊಂಡಿದ್ದೀರಾ? ನಿಮ್ಮನ್ನ ಎಲೆಕ್ಷನ್ನಿಗೆ ನಿಂತ್ಕೊಳ್ಳಿ ಅಂತ ನಾನು ಹೇಳಿದ್ನಾ? ನಾನು ಬಂದು ನಿಮಗೆ ಓಟು ಕೊಡಿ ಅಂತ ಪ್ರಚಾರ ಮಾಡೋದು ಎಲ್ಲಾದ್ರೂ ಉಂಟಾ? ಅದು ನನ್ನಿಂದಾಗದ ಕೆಲಸ. ನಮ್ಮನ್ನ ಎಲೆಕ್ಷನ್ನಿಗೆ ಬಳಸೋದಕ್ಕೆ ಸಂಘ ಇರೋದಾದ್ರೆ ನನಗೆ ಈ ಅಭಿಮಾನಿಗಳ ಸಂಘಾನೇ ಬೇಕಿಲ್ಲ...!'

ಎ.ಕೆ. ಸುಬ್ಬಯ್ಯ

ಇದು ಆವತ್ತು ಅಭಿಮಾನಿಗಳ ಸಂಘದ ಮುಖಂಡರೆದುರು ರಾಜ್ ತೋರಿದ ತಿರಸ್ಕಾರದ ರೀತಿ. ಗೋಕಾಕ್ ವರದಿ ಹೋರಾಟದ ನಂತರ ಆಂಧ್ರದಲ್ಲಿ ಕುರಿತ ರಾಜ್ ನಿರ್ಧಾರವನ್ನು ಸ್ಪಷ್ಟವಾಗೇ ಅರಿತಿದ್ದ ಬಂಗಾರಪ್ಪ ಕೂಡ ತನ್ನ ನೆಂಟಸ್ಥಿಕೆಯ ಮುಲಾಜಿಗೆ ಅವರನ್ನು ರಾಜಕೀಯಕ್ಕೆಳೆಯಲು ಯಾವತ್ತಿಗೂ ಯತ್ನಿಸಿದ್ದಿಲ್ಲ.

ಈಗ ಅವರ ಸೊಸೆ ತಂದ ಸಂಕಟವಿದೆಯಲ್ಲ; ಅದು ನಿಜಕ್ಕೂ ಉಭಯ ಸಂಕಟವೆ. ಬಿಜೆಪಿಯ ದೈತ್ಯ ಯಡ್ಡಿಯ ವಿರುದ್ಧ ಶಿವಮೊಗ್ಗದಲ್ಲಿ ಗೀತಾ ಶಿವರಾಜ್‌ಕುಮಾರ್ ಅಖಾಡಕ್ಕಿಳಿದಿರುವುದು ಕೇವಲ ಜೆಡಿಎಸ್-ಬಿಜೆಪಿ ನಡುವಿನ ಹಣಾಹಣಿಯಾಗಷ್ಟೇ ಉಳಿದಿಲ್ಲ, ಬಂಗಾರಪ್ಪ ಮಗಳಾಗಷ್ಟೇ ಗೀತಾ ಚುನಾವಣೆಗೆ ನಿಂತಿದ್ದರೆ ಆ ಮಾತು ಬೇರೆ. ಬದುಕಿನ ಕೊನೆಗಾಲದಲ್ಲಿ ಬಂಗಾರಪ್ಪನವರನ್ನು ತನ್ನ ಅಧಿಕಾರ ಬಳಸಿ ಸೋಲಿಸಿದ ಯಡ್ಡಿ ವಿರುದ್ಧ ಮಲೆನಾಡಿನ ಈಡಿಗರ ಆಕ್ರೋಶವೋ, ಲಿಂಗಾಯತರ ಜಾತಿ ವೈಷಮ್ಯದ ಇದಿರಾಗಿ ಸಹ್ಯಾದ್ರಿ ತಪ್ಪಲಿನ ಕೆಳ ಜಾತಿಗಳ ದಾವಾನಿಲವೋ, ಶಿವಮೊಗ್ಗದ ರಾಜಕಾರಣದಲ್ಲಿ ಬಂಗಾರಪ್ಪ ಕುಟುಂಬದ ಅಸ್ತಿತ್ವದ ಪ್ರಶ್ನೆಗಷ್ಟೇ ಗೀತಾ ಶಿವರಾಜ್‌ಕುಮಾರ್ ರಾಜಕೀಯದ ಅರಂಗೇಟ್ರಂ ವ್ಯಕ್ತವಾಗುತ್ತಿಲ್ಲ.

ಗೀತಾ ಈಗ ಕೇವಲ ಬಂಗಾರಪ್ಪನವರ ಮಗಳಷ್ಟೇ ಅಲ್ಲ, ಕರ್ನಾಟಕದ ರತ್ನತ್ರಯರಲ್ಲೊಬ್ಬರಾದ ವರನಟ ರಾಜ್‌ಕುಮಾರರ ಮುದ್ದಿನ ಸೊಸೆ!

ರಾಜ್ ಸೊಸೆ!

'ತಾಯಿಗೆ ಅಸಾಧ್ಯ ಕ್ಯಾನ್ಸರ್. ಬಂಗಾರಪ್ಪನವರ ತರುವಾಯ ಅವರ ಸ್ಥಾನದಲ್ಲಿ ತಾನು ಚುನಾವಣೆಗೆ ನಿಲ್ಲಬೇಕೆಂಬ ತಾಯಿಯ ಬಯಕೆ ಈಡೇರಿಸಲೆಂದೇ ಗೀತಕ್ಕ ಚುನಾವಣೆಗೆ ನಿಲ್ಲಬೇಕಾಯ್ತು, ತಾಯಿಯ ಕೊನೆಯಾಸೆ ಈಡೇರದೇ ಹೋದರೆ ಏನು ಅನಾಹುತವಾಗುತ್ತೋ...!' ಎಂದು ಕಣ್ಣೀರಿಡುವ ಮಧು ಬಂಗಾರಪ್ಪನ ವರಸೆಯಾಗಲಿ 'ಗೀತಾ ಬಂಗಾರಪ್ಪನವರ ಮಗಳಾಗಿ ಮಾತ್ರವೇ ಚುನಾವಣೆಗೆ ನಿಂತಿದ್ದಾರೆಯೇ ಹೊರತು ಇದಕ್ಕೂ ರಾಜ್ ಕುಟುಂಬಕ್ಕೂ ಏನೇನೂ ಸಂಬಂಧವಿಲ್ಲ' ಎಂಬ ಶಿವಣ್ಣನ ಪಿಳ್ಳೆ ನೆಪವಾಗಲಿ ಯಾರಿಗೂ ಏಕೆ ಮುಖ್ಯವಾಗಿ ಕಾಣಿಸುತ್ತಿಲ್ಲವೆಂದರೆ-

ಗೀತಾ ಇಲ್ಲಿ ಕೇವಲ ಬಂಗಾರಪ್ಪನವರ ಮಗಳಾಗಷ್ಟೇ ಕಣಕ್ಕಿಳಿದಿಲ್ಲ!

ಬಂಗಾರಪ್ಪನವರ ಮಕ್ಕಳ ಪೈಕಿ ಪ್ರಜಾವಾಣಿಯ ಮಾಲಿಕ ತಿಲಕ್‌ಕುಮಾರ್ ಪತ್ನಿ ಸುಜಾತಾ, ಮದ್ಯೋದ್ಯಮಿ ಪವನ್‌ಕುಮಾರ್ ಪತ್ನಿ ಕೊನೇ ಮಗಳು ಅನಿತಾ, ಮಗ ಕುಮಾರ್ ಬಂಗಾರಪ್ಪ ಇತ್ಯಾದಿಗಳೆಲ್ಲರನ್ನೂ ಬಿಟ್ಟು ಗೀತಾರನ್ನಷ್ಟೇ ಏಕೆ ಸ್ಪರ್ಧೆಗಿಳಿಸಲಾಯ್ತು?

ಏಕೆಂದರೆ ಗೀತಾ ಶಿವಣ್ಣನ ಮಡದಿ ಮತ್ತು ವರನಟ ರಾಜ್‌ರ ಪ್ರತಿಷ್ಠಿತ ಸೊಸೆ. ಕೌಟುಂಬಿಕ ವೈಮನಸ್ಯ ಏನೇ ಇದ್ದರೂ ಕುಮಾರ್ ಬಂಗಾರಪ್ಪ ಕೂಡ ಬಂಗಾರಪ್ಪನವರ

ಬಗಲ್‌ಮೆ ದುಷ್ಮನ್ ಅಪ್ಪಾಜಿ ಭದ್ರಾವತಿಯಲ್ಲಿ ಬೆಪ್ಪಾಜಿ...

ಶಿವಮೊಗ್ಗದಲ್ಲಿ ಗೆದ್ದು ಸಂಸದರಾದಾಗಲೆಲ್ಲ ಬಂಗಾರಪ್ಪನವರ ಕೈಹಿಡಿಯುತ್ತಿದ್ದದ್ದು ಭದ್ರಾವತಿಯೆ. ಈಡಿಗರೇ ಇಲ್ಲದ ಈ ಕ್ಷೇತ್ರದ ಬಗ್ಗೆ ಬಂಗಾರಪ್ಪನವರಿಗಿದ್ದ ಅಕ್ಕರೆಯೇ ಬೇರೆಯಾಗಿತ್ತು. ಒಕ್ಕಲಿಗರು ಮತ್ತು ಲಿಂಗಾಯತರು ಸರಿಸಮನಾಗಿರುವ ಭದ್ರಾವತಿ ಒಂದರಲ್ಲೇ ಬಂಗಾರಪ್ಪ ನಲವತ್ತರಿಂದ 50 ಸಾವಿರದಷ್ಟು ಲೀಡು ಪಡೆಯುತ್ತಿದ್ದದ್ದು ಮೊದಲ ಬಾರಿಗೆ ಉಲ್ಟಾ ಹೊಡೆದದ್ದು 2009ರಲ್ಲಿ.



ಭದ್ರಾವತಿ ಅಪ್ಪಾಜಿ | ಸಂಗಮೇಶಿ

ಯಡ್ಡಿ ಮಗ ರಾಘು ಬಂಗಾರಪ್ಪನವರಿಗಿಂತಲೂ ಐದಾರು ಸಾವಿರದಷ್ಟು ಲೀಡು ಗಳಿಸಿಬಿಟ್ಟಿದ್ದ. ಅದು ಭದ್ರಾವತಿಯ ಜೆಡಿಎಸ್ ಶಾಸಕ ಅಪ್ಪಾಜಿಗೌಡನ ದ್ರೋಹದ ಪ್ರತಿಫಲವಾಗಿತ್ತು. ಪಕ್ಷ, ಜಾತಿ, ನಾಯಕತ್ವ, ಆತ್ಮಸಾಕ್ಷಿ ಎಲ್ಲವನ್ನೂ ಅಪ್ಪಾಜಿ ಯಡ್ಡಿಗೆ ಮಾರಿಕೊಂಡ ಫಲವಾಗೇ ಬಂಗಾರಪ್ಪನವರಿಗೆ ಬರಬೇಕಿದ್ದ 50 ಸಾವಿರದಷ್ಟು ಓಟುಗಳು ಬಿಜೆಪಿಯ ಪಾಲಾಗಿತ್ತು. ಕೋಟಿ ಲೆಕ್ಕದಲ್ಲಿ ಭಕ್ಷೀಸು ಗಿಟ್ಟಿಸಿಯೇ ಅಪ್ಪಾಜಿ ತನ್ನನ್ನು ಯಡ್ಡಿಗೆ ಮಾರಿಕೊಂಡಿದ್ದ. ವಿಪರ್ಯಾಸವೆಂದರೆ ಅಪ್ಪಾಜಿಗೌಡನ ಕಡುವೈರಿ ಸಂಗಮೇಶಿ ಕೂಡ ಕಾಂಗ್ರೆಸ್ ನಿಷ್ಠೆಗೆ ತಿಲಾಂಜಲಿಯಿತ್ತು ಜಾತಿ ಮಾಡಿ ಯಡ್ಡಿಯನ್ನು ಬೆಂಬಲಿಸಿಬಿಟ್ಟ.

ಈಗ ಶಿವಮೊಗ್ಗದ ಚಿತ್ರಣವೇ ಬದಲಾಗಿದೆಯಾದರೂ ಅಪ್ಪಾಜಿಗೌಡ ಮತ್ತು ಸಂಗಮೇಶಿಯ ಯಡ್ಡಿ ಸಂಬಂಧ ಮಾತ್ರ ಹಾಗೇ ಮುಂದುವರಿದಿದೆ. ಶಿವಮೊಗ್ಗದ 8 ಮಂದಿ ಎಮ್ಮೆಲ್ಲೆಗಳ ಪೈಕಿ ಬಿಜೆಪಿ ಅಂತಿರುವುದು ಶಿಕಾರಿಪುರದಿಂದ ಗೆದ್ದ ಯಡ್ಡಿ ಮಾತ್ರ. ಮಿಕ್ಕಂತೆ ನಾಲ್ವರು ಕಾಂಗ್ರೆಸ್ ಶಾಸಕರಿದ್ದಾರೆ. ಶಿವಮೊಗ್ಗದಿಂದ ಕೆ.ಬಿ. ಪ್ರಸನ್ನಕುಮಾರ್, ತೀರ್ಥಹಳ್ಳಿಯ ಕಿಮ್ಮನೆ, ಸಾಗರದ ಕಾಗೋಡು, ಬೈಂದೂರಿನ ಗೋಪಾಲ ಪೂಜಾರಿ ಕಾಂಗ್ರೆಸ್ ಶಾಸಕರೆ. ಆದರೆ ಜೆಡಿಎಸ್ ಬುಟ್ಟಿನಲ್ಲಿ ಕಾಂಗ್ರೆಸ್ಸಿಗಿಂತ ಒಂದು ಕಮ್ಮಿ ಅಂದರೆ ಮೂವರು ಶಾಸಕರಿದ್ದಾರೆ.

ಶಿವಮೊಗ್ಗ ಗ್ರಾಮಾಂತರದ ಶಾರದಾ ಪೂರ್‍ಯಾನಾಯಕ್, ಭದ್ರಾವತಿಯ ಅಪ್ಪಾಜಿ ಮತ್ತು ಸೊರಬದ ಮಧು ಬಂಗಾರಪ್ಪ ಎಂಬ ಮೂವರು ಜೆಡಿಎಸ್ ಶಾಸಕರನ್ನು ನಂಬಿಕೊಂಡು ಗೀತಾರನ್ನು ಜೆಡಿಎಸ್ ಅಖಾಡಕ್ಕಿಳಿಸಿದೆಯಲ್ಲವೆ?

ಹಾಗೆ ನೋಡಿದರೆ ಈಡಿಗರ ಕಾಂಗ್ರೆಸ್ ಓಟುಗಳೂ ಗೀತಾ ಪಾಲಾಗಿ ಮೂವರು ಜೆಡಿಎಸ್ ಶಾಸಕರ ಓಟುಗಳೂ ಸಾರಾಸಗಟು ಪಕ್ಷಕ್ಕೇ ಬೀಳುತ್ತದೆ ಎಂದು ದೇವೇಗೌಡರೇನಾದರೂ ಭಾವಿಸಿದ್ದರೆ ಅದು ಮೂರ್ಖತನವಾಗುತ್ತದೆ. ಏಕೆಂದರೆ ಭದ್ರಾವತಿ ಶಾಸಕ ಅಪ್ಪಾಜಿಯದ್ದು ಕೆಡಕು ತಿನ್ನುವ ಬುದ್ಧಿ, ಹಗಲು ಹೊತ್ತು ಜೆಡಿಎಸ್, ರಾತ್ರಿ ಹೊತ್ತು ಯಡ್ಡಿ ಜೊತೆ ಕಳ್ಳ ಸಂಸಾರ!

ಒಂದು ಮೂಲದ ಪ್ರಕಾರ ಈಗಾಗಲೇ ಅಪ್ಪಾಜಿಗೆ ಯಡ್ಡಿ ಪಾಪದ ಪಾಲೊಂದು ಸಂದಾಯವಾಗಿದೆ. ಮಾಜಿ ಶಾಸಕ ಸಂಗಮೇಶಿ ಜೊತೆಗಿನ ಯಡ್ಡಿ ನೆಂಟಸ್ತಿಕೆಯೂ ಮುಂದುವರಿದಿದೆ. ಮೂವರು ಜೆಡಿಎಸ್ ಶಾಸಕರ ಓಟೆಲ್ಲವೂ ನಿಯತ್ತಾಗಿ ತನಗೆ ಬೀಳುತ್ತದೆ ಎಂದು ಗೀತಕ್ಕ ನಂಬಿ ಕೂತರೆ ಅದು ಮೂರ್ಖತನವೆ. ಹಾಗೆ ಜೆಡಿಎಸ್ ಅಧಿಪತಿ ಕುಮಾರಣ್ಣ ಏನಾದರೂ ಅಪ್ಪಾಜಿ ನಂಬಿ ಮೈಮರೆತರೆಂದರೆ ಗುನ್ನಾ ಬಿದ್ದಂತೆಯೆ. ಬಗಲ್ ಮೆ ದುಷ್ಮನ್ ಇಟ್ಟುಕೊಂಡು ಯಡ್ಡಿ ವಿರುದ್ಧ ತೊಡೆ ತಟ್ಟುತ್ತಿರುವ ಜೆಡಿಎಸ್ ದಳಪತಿಗಳಿಗಿದು ಎಚ್ಚರಿಕೆಯಷ್ಟೆ!

ಅಭಿಮಾನಿಗಳ ಆಕ್ರೋಶ ಮತ್ತು ಕುಮಾರಣ್ಣನ ದ್ವೇಷ



ರಾಜಕಾರಣದಿಂದ ದೂರವಿರಬೇಕೆಂಬ ಅಪ್ಪಾಜಿ ಹಾಕಿಕೊಟ್ಟ ಆದರ್ಶ ಪಾಲಿಸುವಂತೆ ಒತ್ತಾಯಿಸಿ ಮುನ್ನೂರಕ್ಕೂ ಅಧಿಕ ರಾಜ್‌ಕುಮಾರ್ ಅಭಿಮಾನಿಗಳು ನಾಗವಾರದ ಶಿವಣ್ಣನ ಬಂಗಲೆಯೆದುರು ಪ್ರತಿಭಟಿಸಿದ್ದು ಕಳೆದ ಮಾರ್ಚ್ 9ರ ಭಾನುವಾರದಂದು. ರಾಜ್‌ಕುಮಾರ್ ಕನ್ನಡ ಸೇನೆಯ ಅಧ್ಯಕ್ಷ ವಿ. ತ್ಯಾಗರಾಜ್, ಗೌರವಾಧ್ಯಕ್ಷ ಗಿಲಿಗಿಲಿ ವೆಂಕಟೇಶ್ ಮುಂತಾದವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಗೆ ಸಂಧಾನಕಾರನಾಗಿ ಶಿವಣ್ಣನ ಹರವಹಿಸಿದ್ದು ನಿರ್ಮಾಪಕ ಶ್ರೀಕಾಂತ್.

ಇದು ನನ್ನ ನಿರ್ಧಾರವಲ್ಲ, ಗೀತಾ ಬಂಗಾರಪ್ಪನವರ ಮಗಳು ಕೂಡ ಹೌದಲ್ವಾ? ಇದಕ್ಕೂ ರಾಜ್ ಕುಟುಂಬಕ್ಕೂ ಏಕೆ ಸಂಬಂಧ ಕಲ್ಪಿಸುತ್ತೀರಾ? ನಾನಾಗಲಿ, ಪುನೀತ್ ಆಗಲಿ ಎಲೆಕ್ಷನ್ನಿಗೆ ನಿಂತ್ವಿ ಅಂದ್ರೆ ಆಗ ನೀವು ಕೇಳಬೇಕಲ್ವಾ....? ಎಂದೆಲ್ಲಾ ಶಿವಣ್ಣ ಅಭಿಮಾನಿಗಳನ್ನು ಎಷ್ಟೇ ತಣಿಸಲೆತ್ನಿಸಿದರೂ ಪ್ರಯೋಜನವಾಗಲಿಲ್ಲ, ಒಂದು ಹಂತದಲ್ಲಿ ಶಿವಣ್ಣ ಮತ್ತು ರಾಜ್ ಅಭಿಮಾನಿಗಳ ಮಧ್ಯೆ ವಾಗ್ಯುದ್ಧ ಕೂಡ ನಡೆದಿದೆ. ಶಿವಣ್ಣನ ಮೂರ್ನಾಲ್ಕು ಅಭಿಮಾನಿಗಳ ಸಂಘಗಳು ಈ ನಿರ್ಧಾರದ ವಿರುದ್ಧ ರೊಚ್ಚಿಗೆದ್ದು ತಮ್ಮ ಬೋರ್ಡ್ ಕಿತ್ತೆಸೆದರೆಂಬ ವರದಿಗಳೂ ಬರುತ್ತಿವೆ.

ಈ ಮಧ್ಯೆ ರಾಜ್‌ಕುಮಾರ್ ಕನ್ನಡ ಸೇನೆ ವತಿಯಿಂದ ರಾಜಕೀಯ ಪ್ರವೇಶದ ವಿರುದ್ಧ ನಡೆಸಬೇಕಿದ್ದ ಪತ್ರಿಕಾಗೋಷ್ಠಿ ಮತ್ತು ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆಯಬೇಕಿದ್ದ ಭೂತದಹನ (ಯಾರ ಭೂತವೋ ಗೊತ್ತಿಲ್ಲ) ಕಾರ್ಯಕ್ರಮಗಳು ಶ್ರೀಕಾಂತ್ ಸಂಧಾನದ ಫಲವಾಗಿ ರದ್ದುಗೊಂಡಿವೆ. ಒಂದಂತೂ ಸತ್ಯ: ಅಣ್ಣಾವ್ರ ಸೊಸೆಯ ರಾಜಕೀಯ ಪ್ರವೇಶದ ವಿರುದ್ಧ ಅಭಿಮಾನಿಗಳು ಆಕ್ರೋಶಗೊಳ್ಳಲು ಕುಮಾರಸ್ವಾಮಿ-ದೇವೇಗೌಡರ ರಾಜ್ ಕುಟುಂಬದ ಮೇಲಿನ ಪುರಾತನ ದ್ವೇಷ ಕೂಡ ಕಾರಣವಾಗಿದೆ.

ಕಾಲನ ಲೀಲೆ ಎಂದರೆ ಇದೇನಾ?



ವರನಟ ರಾಜ್

ಅಪ್ಪ ಅಮ್ಮ ಹಾಸಿಗೆ ಹಿಡಿಯುವಂತಾಯ್ತೆಂದು ...ನ್ನರೂ ಸಿಟ್ಟಾಗುವಂತಾಗಿದ್ದಕ್ಕೆ ಈಗ ಕುಮಾರ್ ...ರಪ್ಪ ದಂಡ ತೆರಬೇಕಾಗಿದೆ!

...ರಿ ಮಗನಾಗಿ ತಂದೆಯನ್ನು ಧಿಕ್ಕರಿಸಿದ ಅಪವಾದ ... ಕುಮಾರ್ ಬಂಗಾರಪ್ಪ ಹೇಗೆ ತಾನೇ ಅಪ್ಪನ ...ಯ ಸುಪ್ಪತ್ತಿಗೆಯನ್ನಾಳಲು ಸಾಧ್ಯ ಎಂಬ ಜಿದ್ದಿಗೆ ಬಂಗಾರಪ್ಪ ಕುಟುಂಬ ಕುಮಾರ್ ಬದಲಿಗೆ ...ನ್ನು ರಾಜಕೀಯಕ್ಕೆಳೆದಿದೆ. ಅಣ್ಣನ ಮೇಲಿನ ಜಿದ್ದು, ...ಪ್ರೀತಿಯ ಹಂಗು, ತಾಯಿಯ ಮರ್ಜಿ ಎಲ್ಲಕ್ಕೂ ...ಟ್ಟು ಗೀತಾ ಅಖಾಡಕ್ಕಿಳಿಯುತ್ತಿದ್ದಾರೆ. ಮಡದಿ ...ದ ವ್ಯಾಮೋಹಕ್ಕೆ ಬಿದ್ದು ಶಿವಣ್ಣ ಜೆಡಿಎಸ್ ಬಲೆಗೆ ...ತೆ. ಚುನಾವಣೆಗೆಂದು ನಿಂತ ಮೇಲೆ ಗೆಲ್ಲಲೇಬೇಕು. ಸೋತರೆ...?

...ಲು ಬಂಗಾರಪ್ಪ ಫ್ಯಾಮಿಲಿಗೆ ಹೊಸದೇನಲ್ಲ. ಬಂಗಾರಪ್ಪನವರೇ ಅನೇಕ ಬಾರಿ ಸೋತಿದ್ದಾರೆ. ಕುಮಾರ್ ಕೂಡ ಬಂಗಾರಪ್ಪ ಬೆಳೆಸಿದ ಶಿಷ್ಯರ ...ಲ್ಲೇ ಸೋಲನುಭವಿಸಿದ್ದಾರೆ. ಆದರೆ ಗೀತಾ ...ಜ್‌ಕುಮಾರ್ ಏನಾದರೂ ಸೋತರೆಂದರೆ ಅದು



ಜೆಡಿಎಸ್ ಅಥವಾ 'ಬಂ' ಫ್ಯಾಮಿಲಿಯ ಸೋಲಾಗಿ ...ದೇ ಪರಿಗಣಿಸಲ್ಪಡುತ್ತಾ?


ಬಿಲ್ಲವ ಸಮಾವೇಶದಲ್ಲಿ...!

...ಜ್ ಅಭಿಮಾನಿಗಳಷ್ಟೇ ಅಲ್ಲ; ಖುದ್ದು ...ತಮ್ಮನವರ ತಲೆಬಿಸಿಗೂ ಕಾರಣವಾದ ಪ್ರಶ್ನೆಯಿದು. ... ಇದೆಲ್ಲವನ್ನೂ ಲೆಕ್ಕ ಹಾಕಿಯೇ ಕಳೆದ ಆರು ...ಗಳಿಂದ ಬಂಗಾರಪ್ಪ ಕುಟುಂಬ ಗೀತಾರ ರಾಜಕೀಯ ...ವೇಶನ ತಯಾರಿಯಲ್ಲಿತ್ತಾ?

...ದಕ್ಕೆ ಪುಷ್ಟಿ ಕೊಡುವುದು ಇಲ್ಲಿಗೆ ಒಂದೂವರೆ ...ಹಿಂದೆ ಕುಂದಾಪುರದಲ್ಲಿ ನಡೆದ ಬಿಲ್ಲವ ಸಮಾವೇಶ. ...ಪುರದ ಗಾಂಧಿ ಮೈದಾನದಲ್ಲಿ ನಡೆದ ಬಿಲ್ಲವ ...ವೇಶಕ್ಕೆಂದು ಕರಾವಳಿ ಭಾಗದ 15 ಸಾವಿರಕ್ಕೂ ... ಪ್ರತಿನಿಧಿಗಳಷ್ಟೇ ಅಲ್ಲದೆ ವಿಧಾನಸಭೆಯ ಸ್ಪೀಕರ್ ...ಡು ತಿಮ್ಮಪ್ಪ, ಉಡುಪಿಯ ಉಸ್ತುವಾರಿ ಸಚಿವ ...ಕುಮಾರ್ ಸೊರಕೆ, ಬೈಂದೂರು ಶಾಸಕ ಗೋಪಾಲ ...ರಿಯಂಥ ಈಡಿಗ ಸಮುದಾಯದ ಘಟಾನುಘಟಿಗಳೇ ...ಸಿದ್ದರು. ಬೆಂಗಳೂರಿನಿಂದ ನೂರಾರು ಕಿ.ಮೀ. ...ದ ಕರಾವಳಿ ಭಾಗದ ಈ ಸಮಾವೇಶದ ವಿಶೇಷ ...ಗಳೇನು ಗೊತ್ತೆ?

...ವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ... ಪುನೀತ್ ಒಟ್ಟೊಟ್ಟಾಗಿಯೇ ಈ ಸಮಾವೇಶದಲ್ಲಿ ...ಸಿದ್ದು!

...ರಾಜ್ ಯಾವತ್ತಿಗೂ ಜಾತಿ ಮೂಲ ಗುರುತಿಸಿ ...ಲ್ಲ. ಆದರೆ ಶಿವಣ್ಣನ ಜೊತೆ ರಾಘು ಮತ್ತು ... ಕೂಡ ಬಿಲ್ಲವ ಸಮಾವೇಶದಲ್ಲಿ ಭಾಗವಹಿಸಿದ್ದಕ್ಕೆ ...ಕಾರಣವಿತ್ತು. ಅದು ರಾಜ್‌ರ ಮಾನಸ ಪುತ್ರ ...ಪೋಹನ್ ಅಲಿಯಾಸ್ ಕಪಾಲಿ ಮೋಹನ್!



ಬಂಗಾರಪ್ಪ, ರಾಮಕೃಷ್ಣ ಹೆಗಡೆ, ಕುಮಾರ ಬಂಗಾರ... ಮಧು ಬಂಗಾರಪ್ಪ

ಒಂದಾನೊಂದು ಕಾಲಕ್ಕೆ ವರನಟ ರಾಜ್‌ರನ್ನೇ ಕುಂದಾಪುರಕ್ಕೆ ಕರೆ ತಂದಿದ್ದ ಮೋಹನ್ ಈ ಬಾರಿ ಬಿಲ್ಲವ ಸಮಾವೇಶಕ್ಕೆ ರಾಜ್ ಪುತ್ರರನ್ನು ಕರೆತಂದಿದ್ದರ ಉದ್ದೇಶವೇ ಗೀತಾ ರಾಜಕೀಯ ಪ್ರವೇಶ? ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೀತಾ ಜೆಡಿಎಸ್ ಅಭ್ಯರ್ಥಿಯಾಗುತ್ತಾರೆಂಬ ಲೆಕ್ಕಾಚಾರವಿದ್ದೇ. ಶಿವಣ್ಣ ಬಿಲ್ಲವ ಸಮಾವೇಶದ ವೇದಿಕೆಯೇರಿದ್ದು ಏಕೆಂದರೆ ಕರಾವಳಿಯ ಬೈಂದೂರು ವಿಧಾನಸಭಾ ಕ್ಷೇತ್ರ ಕೂಡ ಶಿವಮೊಗ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ ಮತ್ತು ಬೈಂದೂರು ಒಂದರಲ್ಲೇ 70 ಸಾವಿರದಷ್ಟು ಈಡಿಗ ಮತಗಳಿವೆ.

ದೈತ್ಯ ಯಡ್ಡಿ?

ಬಹುಶಃ ಪುನೀತ್ ಮತ್ತು ರಾಘಣ್ಣನಿಗೆ ಅತ್ತಿಗೆಯ ರಾಜಕೀಯದ ರಿಹರ್ಸಲ್‌ನ ಸುಳಿವಿರಲಿಕ್ಕಿಲ್ಲ. ಅಪ್ಪಾಜಿಯ ಮಾನಸ ಪುತ್ರ ಮೋಹನ್ ಒತ್ತಾಸೆಗೆ ಬಿದ್ದು ಬಿಲ್ಲವ ಸಮಾವೇಶಕ್ಕೆ ಬಂದಿರಬೇಕು. ಹಾಗಂತ ಶಿವಮೊಗ್ಗದ ಮಟ್ಟಿಗೆ ದೈತ್ಯ ಯಡ್ಡಿಯನ್ನು ಸೋಲಿಸಿ ಗೀತಾ ಗೆಲ್ಲುವುದು ಸಾಧ್ಯವೆ? ಮೊದಲೇ ಬಿಜೆಪಿ ಮತ್ತು ಕೆಜೆಪಿಗಳು ಪುನರ್ಮಿಲನಗೊಂಡಾಗಿವೆ. ಕಾಂಗ್ರೆಸ್ ಅಣ್ಣ ಕುಮಾರ್‌ಗೇ ಟಿಕೆಟ್ ಕೊಡಬಹುದು. ಕಾಂಗ್ರೆಸ್ ಅಖಾಡದಲ್ಲಿದ್ದೂ ಈಡಿಗರ ಮತಗಳು ಇಬ್ಭಾಗವಾಗಿಯೂ ತಾನು ಹೇಗೆ ತಾನೇ ಗೆಲ್ಲಲು ಸಾಧ್ಯ ಎಂಬ ಕನಿಷ್ಠ ಪ್ರಜ್ಞೆಯಾದರೂ ಗೀತಾಗಿರಬೇಕಿತ್ತು.

ಏಕೆಂದರೆ ಶಿವಮೊಗ್ಗ ಮಟ್ಟಿಗೆ ಯಡ್ಡಿಯನ್ನು ಮಣಿಸುವುದೆಂದರೆ ಅಂತಾ ಬಂಗಾರಪ್ಪನವರಿಂದಲೇ ಸಾಧ್ಯವಾಗದ ಮಾತಾಗಿತ್ತು. 2009ರ ಲೋಕಸಭಾ ಚುನಾವಣೆಯಲ್ಲಿ ಬಂಗಾರಪ್ಪ-ಕಾಂಗ್ರೆಸ್ ಅಭ್ಯರ್ಥಿಯಾಗಿದ್ದೂ ಜೆಡಿಎಸ್ ಪಕ್ಷಭೇದ ಮರೆತು ಬಂಗಾರಪ್ಪನವರನ್ನು



ಯಡ್ಡಿ

ಬೆಂಬಲಿಸಿತ್ತು. ಆದರೆ 'ಬಂ'ಗೆ ವಿಪರೀತ ಆತ್ಮವಿಶ್ವಾಸ. ಹೇಗಿದ್ದರೂ ಸಹ್ಯಾದ್ರಿಯ ಜನ ತನ್ನ ಕೈ ಬಿಡಲಾರರೆಂದೇ ಆಲಸ್ಯಕ್ಕೆ ಬಿದ್ದರು. ಹಿಂದಿನ ಚಾಕಚಕ್ಯತೆ, ರಣತಂತ್ರ, ಒಳಸಂಚಿಗೆ 'ಬಂ' ಕೈಹಾಕಲೇ ಇಲ್ಲ. ಕೊನೆಕೊನೆಗೆ ಮತಗಟ್ಟೆ ಕಾರ್ಯಕರ್ತರಿಗೂ ದುಡ್ಡು ಬಿಚ್ಚಲಿಲ್ಲ.

ಪರಿಣಾಮ ಯಡ್ಡಿಯ ರೊಕ್ಕ ಮತ್ತು ಅಧಿಕಾರ ಬಲದ ಕೈಯೇ ಮೇಲಾಯಿತು. ಯಡ್ಡಿ ಮಗ ರಾಘು ಸಹ್ಯಾದ್ರಿಯ ಹುಲಿ ಬಂಗಾರಪ್ಪನವರನ್ನು ಬರೋಬ್ಬರಿ 50 ಸಾವಿರ ಮತಗಳಿಂದ ಸೋಲಿಸಿಬಿಟ್ಟ. ಅದು ಖುದ್ದು ಬಂಗಾರಪ್ಪನವರ ಸ್ವಯಂಕೃತಾಪರಾಧವಾಗಿತ್ತು.

ಆದರೆ ಈಗ ಪರಿಸ್ಥಿತಿಯೇ ಬೇರೆಯಾಗಿದೆ. ಯಡ್ಡಿ ಕೈಯಲ್ಲಿ ಬೇಕಾಬಿಟ್ಟಿ ದುಡ್ಡಿದೆಯಾದರೂ ಅಧಿಕಾರವಿಲ್ಲ. ಬಿಜೆಪಿಗೆ ಆವತ್ತಿದ್ದ ಅನುಕೂಲಗಳಿಲ್ಲ. ಮೋದಿ ಅಲೆ ಬಿಟ್ಟರೆ ಭ್ರಷ್ಟಾಚಾರದ ವಿರುದ್ಧ ಮಾತಾಡುವಂತಿಲ್ಲ. ಅಭಿವೃದ್ಧಿ ಬಗ್ಗೆ ಭಾಷಣಕ್ಕೆ ನಿಂತರೆ ಮಾಡಿದ ರಸ್ತೆ ಎಬ್ಬಿಸಿದ ಪಂಚತಾರಾ ಹೊಟೇಲುಗಳ ಬಗ್ಗೆಯಷ್ಟೇ ಹೇಳಬೇಕು. ಹಾಗೆ ಹೇಳಲು ಹೊರಟರೆಂದರೆ ಯಾವ್ಯಾವ ಕಾಮಗಾರಿಯಲ್ಲಿ ಎಷ್ಟೆಷ್ಟು ಕಮೀಷನ್ ಹೊಡೆದರೆಂಬ ಲೆಕ್ಕ ಜನರ ಬಳಿಯಿದೆ. ಇನ್ನು ಮೋದಿಯನ್ನು ನಂಬಿ ಓಟು ಹಾಕುವಷ್ಟು ಮೂರ್ಖರ್‍ಯಾರೂ ಶಿವಮೊಗ್ಗದಲ್ಲಿಲ್ಲ.

ಈಡಿಗರ ಲೆಕ್ಕಾಚಾರ

ಎತ್ತಿಂದೆತ್ತ ಲೆಕ್ಕ ಹಾಕಿದರೂ ಯಡ್ಡಿಯ ಪಾಲಿಗಿದು ಮಾಡು ಮಡಿ ಸೆಣಸಾಟವೆ. ಕಾಂಗ್ರೆಸ್ ಕುಮಾರ್ ಬಂಗಾರಪ್ಪಗೆ ಟಿಕೆಟ್ ಕೊಟ್ಟಿದ್ದರೆ ಶಿವಮೊಗ್ಗದ ಈಡಿಗರ ಓಟುಗಳು ಇಬ್ಭಾಗವಾಗುವ ಸಾಧ್ಯತೆಯಾದರೂ ಇತ್ತು. ಬಹುಶಃ ಯಡ್ಡಿಯ ದುರ್ಗತಿಗೇ ಇರಬೇಕು ಕಾಂಗ್ರೆಸ್ ಮಂಜುನಾಥ್ ಭಂಡಾರಿಗೆ ಟಿಕೆಟ್ ಕೊಟ್ಟಿದೆ. ಭಂಡಾರಿಯ ಬಳಿ ದುಡ್ಡಿದೆ ನಿಜ. ಕಾಂಗ್ರೆಸ್ ಹೈಕಮಾಂಡಿನ ಅತಿರಥ ಮಹಾರಥರ ಒಡನಾಟವೂ ಭಂಡಾರಿಗಿದೆ. ಆದರೆ ಶಿವಮೊಗ್ಗದ ಮಟ್ಟಿಗೆ ದುಡ್ಡಾಗಲಿ ಪ್ರಭಾವವಾಗಲಿ ಮುಖ್ಯವಾಗುವುದಿಲ್ಲ.

ಏಕೆಂದರೆ ಈ ಸಲದ ಎಲೆಕ್ಷನ್ನೆಂಬುದು ಶಿವಮೊಗ್ಗದ ಈಡಿಗರ ಪಾಲಿಗೆ ನಿರ್ಣಾಯಕ ಕಾಳಗ. ಒಮ್ಮೆ ಲಿಂಗಾಯತರ ಕೈಗೆ ಶಿವಮೊಗ್ಗ ಹೋಯಿತೆಂದರೆ ಮತ್ತೆಂದೂ ಈಡಿಗರಿಗೆ ಏಳಿಗೆಯಿಲ್ಲ ಎಂಬ ನಿರ್ಧಾರಕ್ಕೆ ಇಡೀ ಜನಾಂಗ ಬಂದಂತಿದೆ. ಅದೊಂಥರದ political ego. ಹಾಗೊಮ್ಮೆ ಕಾಂಗ್ರೆಸ್ಸಿನ ಮಂಜುನಾಥ ಭಂಡಾರಿ ಗೆದ್ದನೆಂದರೆ ಆತ ಬೇರೆ ಯಾರನ್ನೂ ಬೆಳೆಯಲು ಬಿಡುವುದಿಲ್ಲ ಮತ್ತು ಯಾವತ್ತಿಗೂ ಕ್ಷೇತ್ರ ಬಿಟ್ಟು ಕೊಡಲಾರ ಎಂಬ ಅಳುಕು ಈಡಿಗರಿಗಿರುವಂತೆಯೇ ಯಡ್ಡಿ ಗೆದ್ದಾಕ್ಷಣ ಲಿಂಗಾಯತರ ಅಧಿಪತ್ಯ ಆರಂಭವಾದಂತೆಯೇ ಎಂಬ ಭೀತಿಯೂ ತಲೆಹೊಕ್ಕಿದೆ.

ಕಾಗೋಡು ತಿಮ್ಮಪ್ಪನವರಿಗೆ ವಯಸ್ಸಾಯಿತು. ಹರತಾಳು ಹಾಲಪ್ಪ ಈಡಿಗ ಕುಲಕ್ಕೆ ಕಳಂಕ ತಂದ. ಬೇಳೂರು ಗೋಪಾಲಕೃಷ್ಣ ಇನ್ನೂ ಎಳಸು ಮತ್ತು ಮುಠ್ಠಾಳ ಪುಂಡ. ಕುಮಾರ್ ಬಂಗಾರಪ್ಪ ಮಹಾ ಕೃಪಣ, ಸ್ವಾರ್ಥಿ, ಜಿಪುಣ. ಇಂದಿನ ಪರಿಸ್ಥಿತಿಯಲ್ಲಿ ರಾಜ್ ಕುಟುಂಬದ ಸೊಸೆಯಾಗಿ ಖುದ್ದು ಬಂಗಾರಪ್ಪನವರ ಮಗಳೇ ನಿಲ್ಲುತ್ತಾಳೆಂದರೆ ಈಡಿಗರ ಪಾಲಿಗೆ ಇದೊಂದು ಸುವರ್ಣಾವಕಾಶವೆ. ಏಕೆಂದರೆ ಗೀತಾರನ್ನು ಮುಂದೆ ಯಾವತ್ತಾದರೂ ತಾವೇ ನಿಂತು ಸೋಲಿಸಬಹುದು.

ಈ ರೀತಿ ಶಿವಮೊಗ್ಗದ ಈಡಿಗರು ಆತಂಕಕ್ಕೆ ಬಿದ್ದಿದ್ದಕ್ಕೂ ಕಾರಣವಿದೆ. ಶಿವಮೊಗ್ಗ ಹೇಳಿಕೇಳಿ ಈಡಿಗರ ಭದ್ರಕೋಟೆ. ಒಟ್ಟು 15 ಲಕ್ಷದಷ್ಟು ಮತದಾರರ ಪೈಕಿ ಅತೀ ದೊಡ್ಡ ಸಮೂಹವೆಂದರೆ ಅದು ಈಡಿಗರೇ. ಸರಿಸುಮಾರು 2.80 ಲಕ್ಷದಷ್ಟು ಈಡಿಗರಾದರೆ ಅವರ ಪ್ರತಿಸ್ಪರ್ಧಿ ಲಿಂಗಾಯತರೇನೂ ಕಮ್ಮಿಯಿಲ್ಲ 2 ಲಕ್ಷದಷ್ಟಿದ್ದಾರೆ. ಇವರನ್ನು ಹೊರತುಪಡಿಸಿದರೆ ಮೂರನೇ ಸ್ಥಾನದಲ್ಲಿರುವ ಮುಸ್ಲಿಮರು 1.90 ಲಕ್ಷದಷ್ಟಿದ್ದಾರೆ. ಒಕ್ಕಲಿಗರು 1.75 ಲಕ್ಷದಷ್ಟಿದ್ದರೆ ಅವರಿಗೆ ಸರಿಸಮನಾಗಿ ಬ್ರಾಹ್ಮಣರಿದ್ದಾರೆ. ಪರಿಶಿಷ್ಟರ ಪೈಕಿ ದಲಿತರು, ಲಂಬಾಣಿಗಳು, ಹಸಲ ಬುಡಕಟ್ಟಿನವರೆಲ್ಲ ಸೇರಿ 1.60 ಲಕ್ಷದಷ್ಟಾಗುತ್ತಾರೆ.

ಸೋಲಿನ ಹೀನಾಯ

ಕನಿಷ್ಠ ಶೇ.70 ರಷ್ಟು ಮತದಾನವಾದರೂ ಮೂರ್ನಾಲ್ಕು

ಲಕ್ಷ ಓಟು ಪಡೆದವರಿಗೆ ಗೆಲುವಾಗುತ್ತದೆ. ಈ ಬಾರಿ ಈಡಿಗರೆಲ್ಲ ಸಾರಾಸಗಟಾಗಿ ಜೆಡಿಎಸ್ ಪರ ವಹಿಸುವ ಎಲ್ಲಾ ಲಕ್ಷಣಗಳೂ ಶಿವಮೊಗ್ಗದಲ್ಲಿ ನಿಚ್ಚಳವಾಗಿದೆ. ಕರಾವಳಿಯ ಬೈಂದೂರಿನಲ್ಲಿ ಗೆದ್ದಿರುವ ಗೋಪಾಲ ಪೂಜಾರಿ ಕಾಂಗ್ರೆಸ್ಸಿಗರೆ. ಅಲ್ಲಿನ ಬಿಲ್ಲವರೆಲ್ಲ ನಿಸ್ಸಂಶಯವಾಗಿ ಕಾಂಗ್ರೆಸ್ ಬೆಂಬಲಿಗರೆ. ಆದರೆ ಈ ಬಾರಿ ಬಿಲ್ಲವರೆಲ್ಲರೂ ಜೆಡಿಎಸ್ ಬೆಂಬಲಕ್ಕೆ ನಿಲ್ಲಬೇಕೆಂಬ ಒಳಒಪ್ಪಂದವೊಂದು ಅಲ್ಲಿನ ಕಾಂಗ್ರೆಸ್ ಬಿಲ್ಲವರ ನಡುವೆಯೇ ಚಾಲ್ತಿಗೆ ಬಂದಿದೆಯೆಂದರೆ ಅದು ರಾಜ್ ಕುಟುಂಬದ ಸೊಸೆ ಮೇಲಿನ ಅಭಿಮಾನಕ್ಕೆ.

ಇದು ಕೇವಲ ಬೈಂದೂರಿನಲ್ಲಷ್ಟೇ ಅಲ್ಲ, ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ಭಾಗದಲ್ಲೂ ಅಘೋಷಿತ ಫರ್ಮಾನಿನಂತೆ ಜಾರಿಗೊಂಡಿದೆ. ಇನ್ನು ಮುಸ್ಲಿಮರು ಯಾವುದೇ ಕಾರಣಕ್ಕೂ ಯಡ್ಡಿಯನ್ನು ಗೆಲ್ಲಿಸಲಾರರು. ಕಾಂಗ್ರೆಸ್ ಜೆಡಿಎಸ್ ಮಧ್ಯೆ ತಮ್ಮ ಓಟೆಲ್ಲಿ ಹರಿದು ಹಂಚಿಕೆಯಾಗುತ್ತೋ ಎಂಬ ಎಚ್ಚರಿಕೆಗೆ ಮುಸ್ಲಿಮರು ಬಿದ್ದಾಗಿದೆ. ಜೆಡಿಎಸ್ ನಾಯಕ ಜಮೀರ್ ಅಹ್ಮದ್ ಈಗಾಗಲೇ 3 ಬಾರಿ ಶಿವಮೊಗ್ಗಕ್ಕೆ ಬಂದುಹೋಗಿದ್ದೂ ಅಲ್ಲದೆ ಜಾಫರ್ ಷರೀಫ್ ಏನಾದರೂ ಜೆಡಿಎಸ್‌ಗೆ ಬಂದರೆಂದರೆ ಶಿವಮೊಗ್ಗದ ಮುಸ್ಲಿಮರ ದೊಡ್ಡ ಗುಂಪೇ ಜೆಡಿಎಸ್ ಬೆನ್ನಿಗೆ ನಿಲ್ಲಲಿದೆ. ಇದಲ್ಲದೆ ಕಾಂಗ್ರೆಸ್ಸಿನಲ್ಲೇ ಭಂಡಾರಿ ತಲೆ ಕಂಡರಾಗದ ಗುಂಪೊಂದು ಗೀತಾ ಬೆಂಬಲಿಸುವ ಸಾಧ್ಯತೆಯೂ ಸ್ಪಷ್ಟಗೊಂಡಿದೆ.

ಹೆಚ್ಚೆಂದರೆ ಲಿಂಗಾಯತರು, ಬ್ರಾಹ್ಮಣರು, ಮಾರ್ವಾಡಿಗಳಷ್ಟೇ ಈ ಬಾರಿ ಯಡ್ಡಿ ಕೈಹಿಡಿಯಬಹುದು. ಮಿಕ್ಕಂತೆ ಅರ್ಧ ಮುಸ್ಲಿಮರು ಮತ್ತರ್ಧ ದಲಿತರು ಕಾಂಗ್ರೆಸ್ ಬೆಂಬಲಿಸಬಹುದು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಗೀತಾ ವರ್ಚಸ್ಸೆ ಹೆಚ್ಚು ತೂಗುತ್ತಿದೆ. ಬಂಗಾರಪ್ಪ ಮಗಳೆಂಬ ಅನುಬಂಧ ಒಂದೆಡೆಯಾದರೆ ರಾಜ್ ಸೊಸೆಯೆಂಬ ಅಭಿಮಾನ ಮತ್ತೊಂದೆಡೆ. ಹಾಗೊಮ್ಮೆ ಈಡಿಗರ ಬುಟ್ಟಿಗೇ ಹರತಾಳು, ಬೇಳೂರು ಥರದ ಚೇಲಾಗಳ ಮೂಲಕ ಯಡ್ಡಿ ಕೈಯಿಟ್ಟರೆ? ದಲಿತರ ಓಟಿನ ಬುಟ್ಟಿಗೆ ಬೇಕಾಬಿಟ್ಟಿ ದುಡ್ಡು ಸುರಿದರೆ? ತನ್ನ ತಂಗಿಯನ್ನೇ ಸೋಲಿಸಲು ಕುಮಾರ್ ಒಳಗೊಳಗೇ ಕತ್ತಿ ಮಸೆದರೆ?

ಗೀತಾ ಗೆದ್ದರೆಂದರೆ ಅದು ಜೆಡಿಎಸ್ ಗೆಲುವಾಗುತ್ತದೆ. ಬಂಗಾರಪ್ಪ ಫ್ಯಾಮಿಲಿಯ ವರ್ಚಸ್ಸಾಗಿಯೂ ಬದಲಾಗುತ್ತದೆ. ಆದರೆ ಯಡ್ಡಿ ಗೆದ್ದು ಬಿಟ್ಟರೆ? ಗೀತಾ ಸೋತರೆಂದರೆ...

ಅದು ರಾಜ್ ಕುಟುಂಬದ ಸೋಲಾಗುತ್ತದೆ. ಗೆದ್ದ ಲಾಭಕ್ಕೆ ರಾಜ್ ಕುಟುಂಬ ಕೈಚಾಚಲಾರದ್ದು ನಿಜ. ಆದರೆ ಸೋಲಿನ ಅವಮಾನ, ನಷ್ಟ, ಮುಖಭಂಗಗಳಂತೂ ಪಾರ್ವತಮ್ಮ ತಲೆಕೊಡಲೇಬೇಕು!

ಎಂಥಾ ವಿಪರ್ಯಾಸವಲ್ಲವೆ?

● ರಾ.ಸೋಮನಾಥ್

ದೇವದಾಸಿ ಪದ್ಧತಿ: ಇನ್ನೂ ಇಲ್ಲಿದೆ ಈಗಲೂ.

ಕೊಪ್ಪಳ ಜಿಲ್ಲೆಯ ಹಿರೇ ಸಿಂಧೋಗಿ ಗ್ರಾಮದಲ್ಲಿ ಮುತ್ತುಕಟ್ಟುವ ಪದ್ಧತಿ (ದೇವದಾಸಿ ಪದ್ಧತಿ) ಜೀವಂತ ಇರುವುದಾಗಿ ವರದಿಯಾಗಿದೆ. ಕಳೆದ ಶತಮಾನವಿಡೀ ದೇವದಾಸಿ ಪದ್ಧತಿ ವಿರೋಧಿಸಿ ಒಂದಾದ ಮೇಲೊಂದರಂತೆ ಆರು ಕಾನೂನುಗಳು ಬಂದರೂ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಈಗಲೂ ಮುತ್ತು ಕಟ್ಟುವ, ಜೋಗ ಬೇಡುವ ಜೋಗತಿ/ಜೋಗಪ್ಪಗಳು ಕಂಡುಬರುವುದು ಅತ್ಯಂತ ಖೇದದ ಸಂಗತಿಯಾಗಿದೆ.

ದೇವದಾಸಿಯರಾಗುವವರು ತಳಸಮುದಾಯದ ಅವಕಾಶವಂಚಿತ ಮಹಿಳೆಯರು ಎನ್ನುವುದು ಆತಂಕಕಾರಿ ವಿಷಯವಾಗಿದೆ. ಒಮ್ಮೆ ದೇವದಾಸಿ ಪಟ್ಟ ದೊರೆತರೆ ಅದರಿಂದ ಹೊರಬರುವುದು ಅವರಿರುವ ಸಾಮಾಜಿಕ/ಆರ್ಥಿಕ ಪರಿಸ್ಥಿತಿಯಲ್ಲಿ ಹೆಚ್ಚುಕಮ್ಮಿ ಅಸಾಧ್ಯವಾಗಿರುತ್ತದೆ. ದೇವದಾಸಿಯಾಗಿಸಲು ಕೊಡುವ ಕಾರಣಗಳೆಲ್ಲ ಮೂಢನಂಬಿಕೆಗಳನ್ನೇ ಉಸಿರಾಡುತ್ತಿರುತ್ತವೆ. ತಲೆಯಲ್ಲಿ ಜಟೆ ಬೆಳೆದವರನ್ನು 'ಅಮ್ಮ ಕಾಣಿಸಿಕೊಂಡಳು' ಎಂದು ದೇವರಿಗೆ ಬಿಡಲಾಗುತ್ತದೆ. ಅಥವಾ ಕೆಲ ಕುಟುಂಬಗಳು ಅನೂಚಾನವಾಗಿ ತಮ್ಮ ಮನೆಯ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿಸುತ್ತಿವೆ.

ಶಿವಮೊಗ್ಗ ಜಿಲ್ಲೆ ಚಂದ್ರಗುತ್ತಿಯ ರೇಣುಕಾಂಬಾ ದೇವಿಯ ಹೆಸರಲ್ಲಿ ಬೆತ್ತಲೆಸೇವೆ ನಡೆಯುತ್ತಿತ್ತು, ಅದನ್ನು ವಿರೋಧಿಸಿ 1985ರ ಹೊತ್ತಿಗೆ ದೊಡ್ಡ ಆಂದೋಲನ ನಡೆಯಿತು. ಚಳವಳಿ ನಡೆದ ಮೊದಲ ವರ್ಷ ಅದು ಹಿಂಸಾರೂಪಕ್ಕೆ ತಿರುಗಿತಾದರೂ ಕ್ರಮೇಣ ಸರ್ಕಾರ, ಸಂಘಟನೆಗಳು ಮತ್ತು ಜನರ ಭಾಗವಹಿಸುವಿಕೆಯ ಕಾರ್ಣದಿಂದ ಬೆತ್ತಲೆಸೇವೆ ಈಗ ನಿಂತು ಹೋಗಿದೆ. ಆದರೆ ಇದೇ ಮಾತನ್ನು ದೇವದಾಸಿ ಪದ್ಧತಿ ಕುರಿತು ಹೇಳಬರುವುದಿಲ್ಲ, ಒಂದು ದೊಡ್ಡ ಮಹಿಳಾ ಸಮುದಾಯವನ್ನು, ಅದರಲ್ಲೂ ತಳವರ್ಗದ ಮಹಿಳೆಯರನ್ನು ದೇವರ ಹೆಸರಲ್ಲಿ ಶೋಷಿಸುವ ಈ ದುಷ್ಟ ಪದ್ಧತಿಯನ್ನು ಪುನರ್ವಸತಿ, ಶಿಕ್ಷಣ, ಹೋರಾಟ ಮತ್ತು ಸಂಘಟನೆಯ ಬಳಿಕವೂ ನಿಲ್ಲಿಸಲಾಗಿಲ್ಲ, ಪ್ರತಿ ತಿಂಗಳು ಮಾಸಾಶನ ಕೊಡುವುದರಿಂದಾಗಲೀ, ಪುನರ್ವಸತಿಗೆಂದು ಸಾಲ/ಮನೆ/ಉದ್ಯೋಗ ಒದಗಿಸುವುದರಿಂದಾಗಲೀ ಹೊಸದಾಗಿ ದೇವದಾಸಿಯರಾಗಹೊರಟವರನ್ನು ಪೂರ್ತಿ ತಡೆಯಲಾಗಿಲ್ಲ, ಸಮೀಕ್ಷೆಯಿಂದ ಲಭ್ಯವಿರುವ ಅಂಕಿಅಂಶ ಪ್ರಕಾರ 1984ರಲ್ಲಿ 22,873ರಷ್ಟಿದ್ದ ದೇವದಾಸಿಯರು 2007ರ ಹೊತ್ತಿಗೆ 46,660ದಷ್ಟಿದ್ದರು. ಈಗ ರಾಜ್ಯದಲ್ಲಿ ಎರಡು ಲಕ್ಷ ದೇವದಾಸಿಯರಿರುವ ಅಂದಾಜಿದೆ.

70-80ರ ದಶಕದಲ್ಲಿ ಅಧಿಕಾರಿಗಳು, ಸಮಾಜ ಸೇವಾಕರ್ತರು ಮತ್ತು ಸಂಘಟನೆಗಳು ದೇವದಾಸಿ ಪದ್ಧತಿ ನಿರ್ಮೂಲನಾ ಚಳವಳಿಯಲ್ಲಿ ಕ್ರಿಯಾಶೀಲವಾಗಿ ಪಾಲ್ಗೊಂಡ ಪರಿಣಾಮವಾಗಿ ಹಲವು ಸುಧಾರಣಾ ಕ್ರಮಗಳನ್ನು ರೂಪಿಸಲಾಯಿತು. ಕರ್ನಾಟಕ ರಾಜ್ಯಾದ್ಯಂತ ಬೆತ್ತಲೆ ಸೇವೆ ಮತ್ತು ದೇವದಾಸಿ ಪದ್ಧತಿ ವಿರುದ್ಧ ನಡೆದ ಆಂದೋಲನ ರೂಪಿ ಕಾರ್ಯಕ್ರಮಗಳಲ್ಲಿ ದಲಿತ ಸಂಘರ್ಷ ಸಮಿತಿ ಸಕ್ರಿಯವಾಗಿ ಭಾಗವಹಿಸಿತ್ತು. ಆದರೆ ಈಗಲೂ ಮುತ್ತುಕಟ್ಟುವ ಕ್ರಿಯೆ ನಿರಂತರವಾಗಿ ನಡೆಯುವುದನ್ನು ನೋಡಿದರೆ ನಮ್ಮ ಜವಾಬ್ದಾರಿ ಮುಗಿಯಿತೆಂಬಂತೆ ವ್ಯವಸ್ಥೆಯ ಜೊತೆಗೆ ನಾವೂ ಕೈತೊಳೆದುಕೊಂಡು ಸುಮ್ಮನಾದೆವೇ ಎಂಬ ಅನುಮಾನ ಹುಟ್ಟುತ್ತಿದೆ.

ದೇವದಾಸಿ ಪದ್ಧತಿ ವಿರುದ್ಧ ಹೋರಾಟದ ಸಡಿಲ ಕೊಂಡಿ ಎಂದರೆ



ಅದರೊಡನೆ ತಳುಕು ಹಾಕಿಕೊಂಡಿರುವ ಧಾರ್ಮಿಕ ನಂಬಿಕೆ/ಆಚರಣೆಗಳು. ಅದನ್ನು ನಿಲ್ಲಿಸಿ ದೈವವು ಸಿಟ್ಟಿಗೆದ್ದರೆ ಎಂಬ ಭಯ ಜನಜನಿತವಾಗಿದೆ. ತಮ್ಮ ಮನೆಯ ಹೆಣ್ಣುಮಕ್ಕಳನ್ನು ದೇವರಿಗೆ ಬಿಡದಿದ್ದರೆ ದೇವರು ಸಿಟ್ಟಿಗೆದ್ದು ತಮ್ಮ ಕುಟುಂಬವಷ್ಟೇ ಅಲ್ಲ, ಊರುಕೇರಿ ನರ ಮನುಷ್ಯರನ್ನೇ ನಾಶಮಾಡಿಬಿಡುತ್ತಾನೆ ಎಂದು ಹೆದರಿ ನಂಬುವ ಜನರಿದ್ದಾರೆ. ಅಂಥ ಅಮ್ಮಂದಿರು ತಮ್ಮ ಮಕ್ಕಳಿಗೆ ತಾವೇ ಮುತ್ತು ಕಟ್ಟಿಸುತ್ತಾರೆ. ಎಂದೇ ಆ ಪದ್ಧತಿ ನಿಲ್ಲಿಸಿ ಎಂಬ ಬಾಧಿತರನ್ನೂ ಕೆರಳಿಸುತ್ತದೆ. ತಮ್ಮ ವೈಯಕ್ತಿಕ ಧಾರ್ಮಿಕ ವಿಷಯ ಯಾರೋ ಮೂಗು ತೂರಿಸುತ್ತಿದ್ದಾರೆ ಎನ್ನುವಂತೆ ಮಾಡುತ್ತದೆ. ದೇವದಾಸಿ ಪದ್ಧತಿ ವೇಶ್ಯಾವೃತ್ತಿಯನ್ನು ಪೋಷಿಸುವಂತಿದ್ದು ಎಲ್ಲ ಅಧ್ಯಾಯ ಹಿನ್ನೆಲೆಗೆ ಸರಿಸಿ ಶಿಕ್ಷಣ-ಸಂಪನ್ಮೂಲ-ಅವಕಾಶ ಯಾವುದೂ ಹೆಣ್ಣುಮಕ್ಕಳಿಗೆ ದುಡಿಮೆಯ ದಾರಿಯಾಗಿ ಕಣ್ಣೆದುರು ಹರಡಿಕೊಳ್ಳ

ಈ ಕಾಲದ ವೈರುಧ್ಯ-ವಿಪರ್ಯಾಸಗಳು ದಿಗ್ಭ್ರಮೆ ಮೂಡಿಸು ಪ್ರನಾಳಶಿಶು ಬಗ್ಗೆ ಮಾತಾಡುತ್ತಲೇ ಹೆಣ್ಣುಶಿಶು ಗುರ್ತಿಸಿ ಕೊ ತಂತ್ರಜ್ಞಾನ ಯುಗದಲ್ಲಿ ನಾವಿದ್ದೇವೆ. ದೇವದಾಸಿ ಹೆಸರಿನಲ್ಲೋ ಇನ್ಯಾವುದೋ ಹೆಸರಲ್ಲಿ ದೇಹವನ್ನು ಸರಕಾಗಿಸುವ ಮಾರು ಕಾಲದಲ್ಲಿ ನಾವಿದ್ದೇವೆ. ದೇವರ ಗುಡ್ಡದಲ್ಲಿ ನಡೆಯುವ ಕಟ್ಟುವಿಕೆಯನ್ನು ನಿರ್ಬಂಧಿಸಬೇಕಾದ ರಕ್ಷಕರೇ ಬೆಲ್ಟು ಬಿ ಕಳಚಿ, ಲಾಠಿ ಬದಿಗಿರಿಸಿ ಭಕ್ತಿಯಿಂದ ಕೈಮುಗಿದು ನಿಲ್ಲು ಡಾಂಭಿಕ ಭಕ್ತಿಯುಗದಲ್ಲಿ ನಾವಿದ್ದೇವೆ. ವೇಶ್ಯೆಯರಿದ್ದರೆ ಸಾ ಮತ್ತು ಕೌಟುಂಬಿಕ ಆರೋಗ್ಯ ಸುಧಾರಿಸುತ್ತದೆ, ಏಕೆಂದರೆ ಅವಿವಾಹಿತ/ಅತೃಪ್ತ ದೇಹಗಳನ್ನು ತಣಿಸುತ್ತಾರೆ ಎನ್ನುವ ಪ್ರಧಾನ ನ್ಯಾಯವ್ಯವಸ್ಥೆಯಲ್ಲಿ ನಾವಿದ್ದೇವೆ. ಹೀಗಿರುತ್ತ ಜನರ ತಲೆತಲಾಂತರದಿಂದ ಉಳಿದುಬಂದ ದುಷ್ಟ ಪದ್ಧತಿಗಳು ಐದು ಸಾವಿರ ರೂಪಾಯಿ ದಂಡ, ಐದು ವರ್ಷ ಜೈಲು ಹೆದರಿ ತಣ್ಣಗಾಗುವುದೆಂದು ನಿರೀಕ್ಷಿಸಲು ಸಾಧ್ಯವೇ?

ಜನಜಾಗೃತಿಯ ಪೂರ್ವತಯಾರಿ ಇಲ್ಲದೆ ಬದಲಾವಣೆ ಹೇರಲು ಸಾಧ್ಯವಿಲ್ಲ, ನಿಜ. ಆದರೆ ಲಭ್ಯವಿರುವ ಎಲ್ಲ ದಾ ಬಳಸಿಕೊಂಡರೂ ಜನಜಾಗೃತಿ ಸಾಧ್ಯವಾಗುತ್ತಿಲ್ಲವೇಕೆ? ದೇಶದ ಭಾಗದಲ್ಲೂ ಇರದೆ ಕರ್ನಾಟಕದಲ್ಲಿ ಮಾತ್ರ ಇದ್ದ ಬೆತ್ತ ನಿಂತರೂ ದೇವದಾಸಿ ಪದ್ಧತಿ ಉಳಿದುಬಂದಿದೆ ಏಕೆ? ಸಂಪೂ ನಿಂತ ಬೆತ್ತಲೆಸೇವೆಯ ಪುನರುತ್ಥಾನ ಬೇವಿನ ಉಡುಗೆ ರೂಪದಲ್ಲಿ ಮತ್ತೆ ಆಗುತ್ತಿದೆಯೆ? ಎಂಬ ಪ್ರಶ್ನೆಗಳು ಏ

ಬಹುಶಃ ಆಶಯಗಳನ್ನು ಸಾಕಾರಗೊಳಿಸುವ ಕ್ರಿಯಾಯೋ ವೈಫಲ್ಯ ಈ ಪದ್ಧತಿ ಉಳಿದುಬರಲು ಒಂದು ಕಾರಣ ದೇವದಾಸಿ ಪದ್ಧತಿ ನಿಲ್ಲಿಸಲು ತೆಗೆದುಕೊಂಡ ಆಡಳಿತಾತ್ಮಕ ಲೋಪದೋಷಗಳಿಂದ ಕೂಡಿದೆ. ಇಲ್ಲಿಯವರೆಗೆ ದೇವದಾಸಿಯರನ್ನು ಗು ನಡೆಸಿದ ಸಮೀಕ್ಷೆಗಳು ಅಪೂರ್ಣವಾಗಿವೆ. ಈಗ ದೇವದಾಸಿಯರ ಕೆಲಸ ಮಾಡುವುದೆಂದರೆ ದೇವದಾಸಿಯಾಗಿರುವವರನ್ನು ಗುರುತಿಸಿ ಅವರಿಗೆ ಮಾಸಾಶನ ಕೊಡಿಸುವುದು ಅಥವಾ ಪುನರ್ವಸತಿ ಕಾರ್ಯಕ್ರ ದಲ್ಲಾಳಿ/ಸಂಸ್ಥೆಗಳಿಗೆ ಮಂಜೂರಿ ಮಾಡುವುದು ಎಂದು ಬಗೆಯುವ

ಇಂಜಿನ್ ಕೆಟ್ಟ ಮೇಲೆ ಶೆಡ್ಡಿಗೆ ನೂಕೋದೆ ಒಳ್ಳೇದು

ಕಾಂಗ್ರೆಸ್ ಮನೆಯಲ್ಲಿ ಹಳೆಕಾಲದ ಹೆಗ್ಗಣದಂತೆ ಸೇರಿಕೊಂಡು ಬೇಕಾದಷ್ಟು ಮರಿ ಮಾಡಿ, ಇಡೀ ಮನೆಯನ್ನೇ ಪುತಾರಗೈದು ಪುಷ್ಕಳವಾಗಿ ಮೇಯುತ್ತ, ಎಲ್ಲರನ್ನೂ ಅರೆಗಣ್ಣಿನಿಂದಲೇ ನೋಡುತ್ತಿದ್ದ ಜಾಫರ್ ಷರೀಫ್ ಎಂಬ ಹಳೆ ಇಜ್ಜಲು ಗಾಡಿ ಹಾಸನದ ಕಡೆಯ ಹೊಸ ರೈಲು ಹಳಿಯ ಮೇಲೆ ನಿಂತಿದೆಯಂತಲ್ಲಾ, ಬಹು ದೀರ್ಘಾವಧಿಗೆ ರೈಲ್ವೆ ಮಂತ್ರಿಯಾಗಿ ಕರ್ನಾಟಕದ ಮೀಟರ್‌ಗೇಜ್ ಹಳಿಯನ್ನು ಬ್ರಾಡ್‌ಗೇಜ್‌ಗೆ ಬದಲಿಸಿ, ಹಳೆ ಸೇತುವೆಗೆ ಹೊಸಗಾರೆ ಬಳಿದು, ಹೊಸ ಗಾಡಿಗೆ ಹಳೆ ಬಣ್ಣ ಬಳಿದು, ಅವನ್ನೆಲ್ಲಾ ಗುಜರಿಗೆ ತಳ್ಳಿ, ತಾನೇ ಕೊಂಡುಕೊಂಡು ಮಾರಿ, ತನ್ನ ಮುಂದಿನ ಪೀಳಿಗೆಯ ಮೂರು ಜನ್ಮಕ್ಕಾಗುವಷ್ಟು ಆಸ್ತಿ ಸಂಪಾದಿಸಿದ ಜಾಫರ್ ಷರೀಫ್ ಏಳಲಾಗದಿದ್ದರೂ ಕುಳಿತಲ್ಲೇ "ನನಗೊಂದು ಟಿಕೆಟ್ ಬೇಕು" ಎಂದರಂತಲ್ಲಾ, ಏತಕ್ಕೆ ಎಂದು ಕೇಳಿದರೆ "ದೆಹಲಿಗೆ ಹೋಗಿ ಮಲಗುತ್ತೇನೆ" ಎಂದರಂತಲ್ಲಾ, ಕೂಡಲೇ ಇಬ್ರಾಹಿಂ ಶಕುನಿ ದನಿಯಲ್ಲಿ "ಸಿದ್ರಾಮಣ್ಣ, ಈ ಜಾಫರ್ ಷರೀಫ್ ಅನ್ನೋ ಹಳೆಗಾಡಿಲಿ ಯಾವ್ದೂ ಸರಿ ಇಲ್ಲ, ಈ ಇಜ್ಜಲುಗಾಡಿ ಈಗ ನಡಿಯಲ್ಲ, ಏನಾದ್ರು ಮಾಡನ ಅಂದ್ರೆ ಇಂಜಿನ್ನೆ ಹಾಳಾಗಿದೆ. ಅದ್ರಿಂದ ಇದನ್ನ ರೈಲು ಮ್ಯೂಜಿಯಂಗೆ ನೂಕಿ, ರಿಜ್ವಾನ್ ಅನ್ನೊ ಹೊಸಾ ಡಿಸೈನಿನ ಗಾಡಿಗೆ ಟಿಕೆಟ್ ಕೊಟ್ರೆ ಗ್ಯಾರಂಟಿ ಗೆಲ್ತಿವಿ. ಇಲ್ಲ ಅಂದ್ರೆ, ಈ ಜಾಫರ್ ಅಲ್ಲಾನ ಸಾಮ್ರಾಜ್ಯಕ್ಕೆ ಸೇರಿಕೊಳ್ಳನ, ನೀವು ಶಿವನಪಾದ ಸೇರಬೇಕಾಗುತ್ತೆ" ಎಂದರಂತಲ್ಲಾ, ಆಗ ಸಿದ್ದು "ಸರಿ ಬಿಡು ಹಂಗೇ ಮಾಡಾನ" ಎಂದರಂತಲ್ಲಾ, ಥೂತ್ತೇರಿ!

* * * *

"ಮೋದಿ ಗೆದ್ದು ಪ್ರಧಾನಿಯಾದ ಕೂಡಲೆ ಮೊದಲು ಮಾಡುವ ಕೆಲಸವೇನೆಂದರೆ ಪಾಕಿಸ್ತಾನದ ಮೇಲೆ ಯುದ್ಧ, ಆ ಯುದ್ಧದಲ್ಲಿ ಗೆದ್ದ ನಂತರವೇ ನಮ್ಮ ಮುಂದಿನ ಕೆಲಸ" ಎಂದು ಈಶ್ವರಪ್ಪನೆಂಬ ಅಸುರ ಅಬ್ಬರಿಸಿದ ಕೂಡಲೇ, ಶಿವಮೊಗ್ಗದ ಬಿಜೆಪಿಗಳು ಬೆಚ್ಚಿ ಕೂತರಂತಲ್ಲಾ, ಏಕೆಂದರೆ, ಇದೇ ಈಶ್ವರಪ್ಪ ತಾನೇ ಚುನಾವಣೆಗೆ ನಿಂತಿದ್ದಾಗ "ಸುಮಾರು ಅರವತ್ತಕ್ಕೂ ಹೆಚ್ಚು ಬ್ರಾಹ್ಮಣ ಹೆಣ್ಣುಮಕ್ಕಳನ್ನು ಮುಸ್ಲಿಂ ಯುವಕರು ಹಾರಿಸಿಕೊಂಡು ಹೋಗಿ ಮತಾಂತರ ಮಾಡಿಕೊಂಡಿದ್ದಾರೆ" ಎಂದು ಕೂಗಿದ್ದನಂತಲ್ಲಾ, ಈ ಕೂಗು ನಮಾಜಿನ ಕೂಗಿನಂತೆ ಬ್ರಾಹ್ಮಣರಿಗೆ ಕೇಳಲಾಗಿ ಅವರೆಲ್ಲಾ ಜನಿವಾರ ತೀಡಿಕೊಂಡು ಈಶ್ವರಪ್ಪನ ನಾಲಿಗೆಗೆ ಸರಿಯಾದ ಪಾಠ ಕಲಿಸಲು ನಿರ್ಧರಿಸಿದಂತಲ್ಲಾ, "ಮುಸ್ಲಿಮರು ಬ್ರಾಹ್ಮಣರ ಹೆಣ್ಣು ಮಕ್ಕಳನ್ನು ಹಾರಿಸಿಕೊಂಡು ಹೋದರು ಎಂದರೆ ಏನಾಯ್ತು? ನಾವು ನಮ್ಮ ಹೆಣ್ಣುಮಕ್ಕಳನ್ನು ರಕ್ಷಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದೇವೆ ಅಥವಾ ಓಡಿಹೋಗುವ ಅವಕಾಶ ಕೊಟ್ಟಿರುವ ದುರ್ಬಲ ಜನಾಂಗ ಎಂದಾಯಿತಲ್ಲವೆ. ಇದಕ್ಕಾಗಿ ಈಶ್ವರಪ್ಪನ ಮೇಲೆ ಪ್ರಯೋಗಿಸಲು ಇರುವ ಅಸ್ತ್ರವೆಂದರೆ ಓಟು. ಅದನ್ನು ನಮ್ಮ ಜಾತಿಯ ಹುಡುಗನಿಗೇ ಹಾಕೋಣ" ಎಂದು ನಿರ್ಧರಿಸಿದ ಕ್ಷಣಕ್ಕೆ, ಈಶ್ವರಿ ಸೋತುಹೋದನಂತಲ್ಲಾ. ಈಗಲೂ ಕೂಡ ಯಡಿಯೂರಪ್ಪನನ್ನು ಹಳ್ಳಕ್ಕೆ ಕೆಡವಲು ಯಾವ ಯಾವ ಮಾತುಗಳನ್ನಾಡಬೇಕೊ ಅವನ್ನೆಲ್ಲಾ ಆಡುತ್ತಿದ್ದಾನಂತಲ್ಲಾ, ಸದರಿ ಮಾತುಗಳನ್ನು ಹಿಂಪಡೆಯಲಾಗದ ಸ್ಥಿತಿಗೆ ಬಂದು ಕಡೆಗೆ ಅವುಗಳನ್ನೆ ಸಮರ್ಥಿಸುತ್ತಾ ಹೋರಾಡುವ ಈಶ್ವರಿಯ ಉತ್ಸಾಹ ಕಂಡ ಯಡ್ಡಿ ಹಿಂಬಾಲಕರು "ಸಾರ್, ನೀವು ಆ ಧನಂಜಯ ಕುಮಾರನಿಂದ ಬಿಡುಗಡೆ ಪಡೆದಿರಿ ಎಂಬ ನಿಟ್ಟುಸಿರು ಬಿಡೋದಕ್ಕಿಂತ ಈಶ್ವರಪ್ಪನ ಗರಗಸದಂತಹ ನಾಲಿಗೆ ಬಗ್ಗೆ ನಿಗಾ ಇಡಿ ಸಾರ್" ಎಂದರಂತಲ್ಲಾ, ಥೂತ್ತೇರಿ!

* * * *

ಕಡೆಗೂ ಕೂಗು ಮಾರಪ್ಪ ಕಮಲ ತೆಗೆದು ಮುಡಿಗೇರಿಸಿಕೊಂಡಳಂತಲ್ಲಾ. ವಿದ್ಯಾರ್ಥಿಯಾಗಿದ್ದಾಗ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ "ಪರವಾಗಿ ಮಾತನಾಡಬೇಕೊ ಅಥವಾ ವಿರೋಧವಾಗಿ



ಮಾತನಾಡಬೇಕೊ ಬೇಗ ಹೇಳಿ" ಎಂದು ಏರ್ಪಡಿಸಿದವರನ್ನೇ ಕೇಳಿ, ಎಂತಹ ಭಾಷಣವನ್ನೂ ಕೂಗುಮಾರಿ ಜಡಿಯುತ್ತಿದ್ದಳಂತಲ್ಲಾ, ಈಗ ಕಾಂಗ್ರೆ ಬಿಜೆಪಿ ಸೇರಿದ ಕೆಲವೇ ನಿಮಿಷಗಳಲ್ಲಿ, "ಬಲಿ ಕಟ್ಟುವಲ್ಲಿ ಕಾಂಗ್ರೆಸ್ ಸೋತಿದೆ. ಅದಕ್ಕೆ ವ ಮನಮೋಹನ್ ಸಿಂಗನೇ ಕಾರಣ. ಆದರೆ ದೇಹದಲ್ಲಿ ಇನ್ನೂ ಕಸುವಿದೆ. ಬ್ರಹ್ಮಚಾರಿ ಬೇರೆ ಹೇಳುತ್ತಿದ್ದಾರೆ. ಆದ್ದರಿಂದ ಮೋದಿ ಭಾರತ ಕಟ್ಟುವುದು ಗ್ಯಾರಂಟಿ. ಇದು ಹೋಳಿದ ನಾನು ಎಲ್ಲವನ್ನು ಬಿಟ್ಟು ಬಿಜೆಪಿಗೆ ಬಂದಿದ್ದೇನೆ ನನ್ನ ಮುಂದಿರುವ ಗುರಿ ಎಂದರೆ, ಸೇವ ಸಾಕಾದ ನಂತರ ತ್ಯಾಗ ಮಾಡುವುದು. ಬಿಜೆಪಿಯೇ ತಕ್ಕ ಪಾರ್ಟಿ. ಹಾಗೆ ನೋಡಿದ ಯಡಿಯೂರಪ್ಪನ ಸುವರ್ಣ ಯುಗದಲ್ಲೇ ನಾನ ಸೇರಬೇಕಾಗಿತ್ತು, ಆಗ ನನ್ನ ಪ್ರೀತಿಯ ರಾಜಕಾರ ಕೃಷ್ಣಯ್ಯ ಶೆಟ್ಟಿ, ಕಟ್ಟಾಸುಬ್ರ, ಉಡುಪಿ ಭಟ್ಟ, ಗೂಳಿ, ಲಕ್ಷ್ಮಣ ಸವದಿ ಇತ್ಯಾದಿಗಳು ಸ್ಟ್ರಾಪ್ಟ ಮಾಡುತ್ತಿದ್ದರಿಂದ ಆಗಲೇ ಅವರ ಬಳಿಗೆ "ಏನು ನಿಮ್ಮ ಸಮಸ್ಯೆ. ನನಗೆ ಹೇಳಿ ಪರಿಹ ಎಂದು ಕೇಳಬೇಕೆನಿಸಿತ್ತು. ಆದರೆ ನಾನು ಕಾಂಗ ಈಗ ಗಂಡನನ್ನು ತೊರೆದ ಮನೆ ಮಗಳಂತೆ ಬಂದಿದ್ದೇನೆ. ನೀವು ಹೇಳಿದ ಕೆಲಸ ಮಾ ಸಹಕರಿಸಿ" ಎಂದಳಂತಲ್ಲಾ, ಥೂತ್ತೇರಿ!

* * * *

ಒಂದು ಕಾಲದಲ್ಲಿ ಕಾಂಗ್ರೆಸ್ಸಿಗರು ಭಾಷಣ ಎದ್ದ ಕೂಡಲೇ ಇಂದಿರಾಗಾಂಧಿ ಮುಂದುವರಿಯಬೇಕಿತ್ತಂತಲ್ಲಾ. ಹಾಗೆಯೆ ಮಂಡ್ಯದಲ್ಲಿ ಮಾತನಾಡಲು ಎದ್ದ ಕಾಂಗ್ರೆಸ್ಸಿಗರು

ಆಫೀಸರ್‌ಗಳಿದ್ದಾರೆ. ಪುನರ್ವಸತಿ/ಸಾಲ/ಮಾಸಾಶನಗಳ ಆಮಿಷಕ್ಕೆ ದೇವದಾಸಿಯಲ್ಲದವರೂ ಏಜೆಂಟರನ್ನು ಹಿಡಿದು ಸುಳ್ಳು ಪ್ರಮಾಣಪತ್ರ ನೀಡಿ ಸವಲತ್ತು ಪಡೆದವರಿದ್ದಾರೆ. ಹೀಗಾಗದಂತೆ ಒಂದು ಫೂಲ್‌ಪ್ರೂಫ್ ವ್ಯವಸ್ಥೆ ಸೃಷ್ಟಿಯಾಗಲು ಜನಜಾಗೃತಿಯೇ ಅನಿವಾರ್ಯ ಕ್ರಿಯೆಯಾಗಿದೆ.

ಸರಕು ಸಂಸ್ಕೃತಿಯ ಉಚ್ಛ್ರಾಯದ ಈ ದಿನಗಳಲ್ಲಿ ದೇವರು, ದೇವಮಾನವರು, ವ್ಯಾಪಾರಿಗಳು, ರಾಜಕಾರಣಿಗಳು, ಅಧಿಕಾರಿಗಳು, ಸೇನೆ, ಪೊಲೀಸ್ ವ್ಯವಸ್ಥೆ ಪ್ರವಾಸೋದ್ಯಮ - ಹೀಗೆ ಎಲ್ಲ ಎಂದರೆ ಎಲ್ಲ ಕಡೆಯೂ ಮಹಿಳೆಯರನ್ನು ಕೀಳಾಗಿ ನೋಡಲಾಗುತ್ತಿದೆ. ಕೇವಲ ಮಾರುಕಟ್ಟೆ ವಿಸ್ತರಿಸುವ ದಲ್ಲಾಳಿಯಾಗಿ ಅವಳನ್ನು; ಅವಳ ದೇಹವನ್ನು ಬಳಸಿಕೊಳ್ಳಲಾಗುತ್ತಿದೆ. ಇದೆಲ್ಲದರ ವಿರುದ್ಧ ಮಹಿಳಾ ಜಾಗೃತಿ ಮೂಡಬೇಕಿರುವ ಹೊತ್ತಿನಲ್ಲೇ ತನ್ನ ಕಾಲಬುಡದ ನೆಲ ಎಷ್ಟು ಗಟ್ಟಿಯದೆಂದು ಅವಳು ತಿಳಿಯಬೇಕಾದ ಅಗತ್ಯವಿದೆ. ಕುಸಿಯುತ್ತಿರುವ ಲಿಂಗಾನುಪಾತ, ಹೆಚ್ಚುತ್ತಿರುವ ಅತ್ಯಾಚಾರ, ಬಡತನ, ಹಸಿವು, ಬಾಲವೇಶ್ಯೆಯರ ಸಂಖ್ಯೆಯ ಹೆಚ್ಚಳ, ನಿರುದ್ಯೋಗ ಸಮಸ್ಯೆ, ಜಾತಿ ದೌರ್ಜನ್ಯ ಮತ್ತಿತರ ಸಾಮಾಜಿಕ ಸಮಸ್ಯೆಗಳು ಒಂದರೊಡನೊಂದು ನೇರ ಸಂಬಂಧ ಹೊಂದಿದ್ದು ಇಂಥ ಎಲ್ಲ ವಿಷಯಗಳನ್ನು ಮಹಿಳೆ ಗುರುತಿಸಬೇಕಿದೆ.

ಆದರೆ ದಿಕ್ಕೆಡಿಸುವ ಅಂಶವೆಂದರೆ ಸಮಾಜದ ಅಂತಸ್ಸಾಕ್ಷಿ ನಿರ್ವಾತ ಎನಿಸುವ ಹಂತ ತಲುಪಿರುವುದು. ಪ್ರತಿವರ್ಷ ನಡೆಯುತ್ತಿದ್ದರೂ ಯಾಕೆ ಯಾರಿಗೂ ಇಂಥ ಆಚರಣೆ ಸರಿಯಲ್ಲ ಎಂದು ದನಿಯೆತ್ತುವ ಧೈರ್ಯವಾಗದೇ ಇರುವುದು? ಜನನಾಯಕರಿಗೆ ಓಟಿನ ಕಾಳಜಿ. ಉಳಿದಂತೆ ಪ್ರಜ್ಞಾವಂತ, ವಿದ್ಯಾವಂತ ಸಮಾಜವಿರುವ ಕರ್ನಾಟಕದಲ್ಲಿ ಈಗ್ಗೆ 3-4 ದಶಕದ ಹಿಂದಿದ್ದ ಚಳವಳಿಯ ಹುಮ್ಮಸ್ಸು, ತೀಕ್ಷ್ಣ ದೃಷ್ಟಿಕೋನ ಮತ್ತು ವಿಮರ್ಶೆ ಎಲ್ಲಿ ಹೋಯಿತು? ಹೀಗೆಂದುಕೊಳ್ಳುತ್ತಿರುವಾಗಲೇ ಪ್ರಗತಿಪರ ಗುಂಪುಗಳು ಹಾಗೂ ಮಠಾಧೀಶರು ಜಾಗೃತಿ ಸಮಾವೇಶ ಕಾರ್ಯಕ್ರಮ ಆಯೋಜಿಸಿರುವುದು ಆಶಾಭಾವನೆ ಮೂಡಿಸುವಂತಿದೆ.

ಜನಸಾಮಾನ್ಯರಲ್ಲಿ ಕನಿಷ್ಠ ವೈಚಾರಿಕತೆಯನ್ನೂ, ವೈಜ್ಞಾನಿಕ ಜ್ಞಾನವನ್ನೂ ಹರಡಲಾಗದ ಈ 2014ನೇ ಇಸವಿಯಲ್ಲೂ ದೇವರು–ಆಚರಣೆ–ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಹೆಣ್ಣುಮಕ್ಕಳ ಮಾರಾಟ/ಶೋಷಣೆಗಾಗಿ ಯಾರನ್ನು ದೂರುವುದು? ಮೂಢನಂಬಿಕೆ ಕಾನೂನು ಜಾರಿಯಾದರೆ ದೇವದಾಸಿ ಪದ್ಧತಿ ನಿಲ್ಲಬಹುದೆಂದು ಹೇಗೆ ಆಶಿಸುವುದು?

■ ಡಾ.ಎಚ್.ಎಸ್.ಅನುಪಮಾ


ಧಾತ್ತೇರಿ

▶ ಯಾಹೂ

ಅಂಬರೀಶ್ ಜೊತೆಗೆ ರೆಬಲ್‌ಸ್ಟಾರ್ ಸೇರಿಸಿ ಮಾತನಾಡುವ ಪರಿಪಾಠ ಬೆಳೆದಿದೆಯಂತಲ್ಲಾ, ಸ್ವತಃ ಸ್ಟಾರ್ ಆದ ರಮ್ಯಾ "ನಮ್ಮ ತಂದೆ, ಮಂಡ್ಯದ ಜನ" ಇತ್ಯಾದಿ ಪ್ರಥಮ ವಾಕ್ಯಕ್ಕೆ ಅಂಬಿ ಬೆಂಬಲಿಗರು ಸಿಡಿದೆದ್ದು, ತಿರುಗಿಬಿದ್ದು, ಮಾರಾಮಾರಿ ಮಾಡಿಕೊಂಡವಂತಲ್ಲಾ, ಇದರಿಂದ ಗಲಿಬಿಲಿಯಾದ ರಮ್ಯಾಗೆ ಮಂಡ್ಯ ಜಿಲ್ಲೆಯಲ್ಲಿ ಹೇಗೆ ಮಾತನಾಡಬೇಕೆಂದು ದಿಕ್ಕುಗಾಣದಂತಿರಬೇಕಾದರೆ ವಯೋವೃದ್ಧರು, ಜ್ಞಾನವೃದ್ಧರೂ ಆದ ಮಾದೇಗೌಡರು "ಆ ಹುಡುಗಿಗೆ ಮಾರಾಡು, ಕಾಂಗ್ರೆಸ್‌ನೋರು ಮಂಡ್ಯ ಜಿಲ್ಲೆ ಮಾತು ಕಲ್ಸಿ" ಎಂದರಂತಲ್ಲಾ. ಈ ನಡುವೆ ಕ್ಷೇತ್ರದಲ್ಲಿ ಸೀಟ್ ಕಳೆದುಕೊಂಡು ಎಲ್ಲಾ ಪಾರ್ಟಿಯ ಗಣ್ಯರ ಮನೆ ಹೊಸಲು ತುಳಿದೇ ಸಾಕಾಗಿರುವ ಶಿವರಾಮೇಗೌಡ ಸಿದ್ದರಾಮಯ್ಯನವರನ್ನ ಭೇಟಿ ಮಾಡಿ "ಆ ರಮ್ಯಾನಿಗಿಂತ ನನಗೇ ಟಿಕೆಟ್ ಕೊಟದ್ರೆ ಗೆದ್ದೇ ಗೆಲ್ತಿನಪ್ಪ" ಎಂದರಂತಲ್ಲಾ, ಆಗ ಸಿದ್ದರಾಮಯ್ಯ "ನಿನಗೆ ಜನ ಇನ್ನೂ ಓಟು ಕೊಡ್ತಾರೇನಯ್ಯಾ?" ಎಂದರಂತಲ್ಲಾ, ಇಂತಹ ಹಲವಾರು ಮಾತುಗಳನ್ನ ಸಂಗ್ರಹಿಸಿಕೊಂಡ ಶಿವರಾಮೇಗೌಡ ಸಿಂಗಾಪುರಕ್ಕೆ ಹಾರಿ ಹೋಗಿ ಅಂಬರೀಶ್‌ರನ್ನ ಕಂಡಾಗ "ಇಲ್ಲಾಕೆ ಬಂದಿದ್ರೆ" ಎಂದು ಅಂಬಿ ಕೆಕ್ಕರಿಸಿದರಂತಲ್ಲಾ, "ಜನಗಳು ಅಂಬರೀಶ್ ಹುಂಗದ್ದೆ ಅಂತ ಕೇಳ್ತಾರೆ. ಅಪ್ಪುರಿಗ್ಯಲ್ಲಿ ಚನ್ನಾಗ್ನವುನೆ ಅಂತ ಹೇಳಬೇಕಾದ್ರೆ, ಖುದ್ದು ನೋಡಿಕೊಂಡು ಹೋಗನ ಅಂತ ಬಂದೆ. ಆಮ್ಯಾಲೆ ಆ ರಮ್ಯಾ ಅನ್ನೋಳು ಯಾರಿಗೂ ಕೇರ್ ಮಾಡದಿಲ್ಲ, ಗೊಂಡು ಹಾಸಿಂದ ಕಡುಸಂಗೆ ಹೋಯ್ತಾಯಿರ್‍ತಾಳೆ" ಎಂದು ಇಂತಹ ಮಾತು ಶುರು ಮಾಡಿದನಂತಲ್ಲಾ, ಥೂತ್ತೇರಿ!


ಹಿರಿಯ ಪತ್ರಕರ್ತ ಮತ್ತು ಖ್ಯಾತ ಲೇಖಕ ಖುಷ್ವಂತ್ ಸಿಂಗ್ ಇನ್ನಿಲ್ಲ. ಅವರಿಗೆ 80 ವರ್ಷ ವಯಸ್ಸಾದಾಗ ಅವರನ್ನು ತುಂಬಾ ಇಷ್ಟಪಡುತ್ತಿದ್ದ ಪಿ. ಲಂಕೇಶರು ಬರೆದಿದ್ದ ಟಿಪ್ಪಣಿ ಇಲ್ಲಿದೆ

ಖುಷ್‌ವಂತ್ ಇನ್ನಿಲ್ಲ



ಈತ ನಿರೀಶ್ವರವಾದಿ- 'ದೇವರು ಇದ್ದಾನೆ' ಎಂದು ವಾದಿಸುವವರನ್ನು ಗೇಲಿ ಮಾಡಬಲ್ಲ, ಅಂಥ ಗೇಲಿ ಜಾಣರಿಗೆ ಸುಲಭ. ದೇವರು ಇದ್ದಾನೆ ಎಂದು ವಾದಿಸುವವರನ್ನೂ ಇಲ್ಲ ಎಂದು ವಾದಿಸುವವರನ್ನೂ ಸಮಾನವಾಗಿ ಭೂಗತ ಮಾಡಬಹುದು. ದೇವರು ಇದ್ದಾನೆ ಎಂದು ಗಟ್ಟಿಧ್ವನಿಯಲ್ಲಿ ಕೂಗಾಡುವವರು ಇಲ್ಲ ಎಂದು ಸಕಾರಣವಾಗಿ ಕೂಗಾಡುವವರು ಹಾಸ್ಯಾಸ್ಪದರಾಗುವುದಕ್ಕೇ ಜನಿಸಿದವರು. ಈ ಬಗ್ಗೆ ಸುಮ್ಮನಿರುವವವರು ಗಂಭೀರರು. ದೇವರು ಇದ್ದಾನೆ, ದೇವರು ಇಲ್ಲ, ಇದ್ದರೂ ಇರಬಹುದು, ಇರದಿದ್ದರೆ ಸ್ವಲ್ಪ ತೊಂದರೆ ಇದೆ, ಇದ್ದರೆ ಕೆಲವು ಪ್ರಶ್ನೆ ಕೇಳುವುದಿದೆ- ಎಲ್ಲವೂ ಚರ್ಚೆಗೆ ಒಳ್ಳೆಯ ವಸ್ತುಗಳು. ಖುಷ್‌ವಂತ್ ಸಿಂಗ್ ತರಹದವರು ಇದ್ದಾನೆ, ಇಲ್ಲ ಎಂಬುದರ ನಡುವಿನ ಸಂದಿಗ್ಧತೆಯ ಲಾಭ ಪಡೆದವರು. ಮನುಷ್ಯ ಧ್ಯಾನಿಸಿದರೆ, ಮಾತಾಡಿದರೆ, ಮೋಹಿಸಿದರೆ, ದ್ವೇಷಿಸಿದರೆ- ಬೇರೆಬೇರೆ ರೀತಿಯಲ್ಲಿ ಕಾಣಬಹುದಾದ ದೇವರು ವಿಚಿತ್ರ. ಖುಷ್‌ವಂತ್ ನಂಬದಿರುವ ಮನುಷ್ಯ. ಅಂದರೆ ನಿರೀಶ್ವರವಾದಿ. ಆದರೆ ಕಟ್ಟಾ ಸಿಖ್ ಈತ. ಸಿಖ್ ಜನರ ಹುಂಬತನ, ಗಟ್ಟಿಗತನ, ಪೊಳ್ಳುತನ, ಮೂರ್ಖತನ- ಇವೆಲ್ಲವನ್ನೂ ಅರಿತ ಈ ಸರ್ದಾರ್ಜಿ ಖುಷ್‌ವಂತ್ ಗಡ್ಡ, ಪೇಟ ತೆಗೆಯುವುದಿಲ್ಲ; ಸಿಖ್ ವೇಷಭೂಷಣ ಇದ್ದರೇ ತನಗೆ ವ್ಯಕ್ತಿತ್ವ ಎಂದು ನಂಬಿದಾತ. ಇದರಿಂದಾಗಿ ಈತನ ಮಗ ರಾಹುಲ್‌ಸಿಂಗ್ ಗಡ್ಡ ಬೋಳಿಸಿಕೊಂಡಾಗ ಆಕ್ಷೇಪಣೆ ಎತ್ತಿ ಜಗಳ ಆಡಿದ; ಗಡ್ಡ ಇಲ್ಲದಿದ್ದರೆ ನಿನಗೆ ನಿನ್ನತನವೇ ಇಲ್ಲ ಎಂದು ಖಂಡಿಸಿ ಅನೇಕ ದಿನ ಮಾತುಬಿಟ್ಟ. ಆದರೆ ಒಬ್ಬನೇ ಮಗ ರಾಹುಲ್; ಬರೆಯಬಲ್ಲವನು ಮತ್ತು ಅಖಂಡ ಬ್ರಹ್ಮಚಾರಿ. ಭಾರತದ ಜನಸಂಖ್ಯೆಯ ಸಮಸ್ಯೆಯ ಬಗ್ಗೆ, ಕುಟುಂಬ ನಿಯಂತ್ರಣದ ಬಗ್ಗೆ ಸಮರ್ಥವಾಗಿ ಬರೆಯಬಲ್ಲವನು. ಆದ್ದರಿಂದ ಮಗನ ಬಗ್ಗೆ ಖುಷ್‌ವಂತ್‌ಗೆ ಹೆಮ್ಮೆ; ಹೆಂಡತಿಯ ಒಳ್ಳೆಯತನ, ದಿಲ್ಲಿಯ ಸೌಂದರ್ಯ, ಭಾರತದ ವೈವಿಧ್ಯಮಯತೆ, ಬದುಕಿನ ರಸವಂತಿಕೆ, ಬರೆಯುವ ರೋಮಾಂಚನ ಎಲ್ಲ ಖುಷ್‌ವಂತ್‌ಗೆ ಇಷ್ಟ.

ಎಂಭತ್ತು ತುಂಬಿದ ಖುಷ್‌ವಂತ್ ಮೂಲಭೂತವಾಗಿ ಪಂಜಾಬ್‌ನ ಹಳ್ಳಿಯ ಮನುಷ್ಯ; ಆತನ ಅನೇಕ ಸಮಕಾಲೀನರಂತೆಯೇ ಹಳ್ಳಿಯ ಸರಳತೆ ಮತ್ತು ಮುಗ್ಧತೆಯನ್ನು ಬಿಟ್ಟುಕೊಡದೆ ಪೇಟೆಯ ಆಧುನಿಕತೆಗೆ ಮಾರು ಹೋದವನು. ಈತ ಬದುಕಿಬಂದ ರೀತಿ ಕೂಡ ಈ ದೃಷ್ಟಿಯಿಂದ ಕುತೂಹಲಕರ- ಚಿಕ್ಕವನಾಗಿದ್ದಾಗ ವಕೀಲನಾಗಿದ್ದ. ಆದರೆ ಎಂಥ ಸಾಮಾನ್ಯ ವಕೀಲನೆಂದರೆ ಇವನಲ್ಲಿಗೆ ಕೇಸ್ ತರುತ್ತಿದ್ದವರೇ ಕಮ್ಮಿ. ಹೀಗಾಗಿ ಇಂಗ್ಲಿಷ್ ಸಾಹಿತ್ಯದ ಪದವೀಧರನಾಗಿದ್ದ ಖುಷ್‌ವಂತ್ ಆರ್.ಕೆ. ನಾರಾಯಣ್, ಮುಲ್ಕರಾಜ್ ಆನಂದ್ ಮುಂತಾದವರ ಪುಸ್ತಕ ಓದತೊಡಗಿದ; ಕೆಲಸವಿಲ್ಲದೆ ಬಿಡುವು ಹೆಚ್ಚಾಗಿದ್ದುದರಿಂದ ಪದ್ಯ ಬರೆಯತೊಡಗಿದ. ಈ ಪದ್ಯ ಓದಲು ಲಾಹೋರ್‌ನ ತನ್ನ ಮಿತ್ರರನ್ನೆಲ್ಲ ಸೇರಿಸಿ ಸಂಘವೊಂದನ್ನು ಕಟ್ಟಿಕೊಂಡ. ಆಮೇಲೆ ಈತ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸಿದ. ಸರ್ದಾರ್ ಪಟೇಲರ ಕಾರ್ಯದರ್ಶಿಯೊಬ್ಬ ಈತನನ್ನು ಲಂಡನ್ನಿನ ರಾಯಭಾರಿ ಕಚೇರಿಯ ನೌಕರನನ್ನಾಗಿ ನೇಮಿಸಿದ. ಅಲ್ಲಿ ಕೃಷ್ಣ ಮೆನನ್ ಪರಿಚಯವಾಯಿತು. ಭಾರತಕ್ಕೆ ಕಮ್ಯುನಿಸ್ಟ್, ಸೋಷಲಿಸ್ಟರ ಮಂಕುಬೂದಿ ಬಿದ್ದಿದ್ದಾಗ ಖುಷ್‌ವಂತ್ ಈ ಕೃಷ್ಣ ಮೆನನ್‌ನ ಭಂಡತನ, ಕೇಡಿತನ ನೋಡಿ ದಂಗಾದ. ದಿಲ್ಲಿಗೆ ಬಂದಮೇಲೆ ಸರ್ಕಾರಿ ಪತ್ರಿಕೆ 'ಯೋಜನಾ'ದ ಸಂಪಾದಕನಾದ. ಸರ್ಕಾರಿ ಪತ್ರಿಕೆಗೆ ಏನು ಮಾಡಿದರೂ ಜೀವ ಬರುವುದಿಲ್ಲವೆಂದು ಕಂಡುಕೊಂಡ ಖುಷ್‌ವಂತ್ ಅದನ್ನು ಬಿಟ್ಟು 'ಇಲಸ್ಟ್ರೇಟೆಡ್ ವೀಕ್ಲಿ'ಯ ಸಂಪಾದಕನಾದ. ಖುಷ್‌ವಂತ್‌ನ ಜನಪ್ರಿಯತೆ ನಿಂತಿರುವುದು ವೀಕ್ಲಿಯ ಸಂಪಾದಕತ್ವದ ಮೇಲೆ.



ಚರಮವಾಕ್ಯ

2012 ರ ಸ್ವಾತಂತ್ರ್ಯೋತ್ಸವದಂದು, ನಾನು 98 ಕ್ಕೆ ಕಾಲಿಟ್ಟೆ. ನನ್ನ ಆರೋಗ್ಯದ ಬಗ್ಗೆ ಅರಿವಿರುವ ನನಗೆ ಗೊತ್ತಿದೆ, ನಾನು ಇನ್ನೊಂದು ಪುಸ್ತಕ ಬರೆಯಲಾರೆನೆಂದು. ವಾರಕ್ಕೆರಡು ಬಾರಿ, ಕಳೆದ ಐವತ್ತು ವರ್ಷಗಳಿಂದ ನಿರಂತರವಾಗಿ ನಾನು ಬರೆಯುತ್ತ ಬಂದಿರುವ ಎರಡು ಅಂಕಣಗಳನ್ನು ಮುಂದುವರಿಸುವುದು ಸಾಧ್ಯವಿಲ್ಲವೆಂದು ತೋರುತ್ತದೆ. ಸತ್ಯ ಏನೆಂದರೆ, ನಾನು ಸಾಯುವುದಕ್ಕೆ ಬಯಸುತ್ತೇನೆ. ನಾನು ಬದುಕಿದ್ದು ಸಾಕಷ್ಟು ಆಯಿತು. ನನ್ನ ಬದುಕಿನಲ್ಲಿ ಮಾಡಬೇಕೆಂದಿದ್ದನ್ನೆಲ್ಲ ನಾನು ಮಾಡಿ ಮುಗಿಸಿದ್ದೇನೆ. ಹೀಗಿದ್ದಾಗ, ಸಾಯುವುದಕ್ಕೆ ಇನ್ನೂ ಇಲ್ಲಿರುವಾಗ, ಇನ್ನು ಬದುಕಿಗೆ ಅಂಟಿಕೊಂಡು ನೇತಾಡುವುದರಲ್ಲಿ ಯಾವ ಪುರುಷಾರ್ಥವಿದೆ?

ನಾನು ಹೋದನಂತರ, ಜನ ನನ್ನನ್ನು ಹೇಗೆ ನೆನಪಿಸಿಕೊಳ್ಳಲು ಬಯಸುತ್ತೇನೆ ನಾನು? ಅವರನ್ನು ನಗುವಂತೆ ಮಾಡಿದವನೆಂದು ನನ್ನನ್ನು ನೆನಪು ಮಾಡಿಕೊಳ್ಳಲೆಂದು ನಾನು ಬಯಸುವುದು. ಕೆಲವು ವರ್ಷಗಳ ಕೆಳಗೆ ನಾನು ನನ್ನ ಸಮಾಧಿಲೇಖ ಬರೆದೆ:

ಇಲ್ಲಿ ಮಲಗಿದ್ದಾನೆ, ಮನುಷ್ಯರನ್ನು, ದೇವರನ್ನು
ಸುಮ್ಮನೆ ಇರಲಿಕ್ಕೆ ಬಿಡದವನು
ಬರಿದು ಮಾಡಿಕೊಳ್ಳದಿರಿ ಸುರಿಸಿ ನಿಮ್ಮ ಕಣ್ಣೀರು ಅವನಿಗಾಗಿ,
ಅವನೊಂದು ಹುಲ್ಲಿನ ಗದ್ದೆ
ಬುಚ್ಚಿ ಬರೆವುದನ್ನು ಅವನು ಶ್ರೇಷ್ಠವಾದ
ಹಾಸ್ಯ ಅಂದುಕೊಂಡ.
ದೇವರಿಗೆ ದೊಡ್ಡ ನಮಸ್ಕಾರ, ಅವನು ಸತ್ತ,
ಹನ್ನೆಲ್ಲ
ಗನ್ನು ಮಾಡಿಕೊಂಡವನು.

-ಖುಷ್ವಂತ್ ಸಿಂಗ್

(ಖುಷ್ವಂತ್‌ನಾಮ–ನನ್ನ ಬದುಕಿನ ಪಾಠಗಳು ಎಂಬ ಪುಸ್ತಕದಿಂದ)

ಅನುವಾದ: ಎಂ.ಎಸ್. ರುದ್ರೇಶ್ವರಸ್ವಾಮಿ

ಈ ಖುಷ್‌ವಂತ್ ಎಂಭತ್ತು ತಲುಪಿರುವಾಗ ಯಾರ್‍ಯಾರೋ ಏನೇನನ್ನೋ ಬರೆಯುತ್ತಿದ್ದಾರೆ. ಪೋಲಿ-ಮುದುಕ, ಪ್ರಖ್ಯಾತರ ಮುಖಭಂಗ ಮಾಡುವ ಅಗ್ನಿಭಕ್ಷಕ, ಸಮಯಸಾಧಕ- ಇತ್ಯಾದಿ. ಇವೆಲ್ಲ ನಿಜ ಮತ್ತು ಸುಳ್ಳು. ಹೆಂಗಸರನ್ನು ಕಂಡು ಈ ಖುಷ್‌ವಂತ್ ಬಾಯಿಬಾಯಿ ಬಿಡುವುದು ನಿಜ; ಆದರಲ್ಲಿ ಬಹುಪಾಲು ನಟನೆ. ದೊಡ್ಡವರ ಸಣ್ಣತನ ತೋರುವುದು ನಿಜ; ಆದರಲ್ಲಿ ಕೂಡ ಬಹುಪಾಲು ತುಂಟತನದ ಹೇಳಿಕೆ. ಇವೆಲ್ಲದರ ಮಧ್ಯೆ ಖುಷ್‌ವಂತ್ ಬಗ್ಗೆ ಒಂದು ಮಾತು ನಿಜ. ಈತ ಎಲ್ಲ ಆರೋಗ್ಯವಂತ ಮನುಷ್ಯರಂತೆ ಜೀವನವನ್ನು ಬಹುವಾಗಿ ಪ್ರೀತಿಸುತ್ತಾನೆ; ಕುಡಿಯುತ್ತಾನೆ, ಉಣ್ಣುತ್ತಾನೆ, ಹೊಗಳಿದರೆ ಮುದಗೊಳ್ಳುತ್ತಾನೆ, ಹಣ ಕಂಡು ಉಲ್ಲಸಿತನಾಗುತ್ತಾನೆ. ಸುಂದರ ಹೆಂಗಸಿನ ಎದುರು ರೆಕ್ಕೆಪುಕ್ಕ ಬೆಳೆಸಿಕೊಂಡು ಕುಣಿಯುತ್ತಾನೆ. ಎಲ್ಲ ಗಂಡಸರೂ ಹಾಗೇ. ಆದರಲ್ಲಿ ಎಂಥ ವಿಶೇಷವೇನಿಲ್ಲ, ಆದರೆ ಈ ಸರ್ದಾರ್ಜಿ ಬಗ್ಗೆ ವಿಶೇಷವೇನೆಂದರೆ, ಜೀವನವನ್ನು ಬಹುವಾಗಿ ಪ್ರೀತಿಸುವ ಈತ ಎಲ್ಲ ಜಾತಿಯ ಜನರನ್ನು ಪ್ರೀತಿಸುತ್ತಾನೆ. ಎಲ್ಲ ಜಾತಿಯ ಜನರ ದೌರ್ಬಲ್ಯ, ಪ್ರೀತಿ, ದಾಕ್ಷಿಣ್ಯ ಎಲ್ಲವನ್ನೂ ಬಲ್ಲ. ನಿರೀಶ್ವರವಾದಿಯಾದ್ದರಿಂದ ಈತನಿಗೆ ಧರ್ಮದ ಮಿತಿ ಗೊತ್ತು; ಜನಸಾಮಾನ್ಯರಿಗೆ ಧರ್ಮ ಎಷ್ಟು ಮುಖ್ಯ ಎಂಬುದೂ ಗೊತ್ತು. ಹೀಗಾಗಿ ಖುಷ್‌ವಂತ್ ಸಿಖ್ ಜನರ ಶಕ್ತಿ ಮತ್ತು ಅಸಹಾಯಕತೆ, ಮುಸ್ಲಿಮರ ತ್ರಾಣ ಮತ್ತು ಹುಂಬತನ, ಹಿಂದೂಗಳ ಗುಣ ಮತ್ತು ದೋಷ- ಎಲ್ಲವನ್ನೂ ಬಲ್ಲ. ಈ ಖುಷ್‌ವಂತ್ ಪಾಕಿಸ್ತಾನ ಮತ್ತು ಭಾರತವನ್ನು ಹತ್ತಿರ ತರುವಲ್ಲಿ, ಸಿಖ್ ಜನ ಭಾರತದಲ್ಲೇ ಉಳಿದು ನೆಮ್ಮದಿಯಾಗಿರುವಲ್ಲಿ ಮಾಡಿದಷ್ಟು ಕೆಲಸ ಯಾವನೂ ಮಾಡಿಲ್ಲ. ಇದನ್ನು ಈ ಸರ್ದಾರ್ಜಿ ಗಂಭೀರವಾಗಿ, ಅಳುಮೋರೆಯಿಂದ ಮಾಡಿಲ್ಲ; ಈತ ನಗುನಗುತ್ತಲೇ, ಕುಡಿಯುತ್ತಲೇ ಬದುಕನ್ನು ಪ್ರೀತಿಸುತ್ತಲೇ ಮಾಡಿದ್ದಾನೆ. ಈ ದೇಶದಲ್ಲಿ ಶಾಂತಿಗಾಗಿ ನೊಬೆಲ್ ಬಹುಮಾನ (ಈಚಿನ ವರ್ಷಗಳಲ್ಲಿ) ಸಿಗಬೇಕಾಗಿದ್ದರೆ ಅದು ಸಿಗಬೇಕಾದ್ದು ಖುಷ್‌ವಂತ್‌ಗೆ.

ಈ ಖುಷ್‌ವಂತ್ ಸಂಜಯ ಗಾಂಧಿಯನ್ನು ಇಷ್ಟಪಟ್ಟಿದ್ದು ನಿಜ. ಅದಕ್ಕೆ ಮುಖ್ಯ ಕಾರಣ ಸಂಜಯನ ಮುಗ್ಧ ತಳಮಳ ಮತ್ತು ಮೇನಕಾಳ ಸೌಂದರ್ಯ. ಇಂದಿರಾ ಗಾಂಧಿಯನ್ನು ಇಷ್ಟಪಟ್ಟದ್ದಕ್ಕೆ ಆಕೆಯ ಆಕರ್ಷಣೆ ಮುಖ್ಯ. ಅಧಿಕಾರಸ್ಥರನ್ನು ಕಂಡರೆ ಖುಷ್‌ವಂತ್‌ಗೆ ಇಷ್ಟ. ಆ ಬಗ್ಗೆ ಆತ ಹಾಗಲ್ಲ ಎಂದು ನಟಿಸುವುದಿಲ್ಲ. ಅದೇ ಆತನ ಶಕ್ತಿ ಮತ್ತು ವೈಶಿಷ್ಟ್ಯ ಕೂಡ.

ಖುಷ್‌ವಂತ್‌ಗೆ ಎಂಭತ್ತು ವರ್ಷ. ಆತನಂತೆ ಬರೆಯುವವರು, ಛೇಡಿಸುವವರು, ಕುಡಿಯುವವರು, ಕಲ್ಪಿಸಿಕೊಳ್ಳುವವರು ಬರಬಹುದು. ಆದರೆ ಈ ಸರ್ದಾರ್ಜಿಯಂತೆ ಲವಲವಿಕೆ, ದೇಶಪ್ರೇಮ, ತುಂಟತನ, ಒಳ್ಳೆಯತನ ಇರುವವರು ಬರುವುದು ಕಷ್ಟ. ಅದೇ ಈ ಜಗತ್ತಿನ ಜೀವನದ ಅಪಾಯ ಮತ್ತು ಆಕಸ್ಮಿಕ. ಎಲ್ಲೋ ಒಬ್ಬ ಒಳ್ಳೆಯವನು ಮತ್ತು ಅರ್ಥಪೂರ್ಣನಾದವನು ಆಕಸ್ಮಾತ್ತಾಗಿ ಹುಟ್ಟುತ್ತಾನೆ; ಒಳ್ಳೆಯವರು ಮತ್ತು ಅಪಾಯಕಾರಿಯಾದವರು ಬಹಳವಾಗಿ ಹುಟ್ಟುತ್ತಾರೆ.

ಖುಷ್‌ವಂತ್ ಇನ್ನೂ ಕೆಲವು ವರ್ಷ ಇರುವಂತಾಗಲಿ. ಈತನಿಂದ ಎಲ್ಲ ಜಾತಿಯ ಜನ 'ಕುಡಿದು ಖುಷಿ'ಯಾಗಿ ಬದುಕುವಂತಾಗಲಿ. ■

ಅಳಿಸಿ ತೆಗೆದ ನೆನಪು

ಸಂಪಾದಕರಿಗೆ ಪತ್ರ

ಪತ್ರಿಕೆಯ ಮಾರ್ಚ್ 19ರ ಹೈದರಾಬಾದ್-ಕರ್ನಾಟಕ ವಿಶೇಷಾಂಕದ ಎಲ್ಲ ಬರಹಗಳೂ ಆಸಕ್ತಿಯಿಂದ ಓದಿಸಿಕೊಳ್ಳುತ್ತವೆ. ವಿಶೇಷಾಂಕ ಹೊರತರುವುದರ ಮೂಲಕ ಕರ್ನಾಟಕದ ಅತ್ಯಂತ ಅಲಕ್ಷಿತ ಪ್ರದೇಶವೊಂದರತ್ತ ನಮ್ಮ ಗಮನ ಸೆಳೆದಿದ್ದೀರಿ; ಅಭಿನಂದನೆಗಳು. ಆದರೆ ಈ ಮೆಚ್ಚುಗೆಯ ಮಾತಿನ ಜೊತೆ, ನನ್ನ ಒಂದು ಸಣ್ಣ ಅಸಮಾಧಾನ ಬಗೆಗೂ ಹೇಳಬಯಸುವೆ. ಈ ಹಿಂದೆಯೂ ನಾನು ಹಲವು ಸಂದರ್ಭಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಆದರೆ ಯಾರೂ ನನ್ನ ಮಾತನ್ನು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಆ ದುಗುಡ ಬೆನ್ನು ಬಿಡದ ಬೇತಾಳನಂತೆ ನನ್ನನ್ನು ಕಾಡುತ್ತಿದೆ. ಹಾಗಾಗಿ ಮತ್ತೆ ಅದೇ ವಿಷಯದ ಕುರಿತು ಹೇಳುತ್ತಿದ್ದೇನೆ. ನನ್ನ ಅಸಮಾಧಾನಕ್ಕೆ ಕಾರಣ ಹೀಗಿದೆ:





ಖ್ಯಾತ ನ್ಯಾಯವಾದಿ, ವಿದ್ವಾಂಸ ಮತ್ತು ಪತ್ರಕರ್ತ ಎ.ಜಿ.ನೂರಾನಿ ತನ್ನ ಲೇಖನವೊಂದರಲ್ಲಿ ಸ್ವಾತಂತ್ರ್ಯಾನಂತರ ಆಗಿನ ಹೈದರಾಬಾದ್ ಸಂಸ್ಥಾನದಲ್ಲಿ ನಡೆದ ನರಮೇಧದ ಕುರಿತು ಬರೆದಿದ್ದರು. **(Of a masscare untold. A.G Noorani. FRONT LINE, March 16.2001. ಪುಟ 113-115)** ಸಂಸ್ಥಾನದಲ್ಲಿ ನಿಜಾಮನ ಆಳ್ವಿಕೆಯ ಕೊನೆಯ ದಿನಗಳಲ್ಲಿ ರಜಾಕಾರರು ಎಂಬ ಮುಸ್ಲಿಂ ಮತಾಂಧ ಪಡೆಯವರು, ಹಿಂದೂಗಳ ಮೇಲೆ ಎಣೆ ಇಲ್ಲದ ಹಿಂಸೆ ನಡೆಸಿದರು. ರಜಾಕಾರರಿಗೆ ನಿಜಾಮನ ಬೆಂಬಲವೂ ಇತ್ತು. ಸ್ವಾತಂತ್ರ್ಯಾನಂತರ ನೂರಾರು ದೇಶೀಯ ಸಂಸ್ಥಾನಗಳ ರಾಜಮಹಾರಾಜರು ತಮ್ಮ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಲು ಒಪ್ಪಿಕೊಂಡರೂ ಹೈದರಾಬಾದ್ ನಿಜಾಮ ಮಾತ್ರ ಸ್ವತಂತ್ರವಾಗಿ ಉಳಿಯಲು ತೀರ್ಮಾನಿಸಿದ್ದ. ತನ್ನ ಸಂಸ್ಥಾನವನ್ನು ಪಾಕಿಸ್ತಾನದೊಡನೆ ಸೇರ್ಪಡೆಗೊಳಿಸುವ ಬಗೆಗೂ ಆತ ಯೋಚಿಸುತ್ತಿದ್ದನಂತೆ. ಅದು ಹೇಗೂ ಇರಲಿ. 1948 ರ ಸೆಪ್ಟೆಂಬರ್‌ನಲ್ಲಿ ಭಾರತ ಸರಕಾರ ತುರ್ತು ಸೈನಿಕ ಕಾರ್ಯಾಚರಣೆಯ ಮುಖಾಂತರ ಸಂಸ್ಥಾನವನ್ನು ವಶಪಡಿಸಿಕೊಂಡಿತು. ಅದಕ್ಕೆ ನಿಜಾಮನ ಸೈನ್ಯದಿಂದಾಗಲೀ, ಮುಸ್ಲಿಮ್ ಪ್ರಜೆಗಳಿಂದಾಗಲೀ ಯಾವುದೇ ಪ್ರತಿರೋಧ ಕಂಡುಬರಲಿಲ್ಲ. ಈ ಸೈನಿಕ ಕಾರ್ಯಾಚರಣೆಯ ನಂತರ ಸಂಸ್ಥಾನದ ಸಾಮಾನ್ಯ ಮುಸ್ಲಿಮರ ಮೇಲೆ ಎಲ್ಲೆಡೆ ಹಿಂಸಾಚಾರ ನಡೆಯಿತು. ನಿಜಾಮನ ರಾಜ್ಯಭಾರದಲ್ಲಿ ರಜಾಕಾರರು ಹಿಂದೂಗಳ ಮೇಲೆ ನಡೆಸಿದ ಹಿಂಸೆಗೆ ಪ್ರತೀಕಾರವಾಗಿ ಈ ಹಿಂಸೆ ನಡೆದಿದ್ದರೂ ಅದರ ಪ್ರಮಾಣ ಮತ್ತು ಭೀಕರತೆ ಹತ್ತು ಪಟ್ಟು ಹೆಚ್ಚಾಗಿದ್ದಿತು. ಕೇಂದ್ರ ಸರಕಾರದ ವಿಚಾರಣಾ ಆಯೋಗವೊಂದರ ವರದಿಯ ಪ್ರಕಾರವೇ ಈ ಹಿಂಸಾಕಾಂಡದಲ್ಲಿ ಅಂದಾಜು 27,000 ದಿಂದ 40,000 ದಷ್ಟು ಮುಸ್ಲಿಮರು ಕೊಲೆಯಾದರು; ಇನ್ನು ಕೆಲವು ಮೂಲಗಳ ಪ್ರಕಾರ ಈ ಸಂಖ್ಯೆ ಎರಡು ಲಕ್ಷವನ್ನೂ ಮೀರುತ್ತದೆ. ಮನೆಮಾರು ಕಳೆದುಕೊಂಡು ನಿರಾಶ್ರಿತರಾದವರ ಸಂಖ್ಯೆ ಅದರ ಹಲವು ಪಟ್ಟು ಹೆಚ್ಚಾಗಿದ್ದಿತು. ಹೆಂಗಸರ ಮೇಲೆ ಅತ್ಯಾಚಾರ, ಸುಲಿಗೆ, ಆಸ್ತಿಪಾಸ್ತಿಗೆ ಬೆಂಕಿ ಹಚ್ಚುವುದು ಮುಂತಾದವು ಸಹ ಅಗಾಧ ಪ್ರಮಾಣದಲ್ಲಿ ನಡೆದವು. ಹಿಂಸೆಯಲ್ಲಿ ಭಾಗಿಯಾದವರ ಪೈಕಿ ಎಲ್ಲರೂ ಸ್ಥಳೀಯರಾಗಿರಲಿಲ್ಲ; ಸಂಸ್ಥಾನದ ಹೊರಗಿನಿಂದಲೂ ತರಬೇತಿ ಪಡೆದ ಹಿಂದೂ ಕಾಲಾಳುಗಳು ತಮ್ಮ ಹತ್ಯಾರಗಳ ಸಮೇತ ಬಂದು ಹಿಂಸೆಯಲ್ಲಿ ಪಾಲುಗೊಂಡರು. ಶೋಲಾಪುರದ ಹಿಂದೂತ್ವವಾದಿ ಸಂಘಟನೆಯೊಂದು ಇವರ ನೇತೃತ್ವ ವಹಿಸಿಕೊಂಡಿತ್ತು.

ಹೈದರಾಬಾದ್ ಸಂಸ್ಥಾನದಲ್ಲಿ ರಜಾಕಾರರು ಹಿಂದೂಗಳ ಮೇಲೆ ಎಸಗಿದ ಹಿಂಸೆ ಮತ್ತು ಅದಕ್ಕೆ ಎದುರಾಗಿ ಮುಸ್ಲಿಮರ ಮೇಲೆ ಹಿಂದೂಗಳು ನಡೆಸಿದ ಹಿಂಸೆ- ಈ ಎರಡನ್ನೂ ಚರಿತ್ರೆ ಒಂದೇ ಬಗೆಯಲ್ಲಿ ದಾಖಲಿಸಿಕೊಂಡಿಲ್ಲ. ರಜಾಕಾರರ ಹಿಂಸೆಯ ಬಗ್ಗೆ ಚಾರಿತ್ರಿಕ ದಾಖಲೆ ಮತ್ತು ಕಥನಗಳು ಹೇರಳವಾಗಿವೆ. ಆದರೆ ಹಿಂದೂಗಳು ಮುಸ್ಲಿಮರ ಮೇಲೆ ನಡೆಸಿದ ಹಿಂಸೆಯ ದಾಖಲೆ ನಿರೂಪಣೆ, ವರದಿ ಏನೂ ಲಭ್ಯವಿಲ್ಲ. ಅಷ್ಟೇ ಯಾಕೆ, ಆ ಹಿಂಸೆಯ ನೆನಪು ಸಹ ಉಳಿಯದಂತೆ ಜನರ ಮನಸ್ಸು ಮತ್ತು ಭಾಷೆಗಳಿಂದ ಅದನ್ನು ಅಳಿಸಿಹಾಕಲಾಗಿದೆ. ಭಾರತ ಒಕ್ಕೂಟದೊಡನೆ ಹೈದರಾಬಾದ್‌ನ ಕನ್ನಡ ಭಾಷಿಕ ಜಿಲ್ಲೆಗಳು ರಾಜ್ಯಕ್ಕೆ ಸೇರ್ಪಡೆಯಾದದ್ದನ್ನು ಜನ ನೆನಪಿಸಿಕೊಳ್ಳುತ್ತಾರೆ. ಆದರೆ ಆ ಪ್ರದೇಶ ಮುಸ್ಲಿಮ್ ಪ್ರಜೆಗಳ ಮೇಲೆ ನಡೆದ ಹಿಂಸೆಯನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಯಾಕೆ? ಸರಕಾರವೇ ನೇಮಿಸಿದ ವಿಚಾರಣಾ ಆಯೋಗದ ವರದಿ ಹೊರತುಪಡಿಸಿ ವಿಲ್‌ಫ್ರೆಡ್‌ಕ್ಯಾಂಟ್ ವೆಲ್‌ಸ್ಮಿತ್, ಮಾರ್ಗ್ರೆಟ್ ಪೆರ್ನಾರಂತಹ ಕೆಲವೇ ಕೆಲವು ಪಶ್ಚಿಮದ ವಿದ್ವಾಂಸರು ಈ ಹಿಂಸೆಯ ಬಗ್ಗೆ ಸಂಶೋಧನೆ ನಡೆಸಿ ಬರೆದಿದ್ದಾರೆ. ಆದರೆ ಕನ್ನಡಿಗರಿಗೆ ಆ ಬಗೆ ಏನೂ ಹೇಳುವುದಕ್ಕಿಲ್ಲವೆ?

ಹೈದರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನಗೊಂಡ ನಂತರ ಅಲ್ಲಿ ನಡೆದ ಹಿಂಸಾಚಾರದಿಂದ ವಿಚಲಿತರಾದ ಪ್ರಧಾನಿ ಜವಾಹರಲಾಲ್ ನೆಹರು, ಆ ಕುರಿತು ಹಿರಿಯ ಕಾಂಗ್ರೆಸ್ ನಾಯಕ ಪಂಡಿತ್ ಸುಂದರಲಾಲ್ ಅವರ ನೇತೃತ್ವದಲ್ಲಿ ಒಂದು ವಿಚಾರಣಾ ಆಯೋಗವನ್ನು ನೇಮಿಸಿದರು. ಸುಂದರಲಾಲ್ ಆಯೋಗದ ವರದಿಯನ್ನು ಸರಕಾರ ರಹಸ್ಯವಾಗಿಟ್ಟಿದ್ದರೂ ಅದು ಈಗ ಬಹಿರಂಗಗೊಂಡಿದೆ. ಎ.ಜಿ.ನೂರಾನಿಯವರ ಲೇಖನವೂ ಬಹುಮಟ್ಟಿಗೆ ಆ ವರದಿಯನ್ನೇ ಆಧರಿಸಿದೆ. ವರದಿಯ ಪ್ರಕಾರ ಮುಸ್ಲಿಮರ ಮೇಲೆ ಅತಿಹೆಚ್ಚು ಹಿಂಸೆ ನಡೆದ ಪ್ರದೇಶಗಳಲ್ಲಿ ಈಗ ಕರ್ನಾಟಕದ ಭಾಗವಾಗಿರುವ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು ಸೇರಿವೆ. ಆದರೆ ಕನ್ನಡಿಗರಿಗೆ ಮಾತ್ರ ಆ ಹಿಂಸೆಯ ಪರಿವೆಯಿಲ್ಲ. ಅದಕ್ಕೆ ಸರಿಯಾಗಿ, ಸರಕಾರ ವಿಶ್ವವಿದ್ಯಾನಿಲಯ ಮತ್ತು ಮಾಧ್ಯಮಗಳ ಜೊತೆ ಕರ್ನಾಟಕದ ಬುದ್ಧಿಜೀವಿಗಳೂ ಕೈಜೋಡಿಸಿ, ಆ ಕುರಿತು ಯಾವುದೇ ದಾಖಲೆ ಇಲ್ಲದಂತೆ ನೋಡಿಕೊಂಡಿದ್ದಾರೆ. ಇಲ್ಲಿ ನೆನಪುಗಳನ್ನು ವ್ಯವಸ್ಥಿತವಾಗಿ ನಾಶಗೊಳಿಸಲಾಗಿದೆ. ನೆನಪು ಮತ್ತು ಮರೆವು ತಮ್ಮಷ್ಟಕ್ಕೆ ತಾವು 'ಆಗುವಂತಹವಲ್ಲ'. ಅವು ಸಾಮಾಜಿಕ ಉತ್ಪನ್ನಗಳು. ಸಾಮೂಹಿಕ ಹಿಂಸೆಯ ಪ್ರತಿಯೊಂದು ಪ್ರಕರಣದ ನಂತರವೂ ಅದರ ನೆನಪು ಮತ್ತು ದಾಖಲೆಗಳನ್ನು ಅಳಿಸಿಹಾಕಲಾಗುತ್ತದೆ. ದೇಹಗಳ ಮೇಲೆ ಪ್ರತ್ಯಕ್ಷವಾಗಿ ನಡೆಯುವ ಹಿಂಸೆ ಮನಸ್ಸುಗಳ ಮೇಲೆ ನಡೆಯುವ ಪರೋಕ್ಷ ಹಿಂಸೆಯಾಗಿ ಮುಂದುವರಿಯುತ್ತದೆ.

ಈಗ ಎಲ್ಲರೂ ಹಾಡಿಹೊಗಳುವ "ಕನ್ನಡ ಮನಸ್ಸು" ಎಂಬುದೊಂದು ಇದ್ದರೆ ಮತೀಯ ಹಿಂಸೆಯ ಮಟ್ಟಿಗೆ ಅದರದ್ದು 'ಮಹಾಮೌನ'ದ ನಿಲುವು. ಈ ಮೌನಕ್ಕೂ ತನ್ನದೇ ಒಂದು ವ್ಯಾಕರಣವಿದೆ. ಇತ್ತೀಚಿಗೆ ಉತ್ತರ ಪ್ರದೇಶದ ಮುಜಾಫರ್ ನಗರದಲ್ಲಿ ಮುಸ್ಲಿಮರ ಮೇಲೆ ನಡೆದ ಭಾರೀ ಹಿಂಸಾಚಾರದ ಬಗ್ಗೆ ನಮ್ಮ ಇಡೀ ವ್ಯವಸ್ಥೆ ವಹಿಸಿದ ಮೌನದ ಕುರಿತು ಚಿಂತಕ ಶಿವ್‌ವಿಶ್ವನಾಥನ್ ಹೀಗೆ ಹೇಳುತ್ತಾರೆ: 'ಕೋಮು ಗಲಭೆಯ ಪ್ರತಿಯೊಂದು ಪ್ರಕರಣವೂ ಅದರ ಹಿಂಸೆಯ ಮೂಲಕ ಕೆಡುಕಿನ ವ್ಯಾಕರಣವನ್ನು ವಿಸ್ತರಿಸುತ್ತದೆ. ಈ ವ್ಯಾಕರಣದಲ್ಲಿ ಕೆಲವು ಸೂಚಕ ಶಬ್ದಗಳಿವೆ; ಅವುಗಳಲ್ಲಿ ಮೊದಲನೆಯದ್ದು 'ನೆನಪು' – ಸರಕಾರಿ ನೆನಪು ಮತ್ತು ನಾಗರಿಕರ ನೆನಪು. ಸರಕಾರಿ ನೆನಪು ಅಥವಾ ಹಿಂಸೆ ಕುರಿತ ಸರಕಾರಿ ನಿರೂಪಣೆಗಳು ತಪ್ಪು ಮಾಹಿತಿಯನ್ನು ಮುಂದಾಗಿಯೇ ಘೋಷಿಸಿಕೊಳ್ಳುತ್ತವೆ. ಅವು ನಿರಾಶ್ರಿತರಿಗೆ ಪುನರ್‌ವಸತಿ ಕಲ್ಪಿಸಿ ಕೊಡುವುದಕ್ಕೆ ಮೊದಲೇ ನಿರಾಶ್ರಿತ ಶಿಬಿರಗಳನ್ನು ಮುಚ್ಚಿಬಿಡುತ್ತವೆ. ಅದಕ್ಕಿಂತ ಹೇಯವಾದ ಸಂಗತಿ ಎಂದರೆ ಜನ ಹಿಂಸೆಗೊಳಗಾಗಿ ನೊಂದಿದ್ದಾರೆ ಎಂಬ ವಾಸ್ತವವನ್ನು ಈ ನಿರೂಪಣೆಗಳು ನಿರಾಕರಿಸುತ್ತವೆ. ಹಿಂಸೆಯ ಬಗ್ಗೆ ರಾಜಕೀಯ ಪಕ್ಷಗಳ ಮೌನ, ಮಾಧ್ಯಮಗಳ ಮೌನ, ಬಹುಸಂಖ್ಯಾತ ಪ್ರಜೆಗಳ ಮೌನ, ಮಾನವ ಹಕ್ಕು ಕಾರ್ಯಕರ್ತರ ಮೌನ- ಎಲ್ಲವೂ ಒಟ್ಟಾಗಿ ಮುಜಾಫರ್‌ನಗರದ ಮಹಾಮೌನವಾಗಿದೆ. ಜೀವವನ್ನು ಕತ್ತರಿಸಿ ಸುಡುವ ಮೌನದಿಂದಾಗಿ ಭಾರತ ಈಗಲೂ ಒಂದು ಸಭ್ಯ ಸಮಾಜವಾಗಿ ಉಳಿದಿದೆಯೆ ಎಂಬ ಸಂದೇಹ ಮುಸ್ಲಿಮ್ ಪ್ರಜೆಗಳನ್ನು ಕಾಡುತ್ತದೆ. **(The silence of Muzaffarnagar, Shiv Vishwanathan, Asain Age, December 31st 2013)** ಸರಕಾರೀ ನಿರೂಪಣೆಗಳ ಬಗ್ಗೆ ಶಿವ್ ವಿಶ್ವನಾಥನ್ ಹೇಳುವ ಮಾತಿಗೆ ಪ್ರಾಯಶಃ ಹೈದರಾಬಾದ್ ಹಿಂಸಾಚಾರದ ಬಗ್ಗೆ ಪಂಡಿತ ಸುಂದರಲಾಲ್ ಸಮಿತಿ ನೀಡಿದ ವರದಿ ಮತ್ತು 1992-93 ರ ಮುಂಬಯಿ ಹಿಂಸೆ ಕುರಿತು ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಆಯೋಗದ ವರದಿ ಇವೆರಡು ಮಾತ್ರ ಅಪವಾದಗಳು. ಆ ಕಾರಣಕ್ಕೇನೆ, ಪ್ರಧಾನಿ ನೆಹರೂ ಅವರ ಮಂತ್ರಿಮಂಡಲದಲ್ಲಿ ಗೃಹಮಂತ್ರಿಯಾಗಿದ್ದ ಸರ್ದಾರ್ ವಲ್ಲಭ್‌ಭಾಯಿ ಪಟೇಲ್ ಸುಂದರಲಾಲ್ ಸಮಿತಿಯ ವರದಿಯನ್ನು ತಿರಸ್ಕರಿಸಿದ್ದು ಮಾತ್ರವಲ್ಲ, ಅದು ಯಾರ ಕಣ್ಣಿಗೂ ಬೀಳದಂತೆ ರಹಸ್ಯವಾಗಿ ಇರಿಸಿದರು. ಶ್ರೀಕೃಷ್ಣ ಆಯೋಗದ ವರದಿಯನ್ನು ಮಹಾರಾಷ್ಟ್ರದ ಆಗಿನ ಬಿಜೆಪಿ ಶಿವಸೇನೆಗಳ ಸಮ್ಮಿಶ್ರ ಸರಕಾರ ಹಾಗೂ ಕೇಂದ್ರದ ಆಗಿನ ಎನ್.ಡಿ.ಎ ಸರಕಾರಗಳು ತಿರಸ್ಕರಿಸಿದವು. ನಂತರ ಅಧಿಕಾರಕ್ಕೆ ಬಂದ ರಾಜ್ಯ ಮತ್ತು ಕೇಂದ್ರ ಕಾಂಗ್ರೆಸ್ ಸರಕಾರಗಳು ಆ ವರದಿಯನ್ನು ಅಲಕ್ಷಿಸಿ ಬಿಟ್ಟವು.

ಈ ಹಿನ್ನೆಲೆಯಲ್ಲಿ ಪತ್ರಿಕೆಯ ಹೈದರಾಬಾದ್ ವಿಶೇಷಾಂಕದಲ್ಲಿ ಆ ಪ್ರದೇಶದ ಮಹತ್ವದ ಒಂದು ವಿದ್ಯಮಾನದ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲದಿರುವುದಕ್ಕೆ ನನಗೆ ಖೇದವಾಗಿದೆ.

■ ಜೆ.ರಾಜಶೇಖರ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕಪ್ಪುದೇವಿ: ಕಾಳಿ ಬೆಳಕಿನಿಂದ ಕತ್ತಲೆಗೆ ನಡೆಸು

ಕಪ್ಪು, ಸಮಯ, ಸಾವು ಎಂಬ ಅರ್ಥಗಳನ್ನು ಕೊಡುವ ಕಾಲದಿಂದ ಕಾಳಿ ಉಂಟಾಗಿರುವುದಾದರೂ, ಕಾಳಿ ಎಂಬ ಸ್ತ್ರೀ ಪ್ರತಿಮೆಯಲ್ಲಿ ಆ ಮೂರೂ ವಿಷಯಗಳನ್ನು ಅರ್ಥೈಸಲಾಗುತ್ತದೆ. ಶಿವನು ಕಾಲ. ದೇವಿಯು ಕಾಳಿ.

ವರಾಹ ಪುರಾಣದಲ್ಲಿ ಅಂಧಕನೆಂಬ ರಾಕ್ಷಸನನ್ನು ಸಂಹರಿಸಲೆಂದು ಬ್ರಹ್ಮ, ಶಿವ ಮತ್ತು ವಿಷ್ಣುವು ಸಂಧಿಸಿ ತಮ್ಮ ದೃಷ್ಟಿಗಳನ್ನು ಸಮ್ಮಿಳಿತಗೊಳಿಸುತ್ತಾರೆ. ಕಪ್ಪು, ಬಿಳಿ ಮತ್ತು ಕೆಂಪು ಬಣ್ಣಗಳ ಮೂರು ಭಾಗಗಳುಳ್ಳ ದೇವಿಯು ಹುಟ್ಟುತ್ತಾಳೆ. ಆ ಮೂರು ಬಣ್ಣಗಳು ತ್ರಿಕಾಲಗಳು: ಭೂತ, ವರ್ತಮಾನ ಮತ್ತು ಭವಿಷ್ಯ. ಅವರೇ ಪಾರ್ವತಿ, ಸರಸ್ವತಿ ಮತ್ತು ಲಕ್ಷ್ಮಿಯರಾಗಿ ತ್ರಿಮೂರ್ತಿಗಳನ್ನು ವರಿಸುತ್ತಾರೆ ಎಂದು ಕಥೆ ಬೆಳೆಯುತ್ತದೆ. ಪಾರ್ವತಿಯೇ ಕಪ್ಪು, ಭೂತ (ಕಾಲ) ಮತ್ತು ಅವಳು ಶಿವನಿಗೆ ಎಂದು ವರ್ಣಿಸಲ್ಪಡುತ್ತಾಳೆ.

ಸಮಯ ಮತ್ತು ಸಾವು ಇವುಗಳ ಜೊತೆಗೆ ಭೂತಕಾಲವೂ ಕಪ್ಪಿನ ವರ್ಣದ ಸಂಕೇತದೊಳಗೆ ವಿಷಯವಾಗುತ್ತದೆ. ಇದರ ಹೊರತಾಗಿ ಕಪ್ಪು ಬಣ್ಣದ ಜೊತೆಗೆ ತಳುಕಿ ಹಾಕಿಕೊಳ್ಳುವ ಮತ್ತೊಂದು ವಿಷಯವೆಂದರೆ 'ಅಸ್ತಿತ್ವ'. ಇಲ್ಲೊಂದು ಕುತೂಹಲಕರವಾದ ಮತ್ತು ಆಸಕ್ತಿದಾಯಕವಾದ ವಿಷಯ ಗೋಚರಿಸುತ್ತದೆ. ಅಸ್ತಿತ್ವವನ್ನು ಕತ್ತಲೆಯೆಂದೂ ಮತ್ತು ಕಪ್ಪೆಂದೂ ನೋಡುವುದು. ಅನೇಕ ನಿಗೂಢಗಳನ್ನು, ಸ್ವಾರಸ್ಯಗಳನ್ನು ಹುದುಗಿಕೊಂಡಿರುವ ಅಸ್ತಿತ್ವದ ಕತ್ತಲೆಯನ್ನು ಸತ್ಯವೆಂದು ಕರೆಯುವುದು. ನಾವು ಸಾಮಾನ್ಯವಾಗಿ ಕರೆಯಲಾಗುವ ಬೆಳಕನ್ನು ಸತ್ಯವೆಂದು ಕರೆಯುವುದು ಇಲ್ಲಿ ಸುಳ್ಳಾಗುವುದು. ಬೆಳಕು ಅಶಾಶ್ವತವೂ, ಬರಿಯ ಬಂದುಹೋಗುವುದಷ್ಟೇ ಆಗಿದ್ದು, ಕತ್ತಲೆಯೇ ಶಾಶ್ವತವೂ ಮತ್ತು ಸತ್ಯವೂ ಆದ ಹಿರಿಯ ತತ್ವವಾಗುತ್ತದೆ. ಕತ್ತಲೆಯಲ್ಲಿಯೇ ನಿಗೂಢಗಳೂ ಮತ್ತು ಸ್ವಾರಸ್ಯಗಳೂ ಇದ್ದು, ಅದನ್ನು ಬೇಧಿಸುವುದೇ ವಿದ್ಯೆಯೂ ಮತ್ತು ಕಲೆಯೂ ಆಗಿರುತ್ತದೆ. ಇಂಥಾ ಅಸ್ತಿತ್ವವನ್ನು, ಶಾಶ್ವತದ ಇರುವಿಕೆಯ ಕತ್ತಲೆಯ ಬಣ್ಣದಲ್ಲಿ ಪ್ರತಿಮಾರೂಪದಲ್ಲಿರುವವಳು ಕಾಳಿ.

ಇಂಥಾ ಅದ್ಭುತವಾದ, ಚಮತ್ಕಾರಿಕವಾದ ಮತ್ತು ನಿಗೂಢವಾದ ಕತ್ತಲೆಯೊಳಗಿನ ಒಗಟುಗಳನ್ನು, ಶಕ್ತಿಗಳನ್ನು ಕಂಡುಕೊಳ್ಳುತ್ತಾ ಹೋಗುವ ಮಾರ್ಗದಲ್ಲಿ ಅನೇಕ ವಿಭಾಗಗಳೂ ಕವಲೊಡೆಯುತ್ತಾ ಹೋಗುತ್ತದೆ. ಆ ಕವಲು ಗಳೆಲ್ಲವೂ ಮತ್ತೆ ವಿವಿಧ ಕಾಳಿಗಳಾಗಿ ಪ್ರತಿಮಾರೂಪಗಳಲ್ಲಿ ನಿಲ್ಲುತ್ತಾರೆ. ಮಾಟ, ಮಂತ್ರ, ಸಿದ್ಧಿ, ನಿಗೂಢತೆಯ ದರ್ಶನ, ಅತೀಂದ್ರಿಯ ಸಿದ್ಧಿಗಳು, ಸುಪ್ತ ಹಾಗೂ ಗುಪ್ತ ಮನೋ ಚೈತನ್ಯದ ವಿಷಯಗಳು, ಜೀವಾಂತರ್ಯ ಮತ್ತು ವಿಶ್ವಾಂತರ್ಯದ ದರ್ಶನಗಳು, ಅಲೌಕಿಕ ಮತ್ತು ಅತಿಮಾನುಷ ಅನುಭವಗಳು; ಇವೆಲ್ಲವೂ ಕಾಳಿಯ ಆರಾಧನೆ ಅಥವಾ ಸಾಕ್ಷಾತ್ಕಾರದಲ್ಲಿನ ತೆಕ್ಕೆಯಲ್ಲಿಯೇ ಬರುತ್ತವೆ.

ಈ ಕಪ್ಪು ಅಸ್ತಿತ್ವದ ವಿಷಯಕ್ಕೆ ಬಂದಾಗ ಅಸತೋಮ ಸದ್ಗಮಯ ಎನ್ನುವ ಅಸತ್ತಿನಿಂದ ಸತ್ಯಕ್ಕೆ ನಡೆಸುವ ಮಾತು ತಮಸೋಮ ಜ್ಯೋತಿರ್ಗಮಯ, ಕತ್ತಲೆಯಿಂದ ಬೆಳಕಿಗೆ ನಡೆಸು ಎಂಬುವಲ್ಲಿ ಸಡಿಲವಾಗುತ್ತದೆ. ಜ್ಯೋತಿ ಅಥವಾ ಬೆಳಕೆಂಬುದು ಪೊಳ್ಳಾಗಿದ್ದು, ಕತ್ತಲೆಯೇ ಅಗಾಧವಾಗಿರುವುದಾಗಿರುತ್ತದೆ. ಅದೇ ಸತ್ಯವೂ ಮತ್ತು ಅನಂತವೂ ಆಗಿರುವುದು. ಅದು ಅತ್ಯಂತ ರಹಸ್ಯಮಯವೂ, ಅನಿಶ್ಚಿತತೆಯೊಳಗೆ ಕೊಂಡೊಯ್ಯುವಂತಹದೂ ಆಗಿರುವುದರಿಂದ ಬೆಳಕೆಂಬ ಜ್ಞಾನಕ್ಕೆ ಮಾರುಹೋಗುವುದು ಸುಲಭವೂ, ಪಾಂಡಿತ್ಯವೂ ಆಗಿದ್ದು, ಬೆಳಕು ಅಥವಾ ಜ್ಯೋತಿಯು ಜ್ಞಾನದ ಸಂಕೇತವಾಗುತ್ತದೆ. ಆದರೆ ಜ್ಞಾನವು ಈ ಅಸ್ತಿತ್ವದ ದೃಗ್ದರ್ಶನದಲ್ಲಿ ವ್ಯರ್ಥವೂ, ಸತ್ಯವೆಂಬ ಕತ್ತಲೆಯ ಆಳದಲ್ಲಿ ಅತ್ಯಂತ ಜೊಳ್ಳೂ ಆಗಿರುವುದರಿಂದ ಕಾಲಿಯ ಸಾಕ್ಷಾತ್ಕಾರಕ್ಕೆ ಬಹುದೂರವಾಗುತ್ತದೆ.

ಸಮಯ ಮತ್ತು ಸಾವು ಎಂಬುದೆರಡೂ ಅಸ್ತಿತ್ವದಲ್ಲಿ ಅನಂತವಾಗಿದ್ದು, ಕತ್ತಲೆಯು ಪ್ರಾರಂಭಕ್ಕೆ ಭಯಾನಕವೂ, ಅನಿಶ್ಚಿತತೆಯೂ ಆಗಿದ್ದು, ಮುಂದುವರಿದಂತೆ ಪರಮ ಶಾಂತಿಯೂ, ಅವರ್ಣನೀಯವೂ ಆಗಿದ್ದು ಮತ್ತೆ ಅದೇ ಕಾಳಿಯ ರೂಪಕದಲ್ಲಿ ಗೋಚರವಾಗುವ ವಸ್ತುವಾಗಿದೆ.

ಕಾಳಿಯ ಉಪಾಸಕರು ಬೆಳಕಲ್ಲಿ ಸಹಜವಾಗಿ, ಸುಲಭವಾಗಿ ಕಾಣುವಂತಹುದನ್ನೇ ನೋಡುವವರಲ್ಲ. ಕತ್ತಲೆಯನ್ನೂ, ಅದರೊಳಗಿನ ಅದ್ಭುತಗಳನ್ನೂ, ಗಾಂಭೀರ್ಯವನ್ನೂ, ಸೌಂದರ್ಯವನ್ನೂ, ಶಾಂತಿ ಮತ್ತು ಶಕ್ತಿಯನ್ನೂ ನೋಡುವವರು. ಬೆಳಕಿನಲ್ಲಿ ಅಥವಾ ಬೆಳಕನ್ನು ನೋಡುವವರು ಪಂಡಿತರು ಅಥವಾ ಜ್ಞಾನಿಗಳು. ಆದರೆ ಕತ್ತಲಿನ ಅಂತರ್ಯವನ್ನು ದರ್ಶಿಸುವವರು ದಾರ್ಶನಿಕರೂ, ಯೋಗಿಗಳೂ, ಸಿದ್ಧರೂ ಆಗಿರುವಂತಹ ಸಾಧಕರಾಗಿರುತ್ತಾರೆ. ಅವರಲ್ಲಿ ಭೇದಗಳಿಲ್ಲ, ಪಕ್ಷಪಾತಗಳಿರುವುದಿಲ್ಲ, ಅದೇನಿದ್ದರೂ ಜ್ಞಾನ ಅಥವಾ ಪಾಂಡಿತ್ಯದಲ್ಲಷ್ಟೇ. ಕತ್ತಲೆ ಅಥವಾ ಕಪ್ಪು ಎಂಬುದು ಸುಂದರ, ಅಲೌಕಿಕ, ಅದ್ಭುತ, ಚಮತ್ಕಾರಿಕ ಮತ್ತು ಗಂಭೀರ. ದೇವಿಯಾಗಿ ಸಂಕೇತಿಸುವ ಇದರ ಪ್ರತಿಮಾ ರೂಪವೂ ಆದ ಕಾಳಿಯೂ ಅಷ್ಟೇ.

ಮಹಾನಿರ್ವಾಣ ತಂತ್ರವು ಹೇಳುವಂತೆ, ಹೇಗೆ ಎಲ್ಲಾ ಬಣ್ಣಗಳೂ ಕಪ್ಪು ಬಣ್ಣದಲ್ಲಿ ವಿಲೀನವಾಗಿಬಿಡುವವೋ ಹಾಗೆಯೇ ಎಲ್ಲಾ ನಾಮಗಳೂ ಮತ್ತು ರೂಪಗಳೂ ಕಾಳಿಯಲ್ಲಿ ಐಕ್ಯವಾಗಿಬಿಡುವವು.


ಕಾಳಿಯ ಮೂಲಗಳು

ಕೆಲವು ಪುರಾಣಗಳಲ್ಲಿ ಕಾಳಿಯನ್ನು ಕೆಲವೊಮ್ಮೆ ಲೌಕಿಕ ಜಗತ್ತಿನಲ್ಲಿ ಗೌರ-ವರ್ಣವನ್ನು ಸುಂದರವೆಂದು ನೋಡುವ ಸಾಮಾನ್ಯ ದೃಷ್ಟಿಯಂತೆ ಕಪ್ಪು ಬಣ್ಣಗಳನ್ನು ನೋಡುವಷ್ಟು ಸಾಮಾನ್ಯವಾಗಿ ಪರಿಗಣಿಸಿದೆ. ಹಾಗಾಗಿ ಶಿವನು ಕಾಳಿಯನ್ನು ಕರಿಪಿ ಅಥವಾ ಕರಿ ಹೆಣ್ಣು ಎಂದು ಹೀಯಾಳಿಸುವುದು, ಅವಳು ಅದಕ್ಕೆ ಬೇಸರಿಸಿಕೊಳ್ಳುವುದು, ತಪಸ್ಸು ಮಾಡಿ ಗೌರವರ್ಣವನ್ನು ಪಡೆದು ಗೌರಿಯಾಗುವುದು ಇತ್ಯಾದಿ ಲೌಕಿಕ ಕಥೆಗಳನ್ನು ಹೇಳುತ್ತವೆ. ಬಹಳಷ್ಟು ಪುರಾಣಗಳು ಅಷ್ಟೇನೂ ಒಳದೃಷ್ಟಿಯನ್ನು ಕೊಡುವಂತಹ ರೂಪಕಗಳೇನಲ್ಲ, ಕೆಲವಂತೂ ತೀರಾ ಪೊಳ್ಳುಪೊಳ್ಳಾದ, ಕನಿಷ್ಠ ದರ್ಜೆಯ ... ಗ್ರಹಪೀಡಿತ ಹೊಸೆದ ಕಥೆಗಳನ್ನು ಹೇಳುತ್ತವೆ. ಆದರೆ ಅವು ಆ ... ಅಭಿರುಚಿ, ಸಂಸ್ಕೃತಿ, ಧೋರಣೆ ಮತ್ತು ನಿಲುವುಗಳನ್ನು ಬಿಂಬಿಸುತ್ತವೆ ... ಹೊರತು ತೀರಾ ಗಂಭೀರವಾದ, ಆಧ್ಯಾತ್ಮಕ್ಕೆ ಸಂಬಂಧಿಸಿದ ವಿಷಯಗಳನ್ನೇನೂ ಅನಾವರಣ ಮಾಡುವುದಿಲ್ಲ. ಆದರೆ, ಸುಪ್ತ ಶಕ್ತಿಯನ್ನು ಧಾರಣೆ ಮಾಡಿಕೊಳ್ಳಲು ನಡೆಸುವ ಗುಪ್ತ ಆರಾಧನೆಗಳ ವಿಷಯಗಳಲ್ಲಿ ಗಮನಿಸಲು ಹೋದರೆ ಕಾಳಿಯ ಎಂಬ ಪದವು ಅತ್ಯಂತ ಗಂಭೀರವೂ, ಅಲೌಕಿಕವೂ ಆಗಿ ಪ್ರಯೋಗವಾಗಿವೆ. ತಂತ್ರ ಸಾಧನೆಗಳಲ್ಲಿ, ಶಕ್ತಿಯನ್ನು ಆರಾಧಿಸುವ ಮತ್ತು ಸಾಕ್ಷಾತ್ಕರಿಸಿಕೊಳ್ಳುವ ಶಾಕ್ತ ಪರಂಪರೆಗಳಲ್ಲಿ ಕಾಳಿಯೆಂಬ ಕರಿಪಿ ಅತ್ಯಂತ ಗಂಭೀರ ಅವಗಾಹನೆಗೆ ಒಳಗಾಗುತ್ತಾಳೆ.

ಕ್ರಿಸ್ತಪೂರ್ವ 1000 ಅಥವಾ ಅದಕ್ಕೂ ಮುನ್ನ ರಚಿತವಾಗಿರಬಹುದಾದುದೆನ್ನಲಾದ ಅಥರ್ವವೇದದಲ್ಲಿ, ಕಟಕ ಗೃಹ್ಯಸೂತ್ರ(19.7)ದಲ್ಲಿ ಕಾಲಿ ಎಂಬ ಹೆಸರನ್ನು ಉಲ್ಲೇಖಿಸಲಾಗಿದೆ. ಮಾಂಡುಕ್ಯೋಪನಿಷತ್ತಿನಲ್ಲಿ (2:4) ಅಗ್ನಿಯ ಏಳು ನಾಲಿಗೆಗಳಲ್ಲಿ ಒಂದಕ್ಕೆ ಕಾಳಿ ಎಂದೂ ಕರೆಯುತ್ತಾರೆ. ಇಲ್ಲಿ ದೇವತೆಯಂತೆ ಕಾಳಿಯ ಶಬ್ದವನ್ನು ಪ್ರಯೋಗಿಸಿರದೇ ಅದೊಂದು ತತ್ವವಾಗಿ ಅಥವಾ ಅಗ್ನಿಯ ನಾಲಗೆಯನ್ನು ಕಪ್ಪು ಎಂದು ಕರೆದಿರುವುದು ನಮ್ಮನ್ನು ರಹಸ್ಯ ದರ್ಶನಕ್ಕೆ ಕರೆದೊಯ್ಯುತ್ತದೆ.

ತಂತ್ರಯೋಗದಲ್ಲಿ ಕಾಳಿಯ ಸ್ಥಾನ ಬಹು ಮಹತ್ವವಾಗಿರುವುದು. ನಿರ್ವಾಣತಂತ್ರದಲ್ಲಿ ಸಮುದ್ರದಲ್ಲಿ ನೊರೆಗಳು ಎದ್ದಂತೆ ಕಾಳಿಯಿಂದಲೇ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಆವಿರ್ಭವಿಸುತ್ತಾರೆಂದು ಹೇಳಲಾಗಿದೆ. ಸಮುದ್ರದಲ್ಲಿ ನೊರೆಗಳು ಮೇಲೆದ್ದು, ಮರೆಯಾಗಿ ಹೋಗಿ ಮತ್ತೆ ಮೂಡುವಂತೆ ಈ ತ್ರಿಮೂರ್ತಿಗಳೂ ಕೂಡ ಮೂಡುತ್ತಲಿದ್ದು, ಮೂಲ ಸಮುದ್ರವು ಯಥಾ





ಸ್ಥಿತಿಯಲ್ಲಿಯೇ ಇರುವಂತೆ ದೇವಿಯು ಇರುವಳೆಂದು ಹೇಳುತ್ತದೆ.

ನಿರುತ್ತರ ತಂತ್ರ ಮತ್ತು ಪಿಚ್ಚಲ ತಂತ್ರಗಳ ಪ್ರಕಾರ ಕಾಳಿಯ ಮಂತ್ರಗಳು ಅತಿ ಶ್ರೇಷ್ಠವೂ ಮತ್ತು ಶಕ್ತಿಶಾಲಿಯಾದವುಗಳು ಎಂದು ಘೋಷಿಸುವುದಲ್ಲದೇ ಯೋಗಿನಿ ತಂತ್ರ, ಕಾಮಾಕ್ಯ ತಂತ್ರ ಮತ್ತು ನಿರುತ್ತರ ತಂತ್ರಗಳು ಹೇಳುವಂತೆ ಕಾಳಿ ವಿದ್ಯೆಗಳು ಸ್ವಯಂ ಮಹಾದೇವಿಯಿಂದಲೇ ರೂಪುಗೊಂಡಿರುವವು. ಮಹಾನಿರ್ವಾಣ ತಂತ್ರದ ಪ್ರಕಾರ ಶಕ್ತಿಯ ಸ್ವರೂಪವೇ ಕಾಳಿಯಾಗಿದ್ದು ಸಾಕ್ಷಾತ್ ಕಾಲ ಭೈರವನಾದ ರುದ್ರನೇ ಅವಳನ್ನು ನಾನಾ ರೀತಿಯಲ್ಲಿ ಪ್ರಾರ್ಥಿಸುತ್ತಾನೆ.

ಮೂರ್ತಿಯನ್ನೂ ಮತ್ತು ಅಮೂರ್ತವಾಗಿರುವ ಕಾಳಿಯನ್ನೂ ಆರಾಧನೆ ಮಾಡುವ ಕಾಳಿಯ ಕುಲದವರಿದ್ದಾರೆ. ಭದ್ರಕಾಳಿ ಎಂಬ ಸ್ವರೂಪವು ಸೌಮ್ಯದ್ದಾದರೆ, ಮಹಾಕಾಲಿಯು ರೌದ್ರಳಾಗಿದ್ದಾಳೆ.

ಆದರೆ ಕಾಳಿ ಎಂದಕೂಡಲೇ ಸಾಮಾನ್ಯವಾಗಿ ಗೋಚರವಾಗುವ ವಿಷಯವೆಂದರೆ ರಣರಂಗದಲ್ಲಿ ಶತ್ರುಗಳನ್ನು ಕೊಲ್ಲುತ್ತಾ ನಾಲಿಗೆಯನ್ನು ಚಾಚಿಕೊಂಡು, ರಕ್ತವನ್ನು ಕುಡಿಯುತ್ತಾ ನಗ್ನ ದೇಹದಲ್ಲಿ ಅರ್ಭಟಿಸುತ್ತಾ ಹೋಗುವ ಹೆಣ್ಣಿನ ಚಿತ್ರವನ್ನು ಕಾಣುತ್ತೇವೆ. ಮೂರು ಕಣ್ಣುಗಳು, ಕೆದರಿರುವ ಕೂದಲು, ವ್ಯಗ್ರ ಮುಖಭಾವ, ಹೊರಕ್ಕೆ ಚಾಚಿರುವ ನಾಲಿಗೆ, ಜೋತು ಬಿದ್ದಿರುವ ಮೊಲೆಗಳು, ವಿಕಾರವಾದ ಮುಖವು, ರುಂಡಗಳ ಮಾಲೆಯು, ಕಲಾವಿದನು ಸೊಂಟದ ಕೆಳಭಾಗವನ್ನು ಮರೆಮಾಚಲೆಂದು ಬರೆದಿರುವ ಕೈಗಳನ್ನು ಪೋಣಿಸಿರುವ ಮರೆಯು, ಕೈಯಲ್ಲಿ ರಾಕ್ಷಸನ ಕತ್ತರಿಸಿದ ರುಂಡವೊಂದು ಅಥವಾ ರಕ್ತಪಾತ್ರೆ, ಮತ್ತೊಂದು ಕೈಯಲ್ಲಿ ರಕ್ತಸಿಕ್ತ ಖಡ್ಗ ಹಾಗೂ ಸಾಮಾನ್ಯವಾಗಿ ಶಿವನ ಎದೆಯ ಮೇಲೆ ಕಾಲು. ಈ ಚಿತ್ರದ ಕ್ಷೇತ್ರ ರಣರಂಗ. ಅಲ್ಲೆಲ್ಲಾ ಚದುರಿ ಬಿದ್ದಿರುವ ಹೆಣಗಳು ಮತ್ತು ಚಿತೆಗಳು. ಪ್ರಕೃತಿಯಂತೆ ಅವಳು ಪಾರದರ್ಶಕಳು, ನೆರಳು ಅದೇ ಸಂಪೂರ್ಣ ನಗ್ನವಾಗಿರುವಂತೆ ಚಿತ್ರಿಸುವುದು. ಭ್ರಮೆಯ ಆವರಣಗಳಾಗಲಿ, ಮಾಯೆಯ ಮುಸುಕಾಗಲಿ ಅವಳನ್ನು ಅಪಾರದರ್ಶಕಗೊಳಿಸಲಾಗದು. ಅವಳ ಮೂರು ಕಣ್ಣುಗಳು ತ್ರಿಕಾಲಗಳು. ಹಣೆಯ ಮೇಲಿರುವ ಕಣ್ಣು ಭವಿಷ್ಯವಾದರೆ, ಇನ್ನುಳಿದೆರಡು ಕಣ್ಣುಗಳು ಭೂತ ಮತ್ತು ವರ್ತಮಾನ.

ಈ ಕಾಳಿಯ ಚಿತ್ರಣವು ಮರಣವನ್ನು, ನಾಶವನ್ನು ಮತ್ತು ಸಾವೇ ಮೊದಲಾದ ವಾಸ್ತವವಾಗಿರುವ ವಿಷಯಗಳನ್ನು ನುಂಗು ಹಾಕುತ್ತಿರುವ ಪ್ರಳಯಾಂತಕಿಯಾಗಿಯೂ ಮೂಡುತ್ತದೆ. ಹಾಗಾಗಿಯೇ ಪಂಚತತ್ವ ಕ್ರಿಯೆಯಲ್ಲಿ ಸಾಧಕನು ಕಾಳಿಯನ್ನು ಒಲಿಸಿಕೊಳ್ಳಲು ಮತ್ತು ಅದೇ ಕಾಳಿಯನ್ನು ಮುಕ್ತಿಗೆ ಸಾಧನವನ್ನಾಗಿ ಮಾಡಿಕೊಳ್ಳಲು ಸಾಧನೆಗಳನ್ನು ಮಾಡುತ್ತಾನೆ. ಕರ್ಪೂರಾದಿ ಸ್ತೋತ್ರವು ಕಾಳಿಯನ್ನು ಭಯಂಕರಕ್ಕಿಂತಲೂ ಮಿಗಿಲಾದ ಚಿತ್ರವನ್ನು ನೀಡುತ್ತಾ, ಪಂಚತತ್ವ ಸಾಧನದಲ್ಲಿ ಹೇಳುವಂತೆ ಸ್ಮಶಾನ ಸಾಧನವನ್ನು ಸೂಚಿಸುತ್ತದೆ.

ಐದು ಅಥವಾ ಆರನೆಯ ಶತಮಾನಗಳ ನಡುವಲ್ಲಿ ರಚಿತವಾಗಿರಬಹುದಾದ ದೇವೀ ಮಹಾತ್ಮೆಯಲ್ಲಿ ದುರ್ಗೆಯ ಕೋಪದಿಂದ ಗಂಟಿಕ್ಕಿದ ಹುಬ್ಬುಗಳ ಮಧ್ಯೆಯಿಂದ ಕಾಳಿಯು ದೈತ್ಯರ ನಾಶಕ್ಕೆ ಹುಟ್ಟಿದಳು ಎನ್ನಲಾಗಿದೆ.

ಘೋರ ರೂಪದ ಮಹಾಕಾಳಿ ಮತ್ತು ಸೌಮ್ಯ ರೂಪದ ಭದ್ರಕಾಲಿಯಿರುವಂತೆ ಆ ಕಾಳಿಕಾದೇವಿಯ ವಿವಿಧ ರೂಪಗಳೆಂದರೆ, ಶ್ಯಾಮಾ, ಆದ್ಯ ಮಾ, ತಾರಾ ಮಾ, ದಕ್ಷಿಣ ಕಾಲಿಕಾ, ಛಿನ್ನಮಸ್ತಾ ಅಥವಾ ಕೌಶಿಕಾ ಮತ್ತು ಚಾಮುಂಡಿ ಸಾಮಾನ್ಯವಾಗಿ ಪದೇ ಪದೇ ಉಲ್ಲೇಖಿತವಾಗುವಂತಹ ಸ್ವರೂಪಗಳು. ದೇವಿಯ ಆದಿಶಕ್ತಿ ಸ್ವರೂಪವು ಸ್ತ್ರೀತತ್ವ, ಸೃಷ್ಟಿ ಮತ್ತು ಫಲವತ್ತತೆಗೆ ಸಂಕೇತವಾಗುವಂತೆ ಈ ಕಾಳಿಗಳು ಬರಿಯ ರೌದ್ರ, ಮರಣ, ಕಾಲ ಮತ್ತು ಇತರ ಗಂಭೀರ ರಹಸ್ಯಗಳಿಗೆ ಮಾತ್ರ ಪ್ರತಿಮೆಗಳಾಗಿರುವುದಲ್ಲ, ಲೈಂಗಿಕತೆಗೂ ಮತ್ತು ಹಿಂಸೆಗೂ ಸಂಕೇತವಾಗುತ್ತಾರೆ.

ಪೌರಾಣಿಕ ಕಥಾನಕದಲ್ಲಿ ತನ್ನ ರಕ್ತದ ಹನಿಯೊಂದು ನೆಲಕ್ಕೆ ಬಿದ್ದರೆ ತನ್ನಂತೇ ಸಾವಿರಾರು ರಾಕ್ಷಸರು ಹುಟ್ಟುವ ಸಾಮರ್ಥ್ಯವಿದ್ದವನು ರಕ್ತಬೀಜಾಸುರ. ಅಂಥಾ ರಕ್ತಬೀಜಾಸುರನ ಕೊಲ್ಲುವಾಗ ಪಾರ್ವತಿ ಅಥವಾ ದುರ್ಗೆಯೇ ಕಾಳಿಯ ಅವತಾರವನ್ನು ತಾಳಿ, ತನ್ನ ನಾಲಿಗೆಯಿಂದ ಅವನೆಲ್ಲಾ ರಕ್ತವನ್ನೂ ಬಿಡದೇ ನೆಕ್ಕಿ ಅವನನ್ನು ಶಕ್ತಿಹೀನನನ್ನಾಗಿ ಮಾಡಿ ಕೊಲ್ಲುವ ಕಾಳಿಯ ಹುಟ್ಟು ಒಂದಾದರೆ, ದಾರುಕನೆಂಬ ದೈತ್ಯನನ್ನು ಕೊಲ್ಲಲು ಪಾರ್ವತಿಯು ಶಿವನ ಗಂಟಲಿಂದ ಧುಮುಕಿ ಕಾಳಿಯಾಗಿ ಬಂದಳು ಎನ್ನುತ್ತದೆ ಮತ್ತೊಂದು ಕಥೆ. ಸಮುದ್ರ ಮಥನದ ಸಮಯದಲ್ಲಿ ಶಿವನು ಹಾಲಾಹಲವನ್ನು ಕುಡಿದಾದ ಆ ವಿಷವನ್ನು ಗಂಟಲಿಂದೀಚೆಗೆ ದೇಹಕ್ಕಿಳಿಯದಂತೆ ಪಾರ್ವತಿಯು ನೋಡಿಕೊಂಡಿದ್ದಳು. ಅದೇ ವಿಷದಿಂದ ಕಾಳಿಯಾಗಿ ರೂಪ ಧರಿಸಿ ದಾರುಕನನ್ನು ಕೊಲ್ಲಲೆಂದು ಹುಟ್ಟುವ ಮತ್ತೊಂದು ಕಥೆ.

ಕಾಳಿಯ ಇಂಥಾ ಭೀಭತ್ಸ ಮತ್ತು ಭಯಂಕರವಾದ ಕಥೆಗಳ ನಡುವೆ ಮತ್ತೊಂದು ಕಥೆಯೂ ರೂಢಿಯಲ್ಲಿದೆ. ಇದು ಕಾಳಿಯ ಹುಟ್ಟಿನ ಬಗ್ಗೆಯಲ್ಲದಿದ್ದರೂ ಬ್ರಾಹ್ಮಣನನ್ನು ರಕ್ಷಿಸುವ ಕಾಳಿಯ ಕಥೆ. ಕಾಳಿಯನ್ನು ಆರಾಧಿಸುವ ಒಂದು ಕಳ್ಳರ ಗುಂಪು ದೇವಿಗೆ ನರಬಲಿ ಕೊಡಲೆಂದು ಒಬ್ಬ ಮನುಷ್ಯನನ್ನು ಬಂಧಿಸುವರು. ಅವರೋ ಬುದ್ಧಿಹೀನರಾಗಿ ಆ ಸಲ ಹಿಡಿದಿದ್ದು ಒಬ್ಬ ಮಂತ್ರಗಳನ್ನು ಬಲ್ಲ ಬ್ರಾಹ್ಮಣನನ್ನು. ಆ ಬ್ರಾಹ್ಮಣನನ್ನು ಬಂಧಿಸಿ ದೇವಸ್ಥಾನಕ್ಕೆ ಕರೆದೊಯ್ದಾಗ, ಬ್ರಾಹ್ಮಣನು ಮಂತ್ರಗಳನ್ನು ಉಚ್ಚರಿಸಿದನೋ ಅಥವಾ ಮಂತ್ರಪೂರಿತ ಬ್ರಾಹ್ಮಣನನ್ನು ನೋಡಿಯೇ ಕಾಳಿಕಾ ವಿಗ್ರಹಕ್ಕೆ ಜೀವ ಬಂದು, ಕಳ್ಳರ ರುಂಡಗಳನ್ನು ಚೆಂಡಾಡುವಳು. ಅಕ್ಷರಶಃ ಆ ಕತ್ತರಿಸಿದ ರುಂಡಗಳೊಂದಿಗೆ ಆಟವಾಡುವಳು. ಹಾಗೆ ಅವಳು ಆಡುತ್ತಿರುವಾಗ ಬ್ರಾಹ್ಮಣನು ಅಲ್ಲಿಂದ ತಪ್ಪಿಸಿಕೊಂಡು ಹೋದನು.


ಈ ಕಥೆಯ ನೀತಿ: ಬ್ರಾಹ್ಮಣರು ಮಹಾಮಹಿಮರು, ದೇವಮುಖದಿಂದ ಹುಟ್ಟಿರುವಂತಹ ಅವರಿಗೆ ತೊಂದರೆ ಕೊಡಲು ಯತ್ನಿಸಿದರೆ, ಅವರ ಜೀವಕ್ಕೆ ಸಂಚಕಾರ ತಂದರೆ ನಿಮ್ಮ ಜೀವವೇ ಹೊರಟುಹೋಗುವುದು. ನೀವು ಅದೆಷ್ಟೋ ಕಾಲದಿಂದ ಆರಾಧಿಸಿಕೊಂಡು ಬರುವಂತಹ ದೇವರೂ ಕೂಡ ಅಪರಿಚಿತ ಮತ್ತು ಹೊಸ ಬ್ರಾಹ್ಮಣನ ಪರವಾಗಿಯೇ ನಿಂತು ಭಯಂಕರವಾಗಿ ನಿಮ್ಮ ಸರ್ವನಾಶ ಮಾಡುವುದು. ಎಚ್ಚರಿಕೆ!!!

ಇಂಥಾ ಕಥೆಯ ಸೃಷ್ಟಿಯು ಮನುವಾದಿಯೊಬ್ಬನಿಗೆ ಮಾತ್ರ ಸಾಧ್ಯವೇ ಹೊರತು, ಇನ್ನಾರಿಗೂ ಯೋಗ್ಯತೆಯಿಲ್ಲ.

ಡಿ.ಡಿ.ಕೋಸಾಂಬಿ ಮತ್ತು ಅಂಬೇಡ್ಕರ್‌ರವರು ಕೂಡ ಕಾಳಿಯ ಕುರಿತು ಅನೇಕ ಮಹತ್ವದ ವಿಚಾರಗಳನ್ನು ಮಾಡಿದ್ದಾರೆ. ಶಿವನ ಎದೆಯನ್ನು ತುಳಿಯುವ ಕಾಳಿಯ ಕಥೆಯು ಮತ್ತಷ್ಟು ರೋಚಕ. ಅವುಗಳನ್ನು ಮುಂದಿನ ವಾರ ನೋಡೋಣ. ■

ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಒಂದಾಗಬೇಕು ಏಕೆ

ವಿಶೇಷ ಲೇಖನ



ಭಾರತವು ಹಿಂದೆಂದಿಗಿಂತಲೂ ಹೆಚ್ಚಿನ ಸಂಕಷ್ಟದ ಸ್ಥಿತಿಯನ್ನು ಇಂದು ಎದುರಿಸುತ್ತಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಎರಡು ನೂರು ವರ್ಷಗಳವರೆಗೆ ನೇರವಾಗಿ ಭಾರತವನ್ನು ಆಳುತ್ತಾ ಭಾರತದ ಸಂಪತ್ತನ್ನು ದೋಚಿ ಇಂಗ್ಲೆಂಡ್‌ಗೆ ಸಾಗಿಸಿದರು. ಈ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಎಲ್ಲ ಜಾತಿ, ಧರ್ಮ ಮತ್ತು ವರ್ಗಗಳ ಜನ ಒಂದಾಗಿ ಹೋರಾಡುತ್ತಾ ರಾಜಕೀಯ ಸ್ವಾತಂತ್ರ್ಯ ಗಳಿಸಿದರು. ಭಾರತದ ಜನ ಮೊದಲ ಬಾರಿಗೆ ಸಾಮೂಹಿಕವಾಗಿ ತಮ್ಮ ಜಾತಿ ಮತ್ತು ಧರ್ಮಗಳನ್ನು ಮೀರಿ ಒಂದು ಉದ್ದೇಶಕ್ಕಾಗಿ ಒಂದಾದದ್ದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಾತ್ರ. ಅದಕ್ಕೂ ಹಿಂದೆ ಈ ದೇಶದಲ್ಲಿ ಸಾಕಷ್ಟು ಜಾತ್ಯತೀತ ಆಂದೋಲನಗಳಾಗಿವೆ. ಲೋಕಾಯತರು, ಜೈನರು, ಬೌದ್ಧರು, ಶರಣರು, ಸಿಖ್ಖರು, ಸಂತರು, ಸೂಫಿ ಸಂತರು, ದಾಸರು ಮತ್ತು ತತ್ವಪದಕಾರರು ಜಾತ್ಯತೀತ ಸಮಾಜವನ್ನು ಸೃಷ್ಟಿಸಲು ಹೆಣಗಿದರು. ಜನ ಸಮುದಾಯದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದರು. ಆದರೆ ಔದ್ಯೋಗಿಕ ಕ್ರಾಂತಿ, ವಿಜ್ಞಾನ, ತಂತ್ರಜ್ಞಾನ, ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆ ಮತ್ತು ತೀವ್ರವಾದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಭಾರತೀಯರು ತಮ್ಮ ತಮ್ಮ ಜಾತಿ ಮತ್ತು ಧರ್ಮಗಳ ಲಕ್ಷ್ಮಣರೇಖೆಗಳನ್ನು ದಾಟಿ ಬೀದಿಯ ಮೇಲಾದರೂ ಒಂದಾಗುವುದನ್ನು ಕಲಿತರು. ದುಃಖದ ವಿಚಾರವೆಂದರೆ ಈ ಒಂದಾಗುವಿಕೆಯು ಭಾರತೀಯರ ವ್ಯಕ್ತಿತ್ವದ ಮೇಲೆ ಆಂತರಿಕ ಪ್ರಭಾವ ಬೀರುವಲ್ಲಿ ಹೆಚ್ಚಿನ ಯಶಸ್ಸು ಸಾಧಿಸಲಿಲ್ಲ.

ಸದ್ಯ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದು ಹೋದರೂ ಭಾರತೀಯರು ಇದಕ್ಕಿಂತ ಹೆಚ್ಚಿನದನ್ನು ಕಲಿಯಲು ಸಾಧ್ಯವಾಗುವಂಥ ವಾತಾವರಣ ಸೃಷ್ಟಿಯಾಗಲಿಲ್ಲ. ಜಾತಿಗಳು ಹಾಗೇ ಉಳಿದುಕೊಂಡವು. ದೈಹಿಕವಾಗಿದ್ದ ಅಸ್ಪೃಶ್ಯತೆ ಒಂದಿಷ್ಟು ತೊಲಗಿತು. ಆದರೆ ಮಾನಸಿಕವಾಗಿ ಬೆಳೆಯುತ್ತಲೇ ಹೋಯಿತು. ಜಾತಿಜಾತಿಗಳ ಮತ್ತು ಧರ್ಮಧರ್ಮಗಳ ಮಧ್ಯೆ ಇರುವ ಅಪನಂಬಿಕೆ ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಕೋಮುವಾದಿ ಶಕ್ತಿಗಳು ಇದರ ಲಾಭವನ್ನು ಪಡೆದುಕೊಂಡು ಇಡೀ ದೇಶವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳಲು ಹವಣಿಸುತ್ತಿವೆ. ಜಾತ್ಯತೀತ ಭಾರತದ ದುರಂತವೆಂದರೆ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ಪರಿಶಿಷ್ಟರಲ್ಲಿನ ಅನೇಕರು ಬೆಳೆಯುತ್ತಿರುವ ಕೋಮುವಾದಿ ಶಕ್ತಿಗಳ ಜೊತೆ ಕೈಗೂಡಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳು ಭಾರತವನ್ನು ಬಂಡವಾಳ ಹೂಡುವ ತಾಣ ಮತ್ತು ತಮ್ಮ ವಸ್ತುಗಳನ್ನು ಮಾರಾಟ ಮಾಡುವ ಮಾರುಕಟ್ಟೆ ಎಂದು ಪರಿಗಣಿಸಿದ್ದಾರೆ. ಅವರಿಗೆ ಭಾರತೀಯರೆಂಧರೆ ತಮ್ಮ ಬಂಡವಾಳ ವೃದ್ಧಿಗಾಗಿ ಇರುವ ಕೂಲಿಗಳು ಮತ್ತು ತಮ್ಮ ವಸ್ತುಗಳನ್ನು ಕೊಳ್ಳುವ ಗ್ರಾಹಕರು ಮಾತ್ರ. ಈ ಸಾಮ್ರಾಜ್ಯಶಾಹಿಗಳು ತಮ್ಮ ಅಭಿವೃದ್ಧಿಗಾಗಿ ಸೃಷ್ಟಿಸಿದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ, ಬಹುರಾಷ್ಟ್ರೀಯ ಕಂಪನಿಗಳ ವಿದೇಶಿ ಬಂಡವಾಳ, ಮುಕ್ತ ಮಾರುಕಟ್ಟೆ, ಮುಕ್ತ ಆಮದು ನೀತಿ ಮತ್ತು ಭಾರತದ ರಾಜ್ಯಶಕ್ತಿಯನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಹವಣಿಸುತ್ತಿರುವ ಕೋಮುವಾದಿಗಳ ಕುತಂತ್ರಗಳು ಜೊತೆಜೊತೆಯಾಗಿ ಹೋಗುತ್ತಿವೆ. ದೇಶವನ್ನು ರಾಜಕೀಯವಾಗಿ ಬಹುಮತದಿಂದ ಆಳುವ ಹೆಬ್ಬಯಕೆ ಹೊಂದಿರುವ ಕೋಮುವಾದಿ ಶಕ್ತಿಗಳಿಗೆ ಸಾಮ್ರಾಜ್ಯಶಾಹಿಗಳು ಕುಮ್ಮಕ್ಕು ಕೊಡುತ್ತಿದ್ದಾರೆ.

ಕೋಮುವಾದಿ ಶಕ್ತಿಗಳನ್ನು ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ಬಳಸಿಕೊಳ್ಳುತ್ತಾ ಭಾರತವನ್ನು ಆರ್ಥಿಕವಾಗಿ ತಮ್ಮ ಅಂಕಿತದಲ್ಲಿಟ್ಟುಕೊಳ್ಳುವುದು ಸಾಮ್ರಾಜ್ಯಶಾಹಿಗಳ ಮುಖ್ಯ ಗುರಿಯಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ದೇಶವನ್ನು ಪ್ರತ್ಯಕ್ಷವಾಗಿ ಆಳಿದರೆ ಅಮೆರಿಕದ ಸಾಮ್ರಾಜ್ಯಶಾಹಿಗಳು ಪರೋಕ್ಷವಾಗಿ ಆಳಲು ಶತಪ್ರಯತ್ನ ನಡೆಸಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಸುಲಿಗೆ ಕಣ್ಣಿಗೆ ಹೊಡೆಯುವಂತಿತ್ತು, ಕಪ್ಪುಬಿಳುಪಾಗಿತ್ತು, ಬಿಳಿಯರ ವಿರುದ್ಧದ ಹೋರಾಟಕ್ಕಾಗಿ ಜನಸಮುದಾಯವನ್ನು ಅಣಿಗೊಳಿಸುವುದು ಭಾರಿ ಕಷ್ಟಕರವೇನಾಗಿರಲಿಲ್ಲ. ಆದರೆ ಜಾಗತೀಕರಣದ ಮೂಲಕ ದೇಶವನ್ನು ಹೊರಗಿನಿಂದಲೇ ಆಳಲೆತ್ನಿಸುತ್ತಿರುವ ಅಮೆರಿಕದ ಸಾಮ್ರಾಜ್ಯಶಾಹಿಗಳ ಬಗ್ಗೆ ಮತ್ತು ವಿವಿಧ ದೇಶಗಳ ಬಹುರಾಷ್ಟ್ರೀಯ ಕಂಪೆನಿಗಳ ಬಗ್ಗೆ ಜನಸಮುದಾಯದಲ್ಲಿ ಅರಿವು ಮೂಡಿಸುವುದು ಅತ್ಯಂತ ಕಷ್ಟಕರವಾಗಿದೆ.

ಮಹಾತ್ಮ ಗಾಂಧೀಜಿಯವರು ತಮ್ಮ ಅನುಯಾಯಿಗಳು ಮತ್ತು ಜನಶಕ್ತಿಯ ಸಹಾಯದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಹೊರಹಾಕುವಲ್ಲಿ ಯಶಸ್ವಿಯಾದರು. ಆದರೆ ಇಂದಿನ ನಮ್ಮ ರಾಷ್ಟ್ರ ನಾಯಕರು ಮತ್ತು ಇತರೆ ಹಲವಾರು ರಾಜ್ಯ ನಾಯಕರು ಸೇರಿ, ಸಾಮ್ರಾಜ್ಯಶಾಹಿಗಳು ದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸಲು ಸಾಧ್ಯವಾಗುವಂತಹ ವಾತಾವರಣವನ್ನು ಸೃಷ್ಟಿಸುವ ಕಾರ್ಯದಲ್ಲಿ ತಲ್ಲೀನರಾಗಿದ್ದಾರೆ.

ಸಾಮ್ರಾಜ್ಯಶಾಹಿಗಳಿಗೆ ಲಾಭವಾಗುವಂತಹ ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ತೀವ್ರವಾಗುತ್ತಿವೆ. ಇಂತಹ ವಿಷಮ ವಾತಾವರಣದಲ್ಲಿ ನಾವು ಮೌಲ್ಯವಿಹೀನರಾಗುತ್ತಿದ್ದೇವೆ. ಮನುಷ್ಯ ಸಂಬಂಧಗಳಲ್ಲಿ ಕೂಡ ಹಣವೇ ಪ್ರಧಾನವಾಗುತ್ತಿದೆ. ಹಣವಿಲ್ಲದೆ ಮನುಷ್ಯ ಬದುಕಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲೆಂದರಲ್ಲಿ ನಿರುದ್ಯೋಗ, ಹಿಂಸೆ, ಕ್ರೌರ್ಯ, ಅಸಹಾಯಕತೆ ಮತ್ತು ವಿಘ್ನಸಂತೋಷಗಳು ತಾಂಡವವಾಡುತ್ತಿವೆ. ಜನಸಮೂಹದಲ್ಲಿ ಮಾನವ ಒಂಟಿಯಾಗುತ್ತಿದ್ದಾನೆ. ರಸ್ತೆಯಲ್ಲಿ ಸಾವಿರಾರು ಜನರ ಮಧ್ಯೆ ಕೂಡ ಒಬ್ಬನೇ ಮಾತನಾಡುತ್ತಾ ಹೋಗುವಂತಹ ದುರಂತಕ್ಕೆ ಒಳಗಾಗಿದ್ದಾನೆ. ನಿರುದ್ಯೋಗ ಮತ್ತು ಹಸಿವು ಮುಂತಾದ ಸಮಸ್ಯೆಗಳಿಂದಾಗಿ ಬದುಕಿನಲ್ಲಿ ಸ್ವಾರ್ಥ ಮತ್ತು ಹಿಂಸೆ ಅನಿವಾರ್ಯ ಎಂಬ ನಿರ್ಧಾರಕ್ಕೆ ಬಂದವರ ಕೈಗಳು ಕೋಮುಗಲಭೆಗಳಲ್ಲಿ ಕ್ರಿಯಾಶೀಲವಾಗುತ್ತಿವೆ. ಒಂಟಿಯಾಗಿರುವ ಅಬಲೆಯರ ಕೊರಳ ಸರಗಳನ್ನು ಎಳೆಯಲು ಮುಂದಾಗುತ್ತಿವೆ. ಹಣಕ್ಕಾಗಿ ಹುಸುಗೂಸುಗಳನ್ನು ಕೊಲ್ಲುತ್ತಿವೆ. ಅಲ್ಪಸಂಖ್ಯಾತರು, ರೈತರು, ದಿನಸಿ ಅಂಗಡಿ ಮತ್ತು ಸಣ್ಣಕೈಗಾರಿಕೆಗಳನ್ನು ನಡೆಸುವವರು, ಕೆಳವರ್ಗ ಮತ್ತು ಕೆಳಜಾತಿಗಳ ಬಹುಪಾಲು ಬಡವರು ಹಾಗೂ ಮಧ್ಯಮ ವರ್ಗದವರು ಹೊಸ ಆರ್ಥಿಕ ನೀತಿಗೆ ಬಲಿಯಾಗುತ್ತಿದ್ದಾರೆ. ಇಂತಹ ವಿಷಮ ವಾತಾವರಣದಲ್ಲಿ ನವಭಾರತದ ನಿರ್ಮಾಣವಾಗಬೇಕಿದೆ. ಸುಲಿಗೆಯಿಲ್ಲದ ವ್ಯವಸ್ಥೆಗಾಗಿ ತುಳಿತಕ್ಕೊಳಗಾದವರೆಲ್ಲಾ ಒಂದಾಗಬೇಕಿದೆ. ಎಲ್ಲ ರೀತಿಯ ಶೋಷಣೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕಿದೆ. ಎಲ್ಲಕ್ಕೂ ಮುಂಚೆ ಧಾರ್ಮಿಕ ಫ್ಯಾಸಿಸಂನ ಅಟ್ಟಹಾಸದ ಹುಟ್ಟಡಗಿಸಲು ಸಂಸದೀಯ ವ್ಯವಸ್ಥೆಯ ಪ್ರಜಾಪ್ರಭುತ್ವವನ್ನಾದರೂ ಉಳಿಸಿಕೊಳ್ಳಬೇಕಾಗಿದೆ. ಆದರೆ ಉಗ್ರಗಾಮಿ ಮತ್ತು ಕೋಮುವಾದಿ ಶಕ್ತಿಗಳು ಹಿಂಸೆಯನ್ನು ಪ್ರದರ್ಶಿಸುತ್ತ ವಿಕೃತ ಅಟ್ಟಹಾಸ ಮೆರೆಯುತ್ತಿರುವಾಗ ಸರ್ವಮಾನ್ಯವಾದ ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸುವುದು ಹೇಗೆ ಎಂಬುದೇ ಯಕ್ಷಪ್ರಶ್ನೆಯಾಗಿದೆ.

ಭಾರತೀಯ ಪ್ರಜಾಪ್ರಭುತ್ವದ ತಳಹದಿ

ಗೌತಮ ಬುದ್ಧ ಮಹಾಪರಿನಿರ್ವಾಣ ಹೊಂದುವುದಕ್ಕೆ ಮುನ್ನ ಆತನ ಪರಮ ಶಿಷ್ಯ ಆನಂದನು ಬೌದ್ಧ ಸಂಘಕ್ಕೆ ನಾಯಕನನ್ನು ಸೂಚಿಸುವ ಬಗ್ಗೆ ಮನವಿ ಮಾಡಿದ. ಸಂಘದ ಭಿಕ್ಕುಗಳೇ ತಮ್ಮ ನಾಯಕನ ಆಯ್ಕೆ ಮಾಡಿಕೊಳ್ಳುವರು ಎಂದು ಬುದ್ಧ ತಿಳಿಸಿದ. ಹೀಗೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಉದಯವಾಯಿತು.

ಶರಣರ ಅನುಭವ ಮಂಟಪವೂ ಪ್ರಜಾಪ್ರಭುತ್ವಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಶರಣರು ದೇವರನ್ನು ವಿವಿಧ ಹೆಸರುಗಳಿಂದ ಕರೆದರೂ ನಿರಾಕಾರನಾದ ಆ ಒಬ್ಬನೇ ದೇವರನ್ನು ಅಂತಃಸಾಕ್ಷಿಯಾಗಿಟ್ಟುಕೊಂಡು ತಮ್ಮ ತಪ್ಪುಗಳನ್ನು ಎತ್ತಿ ತೋರಿಸುತ್ತಾ ತಿದ್ದಿಕೊಂಡರು. ನ್ಯಾಯನಿಷ್ಠುರಿಗಳಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಾ ಸಮಾಜವನ್ನು ತಿದ್ದುತ್ತ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲದ ನವಸಮಾಜದ ನಿರ್ಮಾಣಕ್ಕೆ ಯತ್ನಿಸಿದರು. ಶರಣರಂತೆ ಸೂಫಿಗಳು, ಸಂತರು ಮತ್ತು ದಾಸರು ತಮ್ಮ ಕಾಲ ಘಟ್ಟದ ಸಮಾಜವ್ಯವಸ್ಥೆಯಲ್ಲಿ ಸಮಾನತೆ ಮತ್ತು ಮಾನವಘನತೆ ಎತ್ತಿ ಹಿಡಿಯುವ ಪ್ರಯತ್ನ ಮಾಡಿದರು. ಗಾಂಧೀಜಿಯವರು ಇಂಥ ಭಕ್ತಿಪಂಥದ ಹಿನ್ನೆಲೆಯಲ್ಲಿ ಲಕ್ಷಾಂತರ ಜನರ ಮನದಲ್ಲಿ ಸತ್ಯಾಗ್ರಹದ ಪರಿಕಲ್ಪನೆ ಮೂಡಿಸಿದರು. ನ್ಯಾಯ ಮತ್ತು ಜೀವಕಾರುಣ್ಯದ ನೆಲೆಯಲ್ಲಿ ಬೃಹತ್ ಚಳವಳಿಗಳನ್ನು ರೂಪಿಸಿದರು. ಸ್ವಾತಂತ್ರ್ಯಾನಂತರ ನಮ್ಮಲ್ಲಿ ಸಮತೆಯನ್ನು ಸಾರುವ ಪ್ರಜಾಪ್ರಭುತ್ವ ರೂಪುಗೊಳ್ಳಲು ಇಂತಹ ಆದರ್ಶಗಳು ಬಳಕೆಯಾಗಲೇ ಇಲ್ಲ. ಆದರೆ ಭಾರತದಲ್ಲಿ ವಿವಿಧ ಜಾತಿ, ಮತ, ಪಂಥ, ಉದ್ಯೋಗ ಮತ್ತು ಧರ್ಮಗಳ ಸಾಂಸತಿಕ, ಆರ್ಥಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ರೂಪುಗೊಂಡ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಸಾಂಪ್ರದಾಯಿಕ ಪ್ರಜಾಪ್ರಭುತ್ವ ಮತ್ತು ಹಣಬಲ, ಜಾತಿಬಲ ಹಾಗೂ ಕೋಮುಪ್ರಜ್ಞೆಯಿಂದ ಕೂಡಿದ ಮತದಾನದ ಮೂಲಕ ಸೃಷ್ಟಿಯಾಗುವ ರಾಜಕೀಯವನ್ನು ನಿಯಂತ್ರಿಸುವ ಸಂಸದೀಯ ಪ್ರಜಾಪ್ರಭುತ್ವ ಮಾತ್ರ ನಮ್ಮ ದೇಶದಲ್ಲಿ ರೂಢಿಯಲ್ಲಿದೆ.

ಸಾಂಪ್ರದಾಯಿಕ ಪ್ರಜಾಪ್ರಭುತ್ವವೆಂಬುದು ಅನಿವಾರ್ಯ ಪರಿಕಲ್ಪನೆಯಾಗಿದೆ. ಕೆಳಜಾತಿಗಳ ಜನ ತಮ್ಮ ಜಾತಿಗಳಲ್ಲಿ ಗುರುತಿಸಿಕೊಂಡು ತಮ್ಮತನವನ್ನು ಉಳಿಸಿಕೊಳ್ಳುವುದು ಈ ಪರಿಕಲ್ಪನೆಯಿಂದ ಸಾಧ್ಯ. 'ಹಿಂದೂ' ಎಂದು ಕರೆಯಿಸಿಕೊಳ್ಳುವ ವೈದಿಕ ಧರ್ಮ ಸೃಷ್ಟಿಸಿದ ಶ್ರೇಣೀಕೃತ ಸಮಾಜದಲ್ಲಿನ ಎಲ್ಲ ಸ್ತರಗಳಲ್ಲಿನ ಕೆಳಜಾತಿಗಳ ಜನರ ಮೌನಸ್ವಾಭಿಮಾನ ಮತ್ತು ಅವರಲ್ಲಿನ ಅನೇಕರ ಜಾಗೃತ ಮನಸ್ಥಿತಿಯಿಂದಾಗಿ ಪ್ರತಿಗಾಮಿ ಮತ್ತು ಪುರೋಗಾಮಿ ಶಕ್ತಿಗಳ ರಣರಂಗದಂತಾಗಿದೆ.

ಮನುಸ್ಮೃತಿಯನ್ನು ನಂಬುವ ಯಥಾಸ್ಥಿತಿವಾದಿ ಮನಸ್ಸುಗಳು ಈ ಜಾತಿವಾದಿ ವ್ಯವಸ್ಥೆಯನ್ನು ಪೋಷಿಸುವುದರಲ್ಲೇ ತಲ್ಲೀನವಾಗಿವೆ. ಹೀಗೆ ಮನುಸ್ಮೃತಿ ಹಿಂದೂ ಧರ್ಮದ ತಾಯಿಬೇರು ಆಗಿದೆ. ಜನ್ಮಜನ್ಮಾಂತರದ ಕೃತ್ಯಗಳಿಂದಾಗಿ ಒಟ್ಟುಗೂಡಿರುವ ಸಂಚಿತಕರ್ಮ, ಹಿಂದಿನ ಜನ್ಮದ ಕೃತ್ಯಗಳಿಂದಾಗಿ ಉಳಿದಿರುವ ಪ್ರಾರಬ್ಧಕರ್ಮ ಮತ್ತು ಈ ಜನ್ಮದಲ್ಲಿನ ಕೃತ್ಯದಿಂದಾಗಿ ಮುಂದಿನ ಜನ್ಮದಲ್ಲಿ ಕಾಣಿಸಿಕೊಳ್ಳುವ ಆಗಾಮಿಕರ್ಮ ಎಂಬ ಕರ್ಮಗಳ ಬಲೆಯನ್ನು ಬೀಸುತ್ತ ಮನುಸ್ಮೃತಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡೇ ಬಂದಿದೆ. ಮನುವಾದಿಗಳು ಮನುಸ್ಮೃತಿಯ ನೆರವಿನೊಂದಿಗೆ ಸಹಸ್ರಾರು ವರ್ಷಗಳಿಂದ ಜನರ ಮೆದುಳಿನಲ್ಲಿ ಮೂಢನಂಬಿಕೆಗಳನ್ನು ತುಂಬುತ್ತಲೇ ಬಂದಿದ್ದಾರೆ. ಜನರನ್ನು ಮೂರ್ಖರನ್ನಾಗಿಸಿದಾಗ ಅವರ ಶೋಷಣೆ ಮಾಡುವುದು ಸರಳವಾಗುತ್ತದೆ ಎಂಬುದು ಅವರ ಲೆಕ್ಕಾಚಾರವಾಗಿದೆ. ಆ ಮೂಲಕ ಇಡೀ ಸಮಾಜದ ಮೇಲೆ ಹಿಡಿತ ಸಾಧಿಸುವ ಅವರ ಪ್ರಯತ್ನ ನಿರಂತರವಾಗಿರುತ್ತದೆ.

ಮನುಸ್ಮೃತಿಯ ಆಧಾರದ ಮೇಲೆ ನಿಂತ ಹಿಂದೂ ಧರ್ಮದ ವೈರುಧ್ಯಗಳಲ್ಲೇ ಸಾಂಪ್ರದಾಯಿಕ ಪ್ರಜಾಪ್ರಭುತ್ವ ಕೂಡ ಅಡಗಿರುವುದು ವಿಚಿತ್ರ ಆದರೂ ಸತ್ಯ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಹೋರಾಟಗಳಲ್ಲಿ ಎಲ್ಲ ಜನಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಈ ಕೆಳಜಾತಿಯವರ ಆತ್ಮಾಭಿಮಾನ ಸಹಾಯಕವಾಗುತ್ತದೆ. ಇದರ ಅರ್ಥ ಕೆಳಜಾತಿಗಳ ಜನ ತಮ್ಮ ಭವಿಷ್ಯದಲ್ಲಿ ಸಾಮಾಜಿಕ ನ್ಯಾಯದೊರೆತ ಮೇಲೂ ತಮ್ಮ ಜಾತಿಗಳನ್ನು ಉಳಿಸಿಕೊಂಡೇ ಹೋಗಬೇಕೆಂದಲ್ಲ. ಶೋಷಣೆಯ ವಾತಾವರಣದಲ್ಲಿ ಇಂತಹ ಆತ್ಮಗೌರವದ ಜಾತಿಪ್ರಜ್ಞೆ ಸಾಂಪ್ರದಾಯಿಕ ಪ್ರಜಾಪ್ರಭುತ್ವವನ್ನು ಸೃಷ್ಟಿ ಮಾಡುತ್ತದೆ. ಅಮಾನುಷ ವ್ಯವಸ್ಥೆಯಲ್ಲಿ ಕೆಳಜಾತಿಯವರಿಗೆ ತಮ್ಮತಮ್ಮ ಜಾತಿಗಳ ಪ್ರಜ್ಞೆ ಇರದೇ ಹೋದರೆ 'ಗರ್ವದಿಂದ ಹೇಳಿರಿ ನಾವೆಲ್ಲ ಹಿಂದೂಗಳು' ಎಂಬ ಠಾಕ್ರೆಯ ವಾದ ವಿಜಯ ಸಾಧಿಸುತ್ತಿತ್ತು, ಹಿಂದೂತ್ವವಾದಿ ಶಕ್ತಿಗಳು ವರ್ಣ ಮತ್ತು ಜಾತಿಭೇದದಿಂದ ಕೂಡಿದ ಮನುಸ್ಮೃತಿಯ ಆಧಾರದ ಮೇಲೆ ದೇಶದ ಸಂವಿಧಾನವನ್ನು ಪುನರ್ ರಚಿಸುವುದರ ಮೂಲಕ ಇಡೀ ಭಾರತವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಆಳುತ್ತಿದ್ದವು.


ದಲಿತರು ಮತ್ತು ಹಿಂದುಳಿದವರ ಆತ್ಮಶಕ್ತಿಯಿಂದಾಗಿ ಭಾರತದಲ್ಲಿ ಪ್ರಜಾಪ್ರಭುತ್ವ ಉಳಿದಿದೆ. ಒಂದುವೇಳೆ ಈ ಆತ್ಮಶಕ್ತಿ ಇಲ್ಲದೇ ಇದ್ದಿದ್ದರೆ ಈಗಾಗಲೇ ಧಾರ್ಮಿಕ ಫ್ಯಾಸಿಸಂ ಬಂದು ನಮ್ಮ ಸಾಂವಿಧಾನಿಕ ಜಾಗದಲ್ಲಿ ಮನುಸ್ಮೃತಿ ರಾರಾಜಿಸುತ್ತಿತ್ತು! ಆಗ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ತಮ್ಮ ದೇಶದಲ್ಲೇ ಎರಡನೇ ದರ್ಜೆ

...ಪ್ರಜೆಗಳಾಗಿರುತ್ತಿದ್ದರು. ಸಂವಿಧಾನದ ರಕ್ಷಣೆ ಮತ್ತು ಅದು ನೀಡುವ ಹಕ್ಕುಗಳ ಈಡೇರಿಕೆಗಾಗಿ ಮಾಡುವ ಹೋರಾಟದಿಂದ ಮಾತ್ರ ಭಾರತದಲ್ಲಿ ಪ್ರಜಾಪ್ರಭುತ್ವ ಮುಂದುವರಿಯಲು ಸಾಧ್ಯ. ಇಲ್ಲದಿದ್ದರೆ ಉಗ್ರಗಾಮಿಗಳನ್ನು ತೋರಿಸುತ್ತ ಕೋಮುವಾದಿಗಳು ಬೆಳೆಯುತ್ತಾರೆ. ಅದೇ ರೀತಿಯಲ್ಲಿ ಕೋಮುವಾದಿಗಳನ್ನು ತೋರಿಸುತ್ತ ಉಗ್ರಗಾಮಿಗಳು ಬೆಳೆಯುತ್ತಾರೆ. ಕೊನೆಗೆ ಇಡೀ ದೇಶ ಅವರ ಕ್ರೌರ್ಯಕ್ಕೆ ಬಲಿಯಾಗಬೇಕಾಗುತ್ತದೆ.

ಭಾರತೀಯ ಸಮಾಜದ ಹಿನ್ನೆಲೆ

ವಿರಾಟ್ ಪುರುಷನ ಮುಖದಿಂದ ಬ್ರಾಹ್ಮಣ, ಭುಜದಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ ಮತ್ತು ಪಾದದಿಂದ ಶೂದ್ರ ಹುಟ್ಟಿದ ಎಂದು ಹೇಳುವ ಋಗ್ವೇದದ ಪುರುಷಸೂಕ್ತದ ಆಧಾರದ ಮೇಲೆ ನಮ್ಮ ಸಮಾಜವು ಏಣಿಗೆ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಾ ಶ್ರೇಣೀಕೃತವಾಗಿ ಬೆಳೆಯಿತು. ಈ ಸಮಾಜದ ವಿವಿಧ ಹಂತಗಳಲ್ಲಿ ತುಳಿತಕ್ಕೊಳಗಾದವರು ತಮ್ಮ ಸ್ಥಿತಿಗತಿಗೆ ಹಿಂದಿನ ಜನ್ಮದ ಪ್ರಾರಬ್ಧಕರ್ಮವೇ ಕಾರಣ ಎಂದು ಭಾವಿಸುವಂತೆ ಧಾರ್ಮಿಕ ಸಾಹಿತ್ಯದ ನಿರ್ಮಾಣವಾಯಿತು. ವೇದ, ಶಾಸ್ತ್ರ ಪುರಾಣಗಳನ್ನು ಓದಲು ಅವಕಾಶವಿಲ್ಲದ ಶೂದ್ರರಿಗೆ ನಾಟಕಗಳ ಮೂಲಕ ಕರ್ಮಸಿದ್ಧಾಂತ ಮತ್ತು ವರ್ಣ-ಜಾತಿಗಳಿಂದ ಕೂಡಿದ ಶ್ರೇಣೀಕೃತ ಸಮಾಜದ ರಚನೆಯ ಕಲ್ಪನೆಯನ್ನು ಕೊಡಲಾಯಿತು. ಅಷ್ಟೇ ಅಲ್ಲದೆ ಈ ಸಮಾಜದಲ್ಲಿ ಎಲ್ಲ ಜಾತಿಗಳವರಿಗೂ ಒಂದು ವಿಶಿಷ್ಟವಾದ ಉದ್ಯೋಗ ಮತ್ತು ಸ್ಥಾನವಿದೆ ಎಂಬುದನ್ನು ಸಾಧಿಸಲಾಯಿತು. ಕೆಳಜಾತಿಗಳಲ್ಲಿ ಹುಟ್ಟಿ ಕಷ್ಟ ನಷ್ಟ ಅನುಭವಿಸುವವರ ಮತ್ತು ಅನ್ಯಾಯಕ್ಕೊಳಗಾಗುವವರ ನಿಕೃಷ್ಟ ಬದುಕಿಗೆ ಅವರು ಹಿಂದಿನ ಜನ್ಮದಲ್ಲಿ ಮಾಡಿದ ಪಾಪವೇ ಕಾರಣ; ಅವರೆಲ್ಲಾ ಈ ಧಾರ್ಮಿಕ ವ್ಯವಸ್ಥೆಗೆ ಅಂದರೆ ಏಣಿಗೆ ವ್ಯವಸ್ಥೆಗೆ ಗೌರವಕೊಟ್ಟು ಕಷ್ಟ ನಷ್ಟಗಳನ್ನು ಸಹಿಸುತ್ತಾ ಮತ್ತು ಫಲಾಪೇಕ್ಷೆಯಿಲ್ಲದೆ ದುಡಿಯುತ್ತಾ, ಶೋಷಣೆಯನ್ನು ಒಪ್ಪಿಕೊಳ್ಳುತ್ತಾ ಬದುಕಿದರೆ ಮುಂದಿನ ಜನ್ಮದಲ್ಲಿ ಕುಲೀನರಾಗಿ ಜನಿಸಿ ಸುಖಭೋಗಗಳನ್ನು ಪಡೆಯುವರು ಎಂಬ ಭ್ರಮೆಯನ್ನು ಸೃಷ್ಟಿಸಲಾಯಿತು. ಈ ಸನಾತನ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳವರು ಸವರ್ಣೀಯರೆನಿಸಿ ಎಲ್ಲ ಸೌಲಭ್ಯಗಳನ್ನು ಪಡೆದರು. ಆದರೆ ಶೂದ್ರರು ಯಾವುದೇ ಹಕ್ಕುಗಳಿಲ್ಲದೆ ಬದುಕುವಂತಹ ಸ್ಥಿತಿಗೆ ಇಳಿದರು. ಇವರೆಲ್ಲಾ ಈ ದೇಶದ ಮೂಲನಿವಾಸಿಗಳೇ ಆಗಿದ್ದರು. ಮನುವಾದಿಗಳಿಂದ ಬೇಸತ್ತವರು ಕಾಡು ಸೇರಿ ಆದಿವಾಸಿಗಳಾದರು. ಆದರೆ ಇತರ ಅನೇಕರು ಈ ಕ್ರೂರ ವ್ಯವಸ್ಥೆಯ ವಿರುದ್ಧ ಹೋರಾಡುತ್ತಾ ಅಲ್ಲೇ ಉಳಿದರು. ಈ ಹೋರಾಟಗಾರರಿಗೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದರು. ಹೀಗೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದ ಶೂದ್ರರೇ ಅಸ್ಪೃಶ್ಯರು. ಅವರು ಊರಿನ ಹೊರಗಡೆಯ ಕೇರಿಗಳಲ್ಲಿ ಬದುಕುವಂತಾಯಿತು. ಇದೊಂದು ಭಯಂಕರವಾದ ಅಪಾರ್ಥೈಡ್ ವ್ಯವಸ್ಥೆ. ಅಪಾರ್ಥೈಡ್ ಅಂದರೆ ಪ್ರತ್ಯೇಕವಾಗಿ ಬದುಕುವುದು. ಹೀಗೆ ಚಾತುರ್ವರ್ಣಭೇದ ಎಂಬ ಈ ಅಪಾರ್ಥೈಡ್ ವ್ಯವಸ್ಥೆ ಭಾರತದಲ್ಲೇ ಮೊದಲಬಾರಿಗೆ ಪ್ರಾರಂಭವಾಯಿತು.

ದಕ್ಷಿಣ ಆಫ್ರಿಕಾದ ಅಪಾರ್ಥೈಡ್ (ವರ್ಣಭೇದ ನೀತಿ) ವ್ಯವಸ್ಥೆಗೆ ಕೇವಲ ನಾಲ್ಕು ಶತಮಾನಗಳ ಇತಿಹಾಸವಿದೆ. ಕಪ್ಪು ಜನರ ಹಕ್ಕುಗಳಿಗಾಗಿ ಹೋರಾಡುತ್ತ 1962ನೇ ನವೆಂಬರ್ 7ರಿಂದ 1990ನೇ ಫೆಬ್ರುವರಿ 11ರ ವರೆಗೆ ದಕ್ಷಿಣ ಆಫ್ರಿಕಾದ ಕುಪ್ರಸಿದ್ಧ ಜೈಲುಗಳಲ್ಲಿದ್ದು ಬಿಡುಗಡೆ ಹೊಂದಿದ ಕರಿಯರ ನಾಯಕ ನೆಲ್ಸನ್ ಮಂಡೇಲಾ ಅವರು ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದ ಮೇಲೆ ಈ ವ್ಯವಸ್ಥೆ ಕೊನೆಗೊಂಡಿತು. ಆದರೆ ಭಾರತದ ಅಪಾರ್ಥೈಡ್ ವ್ಯವಸ್ಥೆ ಎಷ್ಟು ಕ್ರೂರವಾಗಿದೆ ಎಂದರೆ ಸಹಸ್ರಾರು ವರ್ಷಗಳ ಹಿಂದೆ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸಿ ಬಹಿಷ್ಕೃತರಾದವರ ವಂಶಜರು ಇಂದಿಗೂ ಹೊಲಗೇರಿಗಳಲ್ಲಿ ಮತ್ತು ಮಾದರ ಓಣಿಗಳಲ್ಲಿ ಬದುಕುವ ಸ್ಥಿತಿ ಇದೆ!



ನಿರೀಶ್ವರವಾದಿ ಚಾರ್ವಾಕರು (ಲೋಕಾಯತರು) ಸಾಮೂಹಿಕವಾಗಿ ಈ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿದವರಲ್ಲಿ ಮೊದಲಿಗರು. 'ಚಾರು ವಾಕ್' ಎಂದರೆ ಮನೋಹರವಾಗಿ ಮಾತನಾಡುವವನು. 'ಲೋಕ ಆಯುತ' ಎಂದರೆ ಈ ಭೂಮಿಗೆ ಯೋಗ್ಯನಾಗಿರುವವನು. (ಈ ಬದುಕಿನ ವಾಸ್ತವತೆಯನ್ನು ಮಾತ್ರ ನಂಬಿ ಉಳಿದದ್ದೆಲ್ಲ ಸುಳ್ಳು ಎಂದು ಸಾರಿದ ಲೋಕಪ್ರಿಯನು) ಶೂದ್ರರಿಗೆ ಈ ವಿಚಾರ ತುಂಬಾ ಹಿಡಿಸಿತು. ಅವರಿಗೆ ಈ ಬದುಕಿನಲ್ಲೇ ಒಳ್ಳೆಯದನ್ನು ಕಾಣುವ ಕನಸುಗಳು ಬೀಳತೊಡಗಿದವು. ಆದರೆ ಪುರುಷಸೂಕ್ತದ ಚಾತುರ್ವರ್ಣ ಪದ್ಧತಿಯಿಂದ ಕುಲವಾದವನ್ನು ಸೃಷ್ಟಿಸಿದವರ ವಂಶದವರು ಎಂದು ಹೆಮ್ಮೆ ಪಡುತ್ತಿದ್ದ ಸನಾತನವಾದಿಗಳು ಚಾರ್ವಾಕರನ್ನು ಕೊಲ್ಲುತ್ತಾ ಅವರ ಸಾಹಿತ್ಯವನ್ನು ಸುಡುತ್ತಾ ಲೋಕಾಯತ ತತ್ತ್ವಜ್ಞಾನವನ್ನೇ ನಿರ್ನಾಮ ಮಾಡುವಲ್ಲಿ ಬಹುಪಾಲು ಯಶಸ್ವಿಯಾದರು. ಯಾವುದೇ ವರ್ಣದ ಮನುಷ್ಯ ಐಹಿಕ ಜಗತ್ತಿನ ಎಲ್ಲ ವ್ಯಾಮೋಹಗಳಿಂದ ಹೊರಬಂದು ತನ್ನ ಸದ್ಗುಣಗಳಿಂದ ಅತ್ಯುನ್ನತವಾದುದನ್ನು ಸಾಧಿಸಿದಾಗ ಆತನೇ ದೇವನಾಗುತ್ತಾನೆಂಬ ವಿಶಿಷ್ಟವಾದ ನಿರೀಶ್ವರವಾದವನ್ನೇ ನಂತರ ಬಂದ ಜೈನತತ್ತ್ವವೂ ಸಾರಿತು. ಆದರೆ ಐಹಿಕ ಜಗತ್ತಿಗೆ ಸಂಬಂಧಿಸಿದಂತೆ ಕಠಿಣ ಮಾರ್ಗದಿಂದಾಗಿ ಬಹುಪಾಲು ಶೂದ್ರರು ಈ ಧರ್ಮವನ್ನು ಸ್ವೀಕರಿಸಲಿಲ್ಲ. ಅಲ್ಲದೆ ಆ ಧರ್ಮ ಬುದ್ಧನ ಕಾಲದಲ್ಲೇ ಸನಾತನಿಗಳ ಹಿಡಿತಕ್ಕೆ ಬಂದಾಗಿತ್ತು. ಬುದ್ಧನ ಅಜ್ಞೇಯವಾದ ಕಾರಣ್ಯವನ್ನು ಅಲ್ಲಗಳೆದ ಮಾಧ್ಯಮ ಮಾರ್ಗವಾಗಿ ಜನಸಾಮಾನ್ಯರನ್ನು ಆಕರ್ಷಿಸಿತು. ದೇವರ ಅಸ್ತಿತ್ವದ ಬಗ್ಗೆ ಬುದ್ಧ ಎಲ್ಲಿಯೂ ಮಾತನಾಡುವುದಿಲ್ಲ. ಆತ ಮಾತನಾಡುವುದು ಹಿತಕಾರಿಯಾದ ಬದುಕಿನ ಬಗ್ಗೆ. ಈ ಬದುಕನ್ನು ದುಃಖದಿಂದ ಬಿಡುಗಡೆಗೊಳಿಸುವುದರ ಬಗ್ಗೆ.

ವಿವಿಧ ಜಾತಿ ಮತ್ತು ಕಾಯಕಗಳಲ್ಲಿ ಹಂಚಿಹೋಗಿದ್ದ ಶೂದ್ರರಿಗೆ ಬುದ್ಧ ಬಹಳ ಹಿಡಿಸಿದ. ಬಹುಪಾಲು ಜನಸಮುದಾಯ ಬುದ್ಧನ ಮಾರ್ಗವನ್ನು ಅನುಸರಿಸತೊಡಗಿತು. ಅನೇಕ ರಾಜರು ಕೂಡ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸುವಂಥ ಪರಿಸ್ಥಿತಿಯುಂಟಾಯಿತು. ಆದರೆ ಸನಾತನಿಗಳು ಬೌದ್ಧಭಿಕ್ಕುಗಳ ಮೇಲೆ ಹಲ್ಲೆ ಮಾಡತೊಡಗಿದರು. ಅವರನ್ನು ಜೀವಂತ ಸುಡುವ ಕೃತ್ಯಗಳೂ ನಡೆದವು. ನಂತರ ವಿವಿಧ ದೇಶಗಳಿಗೆ ಹರಡಿದ ಬೌದ್ಧಧರ್ಮ ಭಾರತದಲ್ಲಿ ಅಲ್ಪಸಂಖ್ಯಾತ ಧರ್ಮವಾಗಿ ಉಳಿದುಕೊಳ್ಳುವ ಪರಿಸ್ಥಿತಿ ಬಂದೊದಗಿತು.

ತದನಂತರ ಬಂದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಜಾತಿ ಮತ್ತು ವರ್ಣವ್ಯವಸ್ಥೆಯಿಂದ ಬೇಸತ್ತ ಜನರಿಗೆ ವರದಾನಗಳಾದವು. ತಮ್ಮ ಆತ್ಮಗೌರವಕ್ಕಾಗಿ ವಿವಿಧ ಕೆಳಜಾತಿಗಳವರು ಬಹುಸಂಖ್ಯೆಯಲ್ಲಿ ಆ ಧರ್ಮಗಳನ್ನು ಸ್ವೀಕರಿಸಿದರೆ, ಮೇಲ್ಜಾತಿಯವರಲ್ಲಿ ಅನೇಕರು ಮುಸ್ಲಿಂ ಮತ್ತು ಕ್ರೈಸ್ತ ಆಳುವ ವರ್ಗಗಳಿಂದ ಲಾಭಪಡೆಯುವುದಕ್ಕಾಗಿ ಇಲ್ಲವೆ ಆ ಧರ್ಮಗಳ ತತ್ವಕ್ಕೆ ಮಾರುಹೋಗಿ ಮತಾಂತರಗೊಂಡರು. ಸಂತರು ಮತ್ತು ಸೂಫಿಸಂತರು ಕೂಡ ಜನಸಮುದಾಯದ ಆಶೋತ್ತರಗಳನ್ನು ಎತ್ತಿ ಹಿಡಿಯುವಂತಹ ಆದರ್ಶಗಳ ಮೂಲಕ ಜನರಲ್ಲಿ ಹೊಸ ವಿಚಾರಗಳನ್ನು ಬಿತ್ತತೊಡಗಿದರು.

ವೈದಿಕರ ಶಾಸ್ತ್ರ ಮತ್ತು ಜಮೀನುದಾರರ ಶಸ್ತ್ರಗಳು ಭಾರತದ ಬಡವರು ಮತ್ತು ಹಿಂದುಳಿದ ಜಾತಿಗಳ ಜನರನ್ನು ಸಹಸ್ರಾರು ವರ್ಷಗಳಿಂದ ಬಂಧನದಲ್ಲಿಟ್ಟಿದ್ದವು. ಅವರು ತಮ್ಮ ವಿಮೋಚನೆಗಾಗಿ ಮುಸ್ಲಿಂ ಮತ್ತು ಇತರ ಧರ್ಮಗಳಿಗೆ ಮತಾಂತರಗೊಂಡರು. ಈ ಪ್ರಕ್ರಿಯೆಯನ್ನು ಸ್ವಾಮಿ ವಿವೇಕಾನಂದರು ನೂರು ವರ್ಷಗಳಿಗಿಂತ ಹಿಂದೆಯೇ ಗುರುತಿಸಿದ್ದಾರೆ.

ಬಸವಣ್ಣನವರ ಶರಣಸಂಕುಲ

ಕನ್ನಡನಾಡಿನಲ್ಲಿ 12ನೇ ಶತಮಾನದ ಶರಣರು ಬಸವಣ್ಣನವರ ಮಾರ್ಗದರ್ಶನದಲ್ಲಿ ವರ್ಣ ಮತ್ತು ಜಾತಿಗಳಿಲ್ಲದ ಸಮಾಜ ನಿರ್ಮಿಸಲು ತೀವ್ರ ಪ್ರಯತ್ನ ಮಾಡಿದರು. ಆಗ ಅಸ್ಪೃಶ್ಯರು ಮತ್ತು ಕೆಳಜಾತಿಗಳ ವಿವಿಧ ಕಾಯಕದವರು ಬೃಹತ್ ಪ್ರಮಾಣದಲ್ಲಿ ಶರಣರ ಏಕದೇವೋಪಾಸನೆಯ ವರ್ಣರಹಿತ ಮತ್ತು ಜಾತಿರಹಿತ ಧರ್ಮವನ್ನು ಸ್ವೀಕರಿಸಿದರು. ಬ್ರಾಹ್ಮಣ ಮಧುವರಸ ಮತ್ತು ಸಮಗಾರ ಹರಳಯ್ಯನಂತಹವರು ಈ ಹೊಸ ಧರ್ಮದಲ್ಲಿ ಇಷ್ಟಲಿಂಗಧಾರಿಗಳಾಗಿ ಒಂದೇ ಸ್ಥಾನವನ್ನು ಪಡೆದರು. ಮಧುವರಸರ ಮಗಳು ಮತ್ತು ಹರಳಯ್ಯನ ಮಗನ ಮದುವೆಯೇ ಒಂದು ನೆಪವಾಗಿ ಮೇಲ್ಜಾತಿಯವರು ಗುಲ್ಲೆಬ್ಬಿಸಿದರು. ಈ ವಿಲೋಮ ವಿವಾಹ ಮನುಧರ್ಮಕ್ಕೆ ಬಾಹಿರ ಎಂದು ವೈದಿಕರು ವಾದಿಸಿದರು. ಅವರ ಶಾಸ್ತ್ರಗಳು ಹೇಳಿದಂತೆ ಬಿಜ್ಜಳನ ಶಸ್ತ್ರಗಳು ಕೇಳಿದವು. ಆಗ ಕಲ್ಯಾಣದಲ್ಲಿ ಕ್ಷಿಪ್ರಕ್ರಾಂತಿ ನಡೆದು ಅನೇಕ ಶರಣರ ಕಗ್ಗೊಲೆಯಾಯಿತು. ಅವರ ವಚನಕಟ್ಟುಗಳನ್ನು ಸುಡಲಾಯಿತು. ಅಳಿದುಳಿದ ಶರಣರು ತಮಗೆ ದಿಕ್ಕುತೋಚಿದ ಕಡೆಗಳಲ್ಲಿ ಹೊರಟು ಹೋಗಿ ಭಾರಿ ಕಷ್ಟನಷ್ಟಗಳನ್ನು ಅನುಭವಿಸಿದರು. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದರಹಿತ ಸಮಾಜದ ಅವರ ಕನಸು ಕನಸಾಗಿಯೇ ಉಳಿಯಿತು. 12ನೇ ಶತಮಾನದ ವಚನಕಾರರಲ್ಲಿ 35 ವಚನಕಾರ್ತಿಯರೂ ಸೇರಿದಂತೆ ಒಟ್ಟು 221 ವಚನಕಾರರ 14739 ವಚನಗಳು ಸಿಕ್ಕಿವೆ. ಅವರಲ್ಲಿ 44 ಮಂದಿ ವಚನಕಾರರ ಹೆಸರು ಪತ್ತೆಯಾಗಿಲ್ಲ. 17 ಮಂದಿ ವಚನಕಾರರ ಅಂಕಿತಗಳು ಗೊತ್ತಾಗಿಲ್ಲ. ಈ ವಚನಕಾರರಲ್ಲಿ ಬಹುಪಾಲು ಮಂದಿ ಕೆಳಜಾತಿ ಮತ್ತು ಕೆಳವರ್ಗದವರಾಗಿದ್ದರು ಎಂಬುದು ಗಮನಾರ್ಹ. ಇವರೆಲ್ಲ ಜಾತಿವ್ಯವಸ್ಥೆಯ ಕ್ರೌರ್ಯವನ್ನು ವಿರೋಧಿಸಿ ಬಸವಣ್ಣನವರ ಜಾತಿರಹಿತ ಶರಣಸಂಕುಲದ ಸದಸ್ಯರಾಗಿದ್ದರು.

ಹೀಗೆ ಶೂದ್ರರು ಮತ್ತು ಅಸ್ಪೃಶ್ಯರು ಆಯಾ ಕಾಲಘಟ್ಟದಲ್ಲಿ ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ, ಲಿಂಗಾಯತ ಮತ್ತು ಸಿಖ್ ಧರ್ಮಗಳಿಗೆ ಮತಾಂತರಗೊಂಡರು. ಉಳಿದವರು ಆದಿವಾಸಿಗಳಾಗಿ, ಅಸ್ಪೃಶ್ಯರಾಗಿ ಮತ್ತು ವಿವಿಧ ಜಾತಿಗಳ ಶೂದ್ರರಾಗಿ ಇದ್ದಲ್ಲೇ ಉಳಿದರು. ಈ ಹಿನ್ನೆಲೆಯಲ್ಲಿ ನೋಡಿದಾಗ ಬಹುಪಾಲು ಜೈನರು, ಬೌದ್ಧರು, ಕ್ರೈಸ್ತರು, ಮುಸ್ಲಿಮರು, ಲಿಂಗಾಯತರು ಮತ್ತು ಸಿಖ್ಖರು ಶೂದ್ರ ಮೂಲದವರೇ ಆಗಿದ್ದಾರೆ. ಅಸ್ಪೃಶ್ಯರು ಆದಿವಾಸಿಗಳು ಮತ್ತು ಎಲ್ಲ ಹಿಂದುಳಿದವರ್ಗದವರು ಕೂಡ ಶೂದ್ರ ಮೂಲದವರೇ ಆಗಿದ್ದಾರೆ ಎಂಬ ಸತ್ಯವನ್ನು ಅರಿತುಕೊಳ್ಳುವುದು ಅವಶ್ಯವಾಗಿದೆ.

ಮಹಾಜನ ಸಮಾಜದ ವಿರುದ್ಧ ಬಹುಜನ ಸಮಾಜ


ಈ ಐತಿಹಾಸಿಕ ಪ್ರಜ್ಞೆಯ ಆಧಾರದ ಮೇಲೆ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಒಂದುಗೂಡಿ ಬಹುಜನರಾದರೆ ಭಾರತದ ಚರಿತ್ರೆ ಹೊಸ ತಿರುವು ಪಡೆದು ಭವಿಷ್ಯದಲ್ಲಿ ಬಹುಜನರ ಆಳ್ವಿಕೆ ಬಂದು ಸಾಂಪ್ರದಾಯಿಕ ಸುಲಿಗೆಕೋರ 'ಮಹಾಜನರ' ಆಳ್ವಿಕೆ ಕೊನೆಗೊಳ್ಳುವುದು. ಆದರೆ ಮಹಾಜನರು ಅಷ್ಟು ಸುಲಭವಾಗಿ ತಮ್ಮ ಹಕ್ಕನ್ನು ಬಿಟ್ಟುಕೊಡರು. ತಮ್ಮ ರಾಜಕೀಯ ಹಕ್ಕನ್ನು ಉಳಿಸಿಕೊಳ್ಳುವುದಕ್ಕಾಗಿ ಅವರೀಗ 'ಗರ್ವಸೇ ಕಹೋ ಹಮ್ ಹಿಂದೂ ಹೈ', 'ನಾವೆಲ್ಲಾ ಹಿಂದೂ, ನಾವೆಲ್ಲಾ ಒಂದು' ಮುಂತಾದ ಘೋಷಣೆಗಳನ್ನು ಕೂಗತೊಡಗಿದ್ದಾರೆ. ಜನಗಣತಿಯಲ್ಲಿ ಜಾತಿಗಳ ಹೆಸರುಗಳಿರಬಾರದು; ಕೇವಲ ಹಿಂದೂ ಇದ್ದರೆ ಸಾಕು ಎಂದು ಹಿಂದುಳಿದವರನ್ನು ಮತ್ತು ಅಸ್ಪೃಶ್ಯರನ್ನು ಹಿಂದೂ ಶಬ್ದಕ್ಕೆ ಕಟ್ಟಿ ಆಳಲು ಬಯಸಿದ್ದಾರೆ. ಶೂದ್ರರನ್ನು ಒಡೆದು ಆಳಿದ ಇವರಿಗೆ, ಇಂದು ಅವರೆಲ್ಲರೂ ತಮ್ಮವರೆಂದು ಬಾಯಿಮಾತಿನಲ್ಲಿ ಹೇಳುವ ತವಕ ಹೆಚ್ಚಾಗಿದೆ. ಆ ಮೂಲಕ ಹೊಸರೀತಿಯಲ್ಲಿ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರನ್ನು ಆಳುವ ತೀವ್ರ ಯತ್ನದಲ್ಲಿದ್ದಾರೆ.

ಎಲ್ಲಿಯವರೆಗೆ ತುಳಿತಕ್ಕೊಳಗಾದ ಹಿಂದುಳಿದವರು ಮತ್ತು ಅಸ್ಪೃಶ್ಯರು ತಮ್ಮ ಮೂಲ ಒಂದೇ ಎಂಬುದನ್ನು ಅರಿತು ಒಂದಾಗುವುದಿಲ್ಲವೋ; ಎಲ್ಲಿಯವರೆಗೆ ಇವರಿಬ್ಬರೂ ಸೇರಿ, ಬಹುಪಾಲು ಕ್ರೈಸ್ತರು, ಮುಸ್ಲಿಮರು, ಲಿಂಗಾಯತರು, ಸಿಖ್ಖರು ಮೊದಲಾದವರ ಪೂರ್ವಜರು ತಮ್ಮ ಪೂರ್ವಜರ ರಕ್ತ ಸಂಬಂಧಿಗಳಾಗಿದ್ದವರು ಎಂಬ ಸತ್ಯವನ್ನು ಅರಿತು, ಇವರೆಲ್ಲರ ಜೊತೆ ಒಂದಾಗಿ ರಾಜ್ಯಶಕ್ತಿಯನ್ನು ಪಡೆಯಲು ಹೋರಾಡುವುದಿಲ್ಲವೋ ಅಲ್ಲಿಯವರೆಗೆ ಶೋಷಕ ಮಹಾಜನರ ಅಡಿಯಾಳುಗಳಾಗಿಯೇ ಇರಬೇಕಾಗುತ್ತದೆ. ದಲಿತರು ಕೈ ಮುಂದೆ ಮಾಡಿದಾಗ ಉಳಿದವರು ಅವರ ಕೈಹಿಡಿಯುವುದೊಂದೇ ವಿಮೋಚನೆಯ ಮಾರ್ಗವಾಗಿದೆ.

● ರಂಜಾನ್ ದರ್ಗಾ

ಹೂವು ಸತ್ತಾಗ

(ಹೈತಿ ದೇಶದ ಕವಿ ಗ್ಯಾಸ್ತಾನ್ ಸ್ಯೆಂಟ್ ಫ್ಲೂವರ್ ಅವರು ಫ್ರೆಂಚ್ ಭಾಷೆಯಲ್ಲಿ ಬರೆದ ಕವಿತೆ)



ಹೂವು ಸತ್ತಾಗ
ನೋವು ಹರಿದು ಕಾಡಿನಾದ್ಯಂತ
ಹೋಗಿ ಕರೆವುದು ದುಃಖ.
ಹರಿವ ನದಿ ಬತ್ತಿ ಬರಡಾಗಿ
ತುಂಬ ಜೀರುಂಡೆಗಳು ಒಂದೆಡೆಗೆ
ಬಂದು ಝೇಂಕರಿಸಿ ರೋದಿಸಿತು.
ಭೂಮಿ ಬಸಿರಲ್ಲಿದ್ದ ಖುಷಿ ಖುಷಿ
ಈಗ ಕಹಿ ಕಹಿ ನರಳು ಸಂಕಟ,
ಭೂಗರ್ಭ ತೆರೆದುಕೊಳ್ಳುತ್ತದೆ ಈಗ
ಹೂವ ಮಣ್ಣು ಮಾಡುವುದಕ್ಕೆ.

ಹಸಿಯದಲಿ ಸತ್ತರೆ ಹೂವು
ಸುಲಭವಾಗದ ನೋವು
ಹೀಗೆ ಹೇಳಲಿ ನಿನಗೆ
ಸುಖದೆದೆಯಾಳದಲ್ಲಿ ಇಳಿದ ಸಾವು
ಕೊಂಡುಬರುವುದು ಹೀಗೆ ಹಲವರನ್ನ
ಸತ್ತಾಗ ಹೂವ ಮಣ್ಣು ಮಾಡುವುದಕ್ಕೆ, ಮುನ್ನ

ರೆ

(ರೊಮೇನಿಯ ದೇಶದ ಕವಿ ಎಲೆನ ಲಿಲಿಯಾನ ಪೊಪೆಸ್ಕೊ ಅವರು ರುಮೇನಿಯನ್ ಭಾಷೆಯಲ್ಲಿ ಬರೆದ ಕವಿತೆ)



ಅಳತೆಗೆ ಮೀರಿದ್ದ ಅಳಿಯಬಹುದಾದರೆ
ಮೇರೆಗೆ ಮೀರಿದ್ದ ತಬ್ಬಿಕೊಳ್ಳಲಾದರೆ
ಶೂನ್ಯದಂಚನೂ ದಾಟಿ, ಒಂದಾ ಇದುವೋ
ಇಲ್ಲವೆ ಅದುವೋ ಆಗದೆ ಉಳಿದರೆ,


ಪ್ರೀತಿಸದೇ ಪ್ರೀತಿಯೇ ಆಗಿ ಮೈದಳಿದರೆ
ಬಯಸದೆ ಬಯಕೆಯೇ ಆಗಿ ಮೂರ್ತಿವೆತ್ತರೆ
ಮಾತೇ ಆಡದೆ ಧ್ವನಿಯಾಗುಳಿದರೆ
ಅನ್ನಿಸದೇ ಅನಿಸಿಕೆಯಾಗುಳಿದರೆ

ಕೇಳದ್ದನ್ನ ಕೇಳಿಸಿಕೊಂಡರೆ
ಕಾಣದ್ದನ್ನ ಕಾಣುವುದಾದರೆ
ಅರಿವಿಗೇ ದಕ್ಕದ್ದ ತಿಳಿವುದಾದರೆ ?
ಆಗುವುದೇ ಹೊಸ ಆರಂಭ?

ಕನ್ನಡಕ್ಕೆ : ಮಮತಾ ಜಿ. ಸಾಗರ

ಓರಿಗಾಮಿ

(ಫಿಲಿಪೈನ್ಸ್ ದೇಶದ ಕವಿ ಮಾರ್ಜರಿ ಎವಾಸ್ಕೊ ಅವರು ಸೆಬುವಾನೊ ಭಾಷೆಯಲ್ಲಿ ಬರೆದ ಕವಿತೆ)



ಈ ಪದವು ಬಿಚ್ಚಿಕೊಂಡು, ಗಾಳಿಯನ್ನು ಬಾಚಿಕೊಂಡು
ಹಾರೋ ಕೊಕ್ಕರೆಯ ವೇಗವನ್ನು ಹೆಚ್ಚಿಸುತ್ತಾ
ಕಳಿಸುತ್ತದೆ ನಿನ್ನೆಡೆಗೆ, ನನ್ನ ಸೂರ್ಯನ ಉತ್ತರದಿಕ್ಕಿಗೆ.

ಈ ಕವಿತೆ ಕಟ್ಟುತ್ತಿದ್ದೇನೆ ನಾನು
ಕಾಗದದ ಮಡಿಕೆಗಳಿಂದ
ನಮ್ಮಿಬ್ಬರ ನಡುವಿನ ಋತುಗಳಂತರವನ್ನೇ ಮಡಿಸುತ್ತ

ಈ ಕವಿತೆಯೊಂದು ಕೊಕ್ಕರೆ.
ರೆಕ್ಕೆ ಬಿಚ್ಚಿದರೆ
ಕಾಗದ ಬರಿದೋ ಬರಿದು, ಶುದ್ಧ ಖಾಲಿ. ●

ಫೇಕು ವಿರುದ್ಧ ದಂಗೆ ಎದ್ದ ರೈತರು



ಮೋದಿಯ 'ಅಭಿವೃದ್ಧಿ' ಕುರಿತ ಕಥನಗಳೆಲ್ಲ ಬರೀ ಬುರುಡೆ ಎಂಬುದೀಗ ಜಗಜ್ಜಾಹೀರಾಗಿದೆ. ಗುಜರಾತ್‌ನಲ್ಲಿ 'ಅಭಿವೃದ್ಧಿ' ಆಗಿರುವುದು ಕೇವಲ ಅಂಬಾನಿ, ಅದಾನಿ, ಟಾಟಾರಂತಹ ದೊಡ್ಡ ದೊಡ್ಡ ಉದ್ಯಮಪತಿಗಳ ಸಂಪತ್ತು ಮಾತ್ರ; ಅಲ್ಲಿನ ಜನಸಾಮಾನ್ಯರ ಬದುಕು ಮೂರಾಬಟ್ಟೆಯಾಗಿದೆ ಎಂಬಿತ್ಯಾದಿ ವಾಸ್ತವಾಂಶಗಳೆಲ್ಲಾ ಒಂದೊಂದಾಗಿ ಹೊರಬಿದ್ದಿವೆ. ಗುಜರಾತಿ ರೈತರ ಸಂಕಷ್ಟಗಳಂತೂ ಹೇಳತೀರದಷ್ಟಿದೆ. ಅವರ ಫಲವತ್ತಾದ ಭೂಮಿಗಳನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಲಾಗುತ್ತಿದೆ. ಪ್ರತಿಭಟನಾ ಸಭೆ, ಸಮಾವೇಶಗಳಂತಹ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ರಾಜ್ಯದಾದ್ಯಂತ ಅಘೋಷಿತ ತುರ್ತು ಪರಿಸ್ಥಿತಿಯ ವಾತಾವರಣವಿದ್ದು ಹೆಚ್ಚಿನ ಕಡೆಗಳಲ್ಲಿ ವರ್ಷವಿಡೀ ಸೆಕ್ಷನ್ 144 ಜಾರಿಯಲ್ಲಿದೆ. ಇದಕ್ಕೆ ಹಲವಾರು ನಿದರ್ಶನಗಳನ್ನು ಕೊಡಬಹುದು.

ಸರ್ಕಾರ ಮಂಡಲ್-ಬೇಚರಜಿ ವಿಶೇಷ ಹೂಡಿಕೆ ವಲಯಕ್ಕಾಗಿ (ಎಸ್‌ಐಆರ್) ರೈತರ ಜಮೀನುಗಳನ್ನು ಕಿತ್ತುಕೊಳ್ಳತೊಡಗಿದಾಗ ಸ್ವಾಭಾವಿಕವಾಗಿಯೆ ಸ್ಥಳೀಯ ರೈತರು ಇದನ್ನು ವಿರೋಧಿಸಿದರು. ಗ್ರಾಮಸ್ಥರು ಒಟ್ಟಾಗಿ ಪ್ರತಿಭಟನೆ ಮಾಡಲು ಹೊರಟಾಗ ಅದಕ್ಕೆ ಅವಕಾಶವನ್ನೆ ನೀಡಲಾಗಿಲ್ಲ. ಅವರೆಲ್ಲರೂ ಪ್ರತಿಭಟನಾ ಸೂಚಕವಾಗಿ ಆಗಸ್ಟ್ 15, 2013ರಂದು ಧ್ವಜಾರೋಹಣ ಮಾಡಲು ಉದ್ದೇಶಿಸಿದ್ದರು. ಆದರೆ ಕೊನೆ ಗಳಿಗೆಯಲ್ಲಿ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಲಾಯಿತು.

ಮಾಲ್ಧಾರಿ ಜನ ಅಕ್ಟೋಬರ್ 23, 2013ರಂದು ಹನ್ಸಾಲ್‌ಪುರದಿಂದ ರಾಜಧಾನಿ ಗಾಂಧಿನಗರತನಕ ರ್‍ಯಾಲಿ ನಡೆಸಲು ಸಕಲ ಸಿದ್ಧತೆ ನಡೆಸಿದ್ದರು. ಆದರೆ ಪೊಲೀಸರು ರ್‍ಯಾಲಿಗೆ ಅವಕಾಶ ಕೊಟ್ಟಿಲ್ಲ. ಪಟ್ಟು ಬಿಡದ ಮಾಲ್ಧಾರಿಗಳು ಜನವರಿ 18, 2014ರಂದು ರ್‍ಯಾಲಿ ನಡೆಸಿಯೇ ಸಿದ್ಧವೆಂದು ಹೊರಟಾಗ ಪೊಲೀಸರು ಮೆರವಣಿಗೆಯನ್ನು ತಡೆದು ಲಾಠಿಚಾರ್ಜ್ ಮಾಡಿದರಲ್ಲದೆ ಅನೇಕ ಪ್ರತಿಭಟನಾಕಾರರ ವಿರುದ್ಧ ಕೇಸುಗಳನ್ನೂ ದಾಖಲಿಸಿದರು.

ಮುಖ್ಯಮಂತ್ರಿ ಕಾಡಾ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆಂದು ತಿಳಿದುಬಂದಾಗ ಅಲ್ಲಿನ ಆದಿವಾಸಿಗಳು ಪ್ರತಿಭಟನೆ ಆರಂಭಿಸಿದರು. ಆಗ ಅವರನ್ನೆಲ್ಲಾ ಬಂಧಿಸಿಟ್ಟ ಪೊಲೀಸರು ಮುಖ್ಯಮಂತ್ರಿ ಸ್ಥಳದಿಂದ ತೆರಳಿದ ಬಳಿಕವೆ ಅವರನ್ನು ಬಿಡುಗಡೆಗೊಳಿಸಿದರು.

ಧೊಲೆರಾ ಎಸ್‌ಐಆರ್ ಯೋಜನೆಯ ವ್ಯಾಪ್ತಿಯಡಿ ಬರುವ ರೈತರಲ್ಲಿ ಎಸ್‌ಐಆರ್ ಕಾಯ್ದೆ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಡಿಸೆಂಬರ್ 18, 2013ರಂದು ಮಾಹಿತಿ ಶಿಬಿರವೊಂದನ್ನು ನಡೆಸಲು ಮುಂದಾದಾಗ ಪೊಲೀಸರು ಹಲವಾರು ಬಾರಿ ತಡೆಯಲೆತ್ನಿಸಿದರು. ಧೊಲೆರಾ ಎಸ್‌ಐಆರ್ ವಿರುದ್ಧ ಅಂದೇ ನಡೆಸಲು ಉದ್ದೇಶಿಸಿದ್ದ ಯುವಜನರ ಬೈಕ್ ರ್‍ಯಾಲಿಗೆ ಅನುಮತಿ ನೀಡಲಿಲ್ಲ. ತರುವಾಯ ಜನವರಿ 3, 2014 ರಂದು ಧೊಲೆರಾ ಯೋಜನೆ ಬಗ್ಗೆ ಸಾರ್ವಜನಿಕ ಅಹವಾಲು ಸಭೆ ನಡೆಸಲಾಯಿತು. ಆ ಸಂದರ್ಭದಲ್ಲಿ ರೈತರು ತಮಗೆ ಈ ಯೋಜನೆ ಬೇಡ; ನರ್ಮದಾ ಅಣೆಕಟ್ಟಿನಿಂದ ನೀರು ಒದಗಿಸಬೇಕೆಂದು ಆಗ್ರಹಿಸಿದರು. ಮುಂದೆ ಹಕ್ಕೊತ್ತಾಯಗಳ ಮಂಡನೆಗಾಗಿ ಫೆಬ್ರವರಿ 9, 2014ರಂದು ಸಾಂಧಿದಾ ಗ್ರಾಮದಲ್ಲಿ ಮತ್ತೊಂದು ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳಲಾಯಿತಾದರೂ ಪೊಲೀಸರು ಅದಕ್ಕೂ ಅನುಮತಿ ನಿರಾಕರಿಸಿದರು.


ಈ ಎಲ್ಲಾ ವಿದ್ಯಮಾನಗಳನ್ನು ಗಮನಿಸಿದಾಗ ಗುಜರಾತ್‌ನಲ್ಲಿರುವುದು ಪ್ರಜಾಪ್ರಭುತ್ವವಲ್ಲ ಅಘೋಷಿತ ಸರ್ವಾಧಿಕಾರಿ ಆಡಳಿತ ಎನ್ನುವುದು ಸ್ಪಷ್ಟವಾಗುವುದಿಲ್ಲವೆ?

(Jamin Adhikar Andolan, Gujarat)

● ಸುರೇಶ್ ಭಟ್ ಬಾಕ್ರಬೈಲ್

ಬೂಸಿ ಬಸ್ಯ... ಮೋದಿ!

19




ಸುಷ್ಮಾ ಎಂಬ ಕುಮಾತೆಯೂ... ತೇಜಸ್ವಿನಿ ಎಂಬ ದಿವಂಗತ ಕಾಮ್ರೇಡೂ...

ಮಾತುಮಾತಿಗೆ ನಮ್ಮದು ತತ್ವಾದರ್ಶಗಳ ಪಾರ್ಟಿ ಎಂದು ತಮ್ಮನ್ನು ಕೃತಕ ಮಾತಿನ ಮಂಟಪದಲ್ಲಿ ಬಿಂಬಿಸಿಕೊಂಡು ಜನರನ್ನು ವಂಚಿಸುತ್ತಿರುವ ಬಿಜೆಪಿಯಲ್ಲಿ ಅಧಿಕಾರಕ್ಕಾಗಿ ಏನುಬೇಕಾದರೂ ನಡೆಯಬಹುದೆನ್ನುವುದು ಸಾಬೀತಾಗಿದೆ. ಒಂದುಕಡೆ ಮೋದಿಯ ಭ್ರಷ್ಟಾಚಾರದ ಭಜನೆ ನಡೆಸುತ್ತಲೇ ಇನ್ನೊಂದು ಕಡೆ ಮಾನ ಮರ್ಯಾದೆ ಬಿಟ್ಟು ಪರಮಭ್ರಷ್ಟ ಯಡ್ಡಿ, ಶ್ರೀರಾಮುಲುಗಳ ಪಾದಕ್ಕೆ ಸಾರಾಸಗಟಾಗಿ ಬಿಜೆಪಿಯ ನಾಯಕರು ಮಂಡಿಯೂರಿರುವುದೇ ಇದಕ್ಕೆ ಸಾಕ್ಷಿ.



ಹಾಗೆಯೇ ಒಂದು ಕಾಲದ ಕಾಮ್ರೇಡ್ ಕ್ರಾಂತಿಕಾರಿ ಪತ್ರಕರ್ತೆ ತೇಜಸ್ವಿನಿ ಈಗ ಕಾಂಗ್ರೆಸ್ ಗೇಟು ಹಾರಿ ಕೇಸರಿ ಶಾಲು ಹೊದ್ದು ಮೋದಿ ಭಜನೆ



ಶುರುಹಚ್ಚಿಕೊಂಡಿದ್ದಾಳೆ. ಇವರಿಗೆಲ್ಲ ಜನ ಚೆನ್ನಾಗಿ ಬುದ್ಧಿ ಕಲಿಸಬೇಕಿದೆ.

ಕಳೆದ ಸಂಚಿಕೆಯಲ್ಲಿ ಶ್ರೀನಿವಾಸ ಕಾರ್ಕಳ ಅವರು ತಮ್ಮ ಲೇಖನದಲ್ಲಿ ಟಿವಿ ಹೊಕ್ಕ ಜ್ಯೋತಿಷಿಗಳ ಖುಲಾಯಿಸುವ ಅದೃಷ್ಟದ ಬಗ್ಗೆ ಬರೆದಿದ್ದಾರೆ. ಇದು ನೂರಕ್ಕೆ ನೂರರಷ್ಟು ಸತ್ಯ. ಸಂತೋಷ್ ಎನ್ನುವ ಚಿಲ್ಲರೆ ಆಯುರ್ವೇದ ವೈದ್ಯನೊಬ್ಬ ಟಿವಿ ಹೊಕ್ಕಿದ್ದೇ ಹೊಕ್ಕಿದ್ದು ಈಗಾತ ನಾಡಿನ ಖ್ಯಾತ ಸ್ವಾಮಿ. ಈತನ ಸ್ವಂತ ಕೈಯಿಂದ (?) ತಯಾರಿಸಿದ ಕೇಶತೈಲದ ಜಾಹೀರಾತಿನಲ್ಲಿ ಕೇಸರಿಧಾರಿಯಾಗಿ ಆಶೀರ್ವದಿಸುವ ಭಂಗಿಯ ಈತನ ಫೋಟೊ ತುಂಬಾನೇ ನಾಟಕೀಯತೆಯಿಂದ ಕೂಡಿದೆ. ಇವರ್‍ಯಾರೂ ಆಯುರ್ವೇದ-ಜ್ಯೋತಿಷ್ಯದಲ್ಲಿ ಅಂಥಾ ಅನುಭವಗಳೇನಲ್ಲ. ಶ್ರೀನಿವಾಸರು ಅಂದಂತೆ ಟು ಪ್ಲಸ್ ಟು ಅಂದರೆ ನಾಲ್ಕೇ ಅನ್ನುವ ರೀತಿ ಅತ್ಯಂತ ಸ್ಪಷ್ಟ ಅನ್ನುವಂತೆ ಬೋಧಿಸಿ ಜನರನ್ನು ಮರಳುಮಾಡುವ ಕಲೆಯೇ ಇವರ ಮುಖ್ಯ ಬಂಡ-ವಾಳ.

ಶ್ರೀನಿವಾಸರು ಕಳೆದ 2009ರ ಲೋಕಸಭಾ ಚುನಾವಣೆಯ ಭವಿಷ್ಯವನ್ನು 'ಇದಮಿತ್ಥಂ' ಎಂದು ಭವಿಷ್ಯ ನುಡಿದಿದ್ದ ಮಹಾನ್ ದಿವ್ಯಚಕ್ಷು ಭವಿಷ್ಯಕಾರರ ಹಣೆಬರಹವನ್ನೇ ಜಾಲಾಡಿದ್ದು ಸೂಪರ್ ಬೊಂಬಾಟಾಗಿತ್ತು. ಶ್ರೀನಿವಾಸರಂತಹ ಬೆರಳೆಣಿಕೆಯ ಮಂದಿ ಇಂತವರನ್ನು ಟೀಕಿಸಬಹುದು. ಆದರೆ ಇವರನ್ನೇ ದೇವರೆಂದು ಭಾವಿಸುವ ಸಹಸ್ರಾರು ಮಂದಿ ಇವರ ಜೊತೆಗೆ ಯಾವತ್ತಿಗೂ ಇರುತ್ತಾರೆ ಎಂಬುದು ವಾಸ್ತವ.


- ಶಶಿ ಪುತ್ತೂರು, ದಕ

1700 ವರ್ಷಗಳ ಹಿಂದೆ ಕರಾವಳಿಯಲ್ಲಿ ಬ್ರಾಹ್ಮಣರೇ ಇರಲಿಲ್ಲ!

ಶಂಕರಾಚಾರ್ಯರ ಸೌಂದರ್ಯ ಲಹರಿ ಓದಿದ ಮೇಲೆ "ಮಾನವನ ಆಲೋಚನೆಯ ಕೇಂದ್ರ ಬಿಂದುವೇ ಸೆಕ್ಸ್" - ಎಂದು ಆಧುನಿಕ ಮನೋವಿಜ್ಞಾನದ ಪಿತಾಮಹ ಎನಿಸಿರುವ ಸಿಗ್ಮಂಡ್ ಫ್ರಾಯ್ಡ್ ಹೇಳಿದ್ದು ಅಕ್ಷರಶಃ ನಿಜ ಎನಿಸುತ್ತದೆ. ಫ್ರಾಯ್ಡ್ ಹೇಳಿದ್ದು ಜಗತ್ತಿನ ಎಲ್ಲಾ ಜನಾಂಗದವರಿಗೆ ಅನ್ವಯವಾಗುತ್ತದೋ ಇಲ್ಲವೋ ಆದರೆ ಭಾರತೀಯ ಪುರಾಣಗಳಿಗೆ ಇದು ತುಂಬಾ ಸರಿಯಾಗಿ ಅನ್ವಯವಾಗುತ್ತದೆ ಎಂಬುದು ಯೋಗೇಶ್ ಮಾಸ್ಟರ್ ಅವರ ಪುರಾಣದ-ಹೂರಣ ಅಂಕಣ ಓದುವಾಗ ಮನದಟ್ಟಾಗುತ್ತದೆ. ಯಾವುದೇ ಭಾರತೀಯ ಪುರಾಣವನ್ನೇ ಓದಿ ನೋಡಿ. ಅದರಲ್ಲಿ ಕಾಮ, ಮೋಹ, ಸಂಭೋಗ, ಕುಚ, ಲಿಂಗ, ನಿತಂಭ, ಯೋನಿ, ಶಿಶ್ನ, ವೀರ್ಯಾಪಾತ, ಗಂಧರ್ವ ವಿವಾಹ, ರಾಸಲೀಲೆ ಇಂತಹ ತಾಮಸಿಕ ಶಬ್ದಗಳು ಧಾರಾಳವಾಗಿ ತುಂಬಿವೆ. ಭಸ್ಮಾಸುರ ಮೋಹಿನಿ ಅಥವಾ ದೀರ್ಘಜಿಹ್ವೆಯ ಕಥೆಯನ್ನು ವಿಶ್ಲೇಷಿಸಿದರೆ ಸಾಕು ಸ್ವತಃ ಪುರಾಣಕರ್ತರೇ ವಿಕೃತ ಲೈಂಗಿಕ ಆಲೋಚನೆಗಳನ್ನು ಹೊಂದಿದ್ದರು ಎಂಬುದು ಅರ್ಥವಾಗುತ್ತದೆ. ರೇಣುಕಾ ಎಲ್ಲಮ್ಮ ಎಂಬ ದೇವರ ಹೆಸರಲ್ಲಿ ದೇವದಾಸಿ ಪದ್ಧತಿ ಎಂಬ ಧಾರ್ಮಿಕ ವೇಶ್ಯಾವಾಟಿಕೆ ಶುರುವಾಗಿದ್ದೂ ಭಾರತದಲ್ಲಿಯೇ ತಾನೇ. ನಮ್ಮ ಸ್ವಂತ ಜಾತಿ-ಧರ್ಮ-ಭಾಷೆ-ನಾಡಿನ ಪರವಾಗಿ ಇರುವ ಮೌಢ್ಯಗಳನ್ನು ನಾವು ಪುರಾಣ-ಶಾಸ್ತ್ರ-ಸಂಪ್ರದಾಯದ ಹೆಸರಲ್ಲಿ ಕುರುಡು ಅಭಿಮಾನದಿಂದ ಸಮರ್ಥಿಸುತ್ತೇವೆಯೇ ಹೊರತು ಅವನ್ನೆಲ್ಲ ವಿಮರ್ಶಿಸುವ ಗೋಜಿಗೆ ಹೋಗುವುದಿಲ್ಲ. ವೆಂಡಿ ಡೋನಿಗರ್‌ರಂತಹ ಯಾರಾದರೂ ವಿದೇಶಿಯರು ವಿಶ್ಲೇಷಿಸಿದರೂ ಸಹ ಅವರೊಟ್ಟಿಗೆ ಜಗಳಕ್ಕೆ ಇಳಿಯುತ್ತೇವೆ ಅಥವಾ ಅವರನ್ನು ಲೈಂಗಿಕಾಸಕ್ತ ವಿದೇಶಿ ಮಿಷಿನರಿಗಳ ಏಜಂಟರು ಎಂದು ನಿಂದಿಸುತ್ತೇವೆ.

ನಮ್ಮ ಕರಾವಳಿಯವರು ಮಾತುಮಾತಿಗೆ ತಮ್ಮದು ಪರಶುರಾಮ ಸೃಷ್ಟಿ ಎಂದು ಹೆಮ್ಮೆ ಪಡುತ್ತಾರೆ. ಭಾರ್ಗವ ಪರಶುರಾಮ ಎಂಬ ಐತಿಹಾಸಿಕ ವ್ಯಕ್ತಿ ಇದ್ದದ್ದು ಕೇವಲ ಐದು ಸಾವಿರ ವರ್ಷಗಳ ಹಿಂದೆ. ಆದರೆ ವಿಜ್ಞಾನಿಗಳ ಸಂಶೋಧನೆಯಿಂದ ತಿಳಿದುಬಂದಿದ್ದೇನೆಂದರೆ 4 ರಿಂದ 5 ಕೋಟಿ ವರ್ಷಗಳ ಹಿಂದೆಯೇ ಖಂಡಗಳ ಟೆಕ್ಟೋನಿಕ್ ಚಲನೆಯಿಂದಾಗಿ ಆಫ್ರಿಕಾದಿಂದ ತುಂಡಾಗಿ ಸರಿದುಬಂದ ಭೂಭಾಗಗಳ ಜೋಡಣೆಯಿಂದ ನಮ್ಮ ಕರಾವಳಿ ಮತ್ತೂ ಸಹ್ಯಾದ್ರಿ ಪರ್ವತ ಉಂಟಾಯಿತು. ಇದನ್ನು ಕಂಪ್ಯೂಟರ್ ಗ್ರಾಫಿಕ್ಸ್ ಮೂಲಕ ಇಂಟರ್ನೆಟ್ ವಿಕಿಪೀಡಿಯಾದಲ್ಲಿ ವಿವರಿಸಲಾಗಿದೆ (ಗೊಂಡ್ವಾನಾ ಲ್ಯಾಂಡ್. ಅಥವಾ ಕಾಂಟಿನೆಂಟಲ್ ಡ್ರಿಫ್ಟ್ - ಎಂದು ಗೂಗಲ್-ಸರ್ಚ್‌ನಲ್ಲಿ ಬರೆದು ಹುಡುಕಬಹುದು). ಅದೇ ಸಮಯಕ್ಕೆ ಆಫ್ರಿಕಾದಿಂದ ತುಂಡಾಗಿ ಸರಿದುಬಂದ ಇನ್ನೊಂದು ಭೂಭಾಗ ನಮ್ಮ ದೇಶದ ದಕ್ಷಿಣ ತುದಿಗೆ ತಾಗಿ ನಿಂತಾಗ ಉಂಟಾಗಿದ್ದೇ ಶ್ರೀಲಂಕಾ ದ್ವೀಪ ಮತ್ತೂ ಸಿಂಹಳ-ಭಾರತದ ನಡುವೆ ಒಂದು ಪ್ರಾಕೃತಿಕ ಸೇತುವೆ (ಆಡಮ್ಸ್ ಬ್ರಿಡ್ಜ್ - ರಾಮ ಸೇತು). ಕಾರ್ಬನ್ ಡೇಟಿಂಗಿನಿಂದ ಆಡಮ್ಸ್ ಬ್ರಿಡ್ಜ್ ನಾಲ್ಕು ಕೋಟಿ ವರ್ಷ ಹಳೆಯದೆಂದು ಕಂಡುಬಂದಿದೆ. ಆಗ ಮನುಷ್ಯ ಜಾತಿ ಇರದ್ದರಿಂದ ಬಹುಶಃ ಡೈನೋಸಾರುಗಳು ಈ ಸೇತುವೆಯ ಮೇಲೆ ಮೊಟ್ಟ ಮೊದಲಿಗೆ ನಡೆದಾಡಿರಬಹುದು ಎನ್ನುತ್ತಾರೆ ಸಂಶೋಧಕರು. ಮನುಷ್ಯ ಜಾತಿ ಅಂಕುರವಾಗಿದ್ದು ಕೇವಲ 35 ಲಕ್ಷ ವರ್ಷಗಳ ಹಿಂದೆ ಅಷ್ಟೇ. ಮನುಷ್ಯ ನಾಗರಿಕತೆಗೆ ಕಾಲಿಟ್ಟ ಮೇಲೆ ಸಮುದ್ರ ಕೊರೆತದಿಂದ ಈ ನೈಸರ್ಗಿಕ ಸೇತುವೆಗೆ ಧಕ್ಕೆಯಾದಾಗಲೆಲ್ಲಾ ಅದನ್ನು ಆಗಿನ ರಾಜರು ರಿಪೇರಿ ಮಾಡಿಸುತ್ತಿದ್ದಿರಬೇಕು. ಅಂತಹ ಒಂದು ರಿಪೇರಿ ರಾಮಾಯಣ ಕಾಲದಲ್ಲೂ ನಡೆದಿರಬಹುದು. ಅದನ್ನೇ ವಾಲ್ಮೀಕಿ ಕವಿ ಉತ್ಪ್ರೇಕ್ಷಿಸಿ ಮನುಷ್ಯರು ಹಾಗೂ ಕಪಿಗಳು ಕೂಡಿ ಸಮುದ್ರಕ್ಕೆನೇ ಸೇತುವೆ ಕಟ್ಟಿದರು ಎಂದು ಬರೆದಿರಬೇಕು. ಪ್ರತಿಯೊಂದನ್ನೂ ಉತ್ಪ್ರೇಕ್ಷಿಸಿ ಲಯಬದ್ಧವಾಗಿ ಬರೆಯುವವನೇ ಹಿಂದಿನ ಕಾಲದಲ್ಲಿ ಕವಿ ಎನಿಸಿಕೊಳ್ಳುತ್ತಿದ್ದ. ಇಂತಹ ಉತ್ಪ್ರೇಕ್ಷೆಯಿಂದಲೇ ನಮ್ಮ ಅವಾಸ್ತವಿಕ ಪೌರಾಣಿಕ ಕಥೆಗಳು ಹುಟ್ಟಿಕೊಂಡಿದ್ದು ತಾನೇ.

ಹಿಂದಿನ ವಾರದ ಸಂಚಿಕೆಯಲ್ಲಿ ಯೋಗೇಶ್ ಮಾಸ್ಟರ್ ವಿಶ್ಲೇಷಿಸಿರುವ ಎಲ್ಲಮ್ಮ-ಪರಶುರಾಮ ಪುರಾಣ ಓದುವಾಗ ಹುಟ್ಟಿದ ಅನಿಸಿಕೆಗಳು ಇವು: ಪರಶುರಾಮನು 21 ಸಾರಿ ಪ್ರಪಂಚದ ಸುತ್ತು ಹೊಡೆದು ಎಲ್ಲಾ ಕ್ಷತ್ರಿಯರನ್ನು ಸಂಪೂರ್ಣ ನಿರ್ನಾಮ ಮಾಡಿದ್ದನಂತೆ. ಹಾಗಿದ್ದರೆ ಪರಶುರಾಮನ ಅಹಂಕಾರ ಇಳಿಸಿದ ಕ್ಷತ್ರಿಯನಾದ ಶ್ರೀರಾಮನ ಕುಟುಂಬದ ಹಿರಿಯರು ಪರಶುರಾಮನ ಕೈಯಿಂದ ಸಾಯದೇ ಉಳಿದುಕೊಂಡಿದ್ದು ಹೇಗೆ? ಆಗ ಪ್ರಪಂಚ ಎಂದರೆ ಕೇವಲ ಭಾರತ ಮಾತ್ರ ಆಗಿತ್ತೇ? ಪರಶುರಾಮನು ನಮ್ಮ ಕರಾವಳಿ ಸೃಷ್ಟಿಸಿದ ನಂತರ ತನ್ನ ಈ ಹೊಸ ಸೃಷ್ಟಿಯ ಭೂಮಿಯನ್ನು ಸಂಪೂರ್ಣವಾಗಿ ಕೇವಲ ಬ್ರಾಹ್ಮಣರಿಗೆ ದಾನ ಮಾಡಿ ಹಿಮಾಲಯಕ್ಕೆ ಹೋದ ಎನ್ನುತ್ತವೆ ಭಾರ್ಗವ ಪುರಾಣ. ಹಾಗಿದ್ದರೆ ಇತಿಹಾಸ ಕಾಲದಿಂದಲೂ ಇಲ್ಲಿಯ ಒಟ್ಟು ಭೂಮಿಯಲ್ಲಿ





...ನ್ಸ್ ಕಂ ಲವ್ ಸಬ್ಜೆಕ್ಟ್ ಇರುವ ಸಿನಿಮಾ ಮಾಡಬೇಕು ಅಂತ ಆಸೆ ಇದೆ

ಸಂದರ್ಶನ

'ಸಿರಿವಂತ', 'ಚೆಲುವಿನ ಚಿತ್ತಾರ', 'ಸುಂಟರಗಾಳಿ', ...ದ ಚಂದ್ರಮ', 'ಅಂಭಾರಿ', ...ಫ್ಟ್‌ವೇರ್ ಗಂಡ' ಸೇರಿದಂತೆ ...ಸುಮಾರು 200ಕ್ಕೂ ಹೆಚ್ಚು ...ತ್ರಗಳಿಗೆ ನೃತ್ಯ ಸಂಯೋಜಿಸಿ ...ರುವ ಹಾಗೂ ಸ್ವತಃ ಎರಡು ...ನ್ಸ್ ಇನ್‌ಸ್ಟಿಟ್ಯೂಟ್‌ಗಳನ್ನೂ ...ಸುತ್ತಿರುವ ನೃತ್ಯ ನಿರ್ದೇಶಕ ...ಲೂರ್ ಶ್ರೀನಿವಾಸ್ ಇಲ್ಲಿ ಮಾತಾಡಿದ್ದಾರೆ.

...ಮ್ಮ ಹುಟ್ಟೂರು, ಹೆತ್ತವರು, ವಿದ್ಯಾಭ್ಯಾಸಗಳ ...ಳ್ತೀರಾ?

...ಬೂರು ಸಮೀಪದ ಮಲ್ಲಿಯಪ್ಪನಹಳ್ಳಿ ನನ್ನ ...ು. ತಂದೆ ಕೃಷಿಕರು. ತಾಯಿ ಗೃಹಿಣಿ. ನಾನೋದಿದ್ದು

...ಬಾಲ್ಯಕಾಲದಲ್ಲೇ ನೃತ್ಯದೆಡೆಗೆ ನಿಮ್ಮ ಆಸಕ್ತಿ ಕೆರಳಿದ್ದು

ನಾನು ಏಳನೇ ತರಗತಿಯಲ್ಲಿ ಓದುತ್ತಿದ್ದಾಗಲೇ ನೃತ್ಯದ ಕಡೆ ಆಸಕ್ತಿ ಕೆರಳಿತ್ತು, ಆ ಕಾಲದಲ್ಲಿ ನಾನು ಹೆಚ್ಚು ಹೆಚ್ಚು ಸಿನಿಮಾ ನೋಡುತ್ತಿದ್ದೆ. ನನ್ನೂರು ಆಂಧ್ರಪ್ರದೇಶದ ಗಡಿಯಲ್ಲಿರುವುದರಿಂದ ಕನ್ನಡದಂತೆಯೇ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ತೆಲುಗು ಸಿನಿಮಾಗಳು ನನ್ನನ್ನು ಆಕರ್ಷಿಸಿದ್ದವು. ಅದರಲ್ಲೂ ಚಿರಂಜೀವಿ ಸಿನಿಮಾಗಳು, ಅವರ ಡಾನ್ಸ್ ನನ್ನನ್ನು ಮೋಡಿಗೊಳಿಸುತ್ತಿತ್ತು, ಚಿರಂಜೀವಿ ತರಹವೇ ನಾನೂ ಕೂಡ ಡಾನ್ಸ್ ಮಾಡಲು ಯತ್ನಿಸುತ್ತಿದ್ದೆ. 'ಮುಠಾಮೇಸ್ತ್ರಿ' ಚಿತ್ರದಲ್ಲಿನ ಅವರ 'ಕ್ಯಾಮೆಲ್ ಡಾನ್ಸ್' ನನಗೆ ಹೆಚ್ಚು ಪ್ರಿಯ. ಆ ದಿನಗಳಲ್ಲಿ ಎಲ್ಲಿ ಮೈಕ್ ಸೆಟ್ ಹಾಕಿದರೂ, ಅಲ್ಲಿ ಹೋಗಿ ಈ ಕ್ಯಾಮೆಲ್ ಡಾನ್ಸ್ ಮಾಡ್ತಿದ್ದೆ. ನಿಜ ಹೇಳಬೇಕೆಂದರೆ, ಗುರುತು ಪರಿಚಯ ಇಲ್ಲದಿದ್ದರೂ ಮೈಕ್ ಸೆಟ್ ಹಾಕಿರುತ್ತಾರೆ ಎಂಬ ಒಂದೇ ಕಾರಣಕ್ಕೆ ಯಾರ್‍ಯಾರದೋ ಮದುವೆ ಮನೆಗಳನ್ನು ಹೊಕ್ಕಿ ಅಲ್ಲೇ ಎರಡು ಮೂರು ದಿನ ಇದ್ದು ಬಿಡುತ್ತಿದ್ದೆ, ಅಲ್ಲಿ ಡಾನ್ಸ್ ಮಾಡುತ್ತಿದ್ದೆ. ಹಾಗೇನೆ, ಆಗೆಲ್ಲಾ ಹೆಚ್ಚೇನೂ ಟಿವಿ ಚಾನಲ್‌ಗಳು ಇಲ್ಲದಿದ್ದುದರಿಂದ, ದೂರದರ್ಶನದಲ್ಲಿ ವಾರಕ್ಕೊಮ್ಮೆ ಬರುತ್ತಿದ್ದ 'ಚಿತ್ರಮಂಜರಿ'ಗಾಗಿ ಕಾದು ಕೂರುತ್ತಿದ್ದೆ. ಅಲ್ಲಿ ಪ್ರಸಾರವಾಗುತ್ತಿದ್ದ ಹಾಡುಗಳಿಗಾಗಿ ಕಾತರಿಸುತ್ತಿದ್ದೆ. ಆ ಹಾಡುಗಳು, ಅವುಗಳಲ್ಲಿನ ನೃತ್ಯವನ್ನು ಸಾಧ್ಯವಾದಷ್ಟು ಗ್ರಹಿಸಿ ನಾನೂ ಕೂಡ ಅದೇ ರೀತಿ ಡಾನ್ಸ್ ಮಾಡಲು ಪ್ರಯತ್ನಿಸುತ್ತಿದ್ದೆ. ಸ್ಕೂಲ್ ಡೇಗಳಲ್ಲಿ ಆ ಹಾಡುಗಳ ಕ್ಯಾಸೆಟ್ ತರಿಸಿ, ಹಾಕಿಕೊಂಡು ಡಾನ್ಸ್ ಮಾಡುತ್ತಿದ್ದೆ. ಇನ್ನು ಕಾಲೇಜಿಗೆ ಬರುವಷ್ಟರಲ್ಲಿ ಡಾನ್ಸ್ ಬಗ್ಗೆ ತೀರಾ ಆಸಕ್ತಿ ಹುಟ್ಟಿಕೊಂಡಿತ್ತು. ಅದು ಎಷ್ಟರಮಟ್ಟಿಗೆಂದರೆ 'ಒಂದು ಸೈಕಲ್ಲು, ಒಂದು ಹಾರನ್ ಕೊಡಿಸಿಬಿಡಿ, ಇವನು ಊರೂರು ತಿರುಗುತ್ತ ಡಾನ್ಸ್ ಮಾಡ್ತಿರ್ಲಿ' ಅಂತ ಸಂಬಂಧಿಕರು ನನ್ನ ಹೆತ್ತವರ ಬಳಿ ಹೇಳಿಕೊಂಡು ನನ್ನನ್ನು, ನನ್ನ ಡಾನ್ಸ್ ಬಗೆಗಿನ ಹುಚ್ಚನ್ನು ಆಡಿಕೊಳ್ಳುವಷ್ಟರಮಟ್ಟಿಗೆ!

** ನಿಮ್ಮ ಮೇಲೆ ಪ್ರಭುದೇವ ಅವರ ಪ್ರಭಾವವೂ ಇದೆಯೆಂದು ಕೇಳಿದ್ದೇನೆ. ಆ ಪ್ರಭಾವ ಯಾವ ವಯಸ್ಸಿನಲ್ಲಿ ನಿಮ್ಮ ಮೇಲೆ ಬೀರಿದ್ದು?*

ಪ್ರಭುದೇವ ನನಗೆ ಮೊದಲಿನಿಂದಲೂ ಫೇವರಿಟ್ ಡಾನ್ಸರ್ ಕಂ ಡಾನ್ಸ್ ಮಾಸ್ಟರ್. ಅವರ 'ಚುಕುಬುಕು ಚುಕುಬುಕು ರೈಲೇ' ಹಾಡು ನನಗೆ ತುಂಬಾ ಇಷ್ಟ. ಆ ಹಾಡಿನಲ್ಲಿನ ಅವರ ಬಾಡಿ ಲಾಂಗ್ವೇಜ್, ಆ ಹಾಡನ್ನು ಅವರು ಕಂಪೋಸ್ ಮಾಡಿರುವಲ್ಲಿನ ಕಲಾತ್ಮಕತೆ, ಕಿಕ್ ಎಲ್ಲವೂ ಇಷ್ಟವಾಗಿದ್ದವು. ಹಾಗಾಗಿ ನಾನು ಡಾನ್ಸ್ ಮಾಡುವಾಗ ಪ್ರಭುದೇವರನ್ನು ಇಮಿಟೇಟ್ ಮಾಡ್ತಿದ್ದೆ, ಚಿರಂಜೀವಿ ನಂತರ ನನ್ನನ್ನು ಕಾಡಿದ ಅದ್ಭುತ ಡಾನ್ಸರ್ ಅಂದರೆ ಪ್ರಭುದೇವ.


** ನೀವು ಶಾಸ್ತ್ರೀಯವಾಗಿ ಡಾನ್ಸ್ ಕಲಿತಿದ್ದು ಉಂಟಾ? ಡಾನ್ಸ್‌ಗೆ ಸಂಬಂಧಿಸಿದಂತೆ ಏನಾದ್ರೂ ಕೋರ್ಸ್ ಮಾಡಿದ್ದುಂಟಾ?*

ಪಿಯುಸಿ ಮುಗಿಯುತ್ತಿದ್ದಂತೆಯೇ ಚೆನ್ನೈಗೆ ಹೋದೆ. ಅಲ್ಲಿ ಮೂರು ವರ್ಷಗಳ ಡಿ.ಡಿ.ಎಂ.ಎಫ್.ಎ (ಡಿಪ್ಲೋಮಾ ಅಂಡ್ ಡ್ರಾಮಾ ಮಾರ್ಡನ್ ಫಿಲಂ ಆಕ್ಟಿವಿಟಿ) ಕೋರ್ಸ್ ಮುಗಿಸಿದೆ. ರಘುರಾಮ್ ಎನ್ನುವವರು ಅಲ್ಲಿ ನನ್ನ ಗುರುಗಳಾಗಿದ್ದರು. ಹೀರೋಯಿನ್ ಗಾಯತ್ರಿ ಇದ್ದಾರಲ್ಲಾ ಅವರ ತಂದೆಯೇ ರಘುರಾಮ್.

ಚೆನ್ನೈಯಲ್ಲಿ ಆಗ ನಾನು ಉಳಿದುಕೊಂಡಿದ್ದುದ್ದು ಬೃಂದಾ ಮಾಸ್ಟರ್ ಮನೆಯಲ್ಲಿ, ಚೆನ್ನೈ ದಿನಗಳಲ್ಲಿ ತುಂಬಾ ಪ್ರೊಫೆಶನಲ್ ಆಗಿ ಡಾನ್ಸ್ ಕಲಿಯಲು ಸಾಧ್ಯವಾಯಿತು. ಬೆಳಗ್ಗೆ 3-4 ಗಂಟೆ, ಸಂಜೆ 3-4 ಗಂಟೆಗಳ ಕಾಲ ಪ್ರಾಕ್ಟೀಸ್ ಮಾಡಿಸ್ತಿದ್ರು. ಅಲ್ಲಿಗೆ, ತಮಿಳು ನಟರಾದ ಪ್ರಶಾಂತ್ ಕೂಡ ಡಾನ್ಸ್ ಕಲಿಯಲು ಬರ್ತಿದ್ರು. ಅದೇ ರೀತಿ ಖುಷ್ಬೂ, ದೇವಯಾನಿ, ರಾಶಿ, ರಂಭಾ ಕೂಡ ಬರ್ತಿದ್ರು. ಚೆನ್ನೈನಲ್ಲಿ ಮೂರು ವರ್ಷಗಳ ಕೋರ್ಸ್ ಮುಗಿದನಂತರ ಬೆಂಗಳೂರಿಗೆ ಬಂದು 'ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್' ಸೇರಿಕೊಂಡೆ. ಅಲ್ಲಿ ಒಂದು ವರ್ಷದ ಡಿ.ಎಫ್.ಎ. (ಡಿಪ್ಲೋಮಾ ಇನ್ ಫಿಲಂ ಆಕ್ಟಿಂಗ್) ಕೋರ್ಸ್ ಮಾಡಿದೆ.

** ನೀವು ಚಿತ್ರರಂಗ ಪ್ರವೇಶಿಸಿದ್ದು ಹೇಗೆ?*


ನಾನು ಚಿತ್ರರಂಗದಲ್ಲಿ ಮೊದಲಿಗೆ ಗ್ರೂಪ್ ಡಾನ್ಸರ್ ಆಗಿ ಕೆಲಸ ಆರಂಭಿಸಿದೆ. ನೃತ್ಯ ನಿರ್ದೇಶಕರಾದ ಪ್ರಸಾದ್, ಲಾರೆನ್ಸ್, ಚಿನ್ನಿಪ್ರಕಾಶ್, ಸಂಪತ್ ರಾಜ್, ದೇವ ಸಂಪತ್, ಪ್ರದೀಪ್ ಅಂತೋಣಿ, ಮದನ್, ತಾರಾ, ಶಿವಶಂಕರ್ ಸೇರಿದಂತೆ ಅನೇಕರ ಬಳಿ ಗ್ರೂಪ್ ಡಾನ್ಸರ್ ಆಗಿ ವರ್ಕ್



ಮಾಡಿದೆ. ಶ್ರೀ ಮಂಜುನಾಥ, ಯುವರಾಜ, ಸೊಗಸುಗಾರ, ಗಲಾಟೆ ಅಳಿಯಂದ್ರು ಒಳಗೊಂಡಂತೆ ಅನೇಕ ಚಿತ್ರಗಳಿಗೆ ಗ್ರೂಪ್ ಡಾನ್ಸರ್ ಆಗಿ ಕೆಲಸ ಮಾಡಿದೆ.

** ನೀವು ಸ್ವತಂತ್ರ ನೃತ್ಯ ನಿರ್ದೇಶಕರಾಗಿ ಕೆಲಸ ಮಾಡಿದ ಮೊದಲ ಸಿನಿಮಾ ಯಾವುದು? ಆ ಅವಕಾಶ ಹೇಗೆ ಬಂತು?*

ವಿಜಯ್ ರಾಘವೇಂದ್ರ-ರಾಧಿಕಾ ಜೋಡಿ ಅಭಿನಯಿಸಿದ್ದ 'ರೋಮಿಯೋ ಜೂಲಿಯೆಟ್' ನೃತ್ಯ ನಿರ್ದೇಶಕನಾಗಿ ನನ್ನ ಮೊದಲ ಸಿನಿಮಾ. ಆ ಅವಕಾಶ ನೇರವಾಗಿ ನಿರ್ಮಾಪಕ ಶಿಲ್ಪಾ ಶ್ರೀನಿವಾಸ್ ಅವರಿಂದ



ಬಂದಿತ್ತು.

** ನೀವು ಈವರೆಗೆ ಸ್ವತಂತ್ರವಾಗಿ ನೃತ್ಯ ನಿರ್ದೇಶನ ಮಾಡಿರುವ ಒಂದಿಷ್ಟು ಸಿನಿಮಾಗಳನ್ನು ಹೆಸರಿಸುತ್ತೀರಾ?*

ಸಿರಿವಂತ, ಚೆಲುವಿನ ಚಿತ್ತಾರ, ಸುಂಟರಗಾಳಿ, ದತ್ತ ತಂಗಿಗಾಗಿ, ಚಂಡ, ತಾಕತ್, ಚೈತ್ರದ ಚಂದ್ರಮ, ಹನಿಮೂನ್ ಎಕ್ಸ್‌ಪ್ರೆಸ್, ಪೂಜಾರಿ, ಅಂಬಾರಿ, ಕಾಮಣ್ಣನ ಮಕ್ಕಳು, ಕೂಲ್ ಗಣೇಶ, ತಾಯಿಯ ಮಡಿಲು, ಗಂಡನ ಮನೆ, ಮಹಾ ಕಾಳಿ, ಸಾಫ್ಟ್‌ವೇರ್ ಗಂಡ ಸೇರಿದಂತೆ ಸುಮಾರು ಇನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ನೃತ್ಯ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಹಾಗೇನೆ 'ಕೂಟು' ಎನ್ನುವ ಒಂದು ಮಲಯಾಳಂ ಚಿತ್ರಕ್ಕೂ ಕೊರಿಯೋಗ್ರಫಿ ಮಾಡಿದ್ದೆ, ಆ ಚಿತ್ರದಲ್ಲಿ ಶಾಲಿನಿ, ರಿಚರ್ಡ್, ಅರವಿಂದ್ ನಟಿಸಿದ್ದರು.

** ಒಂದು ಹಾಡಿಗೆ ನೃತ್ಯ ನಿರ್ದೇಶನ ಮಾಡಬೇಕಾಗಿ ಬಂದಾಗ ಹೇಗೆ ತಯಾರಿ ನಡೆಸಿಕೊಳ್ತೀರಿ?*

ಒಬ್ಬ ನೃತ್ಯ ನಿರ್ದೇಶಕನಿಂದ ಹಾಡು ಏನು ಡಿಮ್ಯಾಂಡ್ ಮಾಡುತ್ತೋ ಅದನ್ನು ಕೊಡಲು ಬಯಸುತ್ತೇನೆ. ಹಾಡಿನ ಸನ್ನಿವೇಶ ಯಾವುದು ಅಂತ ಮೊದಲು ನೋಡುತ್ತೇನೆ, ಆಮೇಲೆ ಆ ಹಾಡು ಯಾವ ಶೈಲಿಯದ್ದು ಅಂತ ನೋಡುತ್ತೇನೆ, ಕ್ಲಾಸಿಕಲ್ಲೋ, ವೆಸ್ಟರ್ನೋ, ಫೋಕೋ, ಸೆಮಿ ಕ್ಲಾಸಿಕಲ್ಲೋ, ಸೆಮಿ ಫೋಕೋ ಅಂತ ನೋಡ್ತೇನೆ. ಅದೇ ರೀತಿ ಬಿ.ಜಿ.ಎಂ (ಬ್ಯಾಕ್ ಗ್ರೌಂಡ್ ಮ್ಯೂಸಿಕ್)ಗಳು ಯಾವ ಶೈಲಿಯಲ್ಲಿ ಇವೆ, ಯಾವ ಇನ್‌ಸ್ಟ್ರುಮೆಂಟ್ಸ್ ಬಳಸಿದ್ದಾರೆ ಅಂತಲೂ ನೋಡ್ತೇನೆ. ಇದೆಲ್ಲವನ್ನೂ ಮನಸ್ಸಿನಲ್ಲಿ ಇಟ್ಟುಕೊಂಡು ಒಂದು ಪ್ಲಾನ್ ಮಾಡಿ ನಿರ್ದೇಶಕರೊಂದಿಗೆ ಚರ್ಚಿಸಿ ಮೂವ್‌ಮೆಂಟ್ಸ್ ಕಂಪೋಸ್ ಮಾಡ್ತೇನೆ. ಜೊತೆಗೆ, ಕಾಸ್ಟ್ಯೂಮ್ ಹೇಗಿರಬೇಕು? ಯಾವ ಬ್ಯಾಕ್‌ಗ್ರೌಂಡ್ ಇರ್ಬೇಕು? ಅನ್ನೋದನ್ನು ಸೂಕ್ಷ್ಮವಾಗಿ ಯೋಚಿಸ್ತೇನೆ. ಮುಖ್ಯವಾಗಿ ಲಿರಿಕ್ಸ್‌ಗೆ ಒತ್ತು ಕೊಟ್ಟು, ಸಾಹಿತ್ಯದ ಭಾವವನ್ನು ಅರ್ಥಮಾಡಿಕೊಂಡು, ಆ ಭಾವಕ್ಕೆ ಧಕ್ಕೆ ಬರದ ಹಾಗೆ ಕಂಪೋಸ್ ಮಾಡ್ತೇನೆ.

** ನೃತ್ಯಕ್ಕೆ ಸಂಬಂಧಿಸಿದಂತೆ ನಿಮ್ಮದೇ ಇನ್‌ಸ್ಟಿಟ್ಯೂಟ್ ಇದೆ ಅಂತ ಕೇಳಿದ್ದೇನೆ. ಅಲ್ಲಿ ಏನೇನು ಕಲಿಸ್ತೀರಿ?*


ಒಟ್ಟು ಎರಡು ಇನ್‌ಸ್ಟಿಟ್ಯೂಟ್‌ಗಳಿವೆ ನನ್ನವು. ಸದಾಶಿವನಗರದಲ್ಲಿರುವ ಇನ್‌ಸ್ಟಿಟ್ಯೂಟ್ ಹೆಸರು 'ಸ್ಟೆಪ್ಪರ್' ಅಂತಲೂ, ಮಲ್ಲೇಶ್ವರಂನಲ್ಲಿರುವ ಇನ್‌ಸ್ಟಿಟ್ಯೂಟ್ ಹೆಸರು 'ಫಂಕಿ ಟೌನ್' ಅಂತಲೂ... ನನ್ನ ಈ ಎರಡು ಇನ್‌ಸ್ಟಿಟ್ಯೂಟ್‌ಗಳಲ್ಲಿ ಡಾನ್ಸ್ ಜೊತೆಗೆ, ಯೋಗ, ಏರೋಬಿಕ್ಸ್ ಕೂಡ ಕಲಿಸಲಾಗುತ್ತೆ, ಡಾನ್ಸ್ ಕಲಿಸಲು ನಾನು ಸೇರಿದಂತೆ ಅನೇಕ ನುರಿತ ಮಾಸ್ಟರ್‌ಗಳು ಇದ್ದಾರೆ. ಬೆಲ್ಲಿ ಡಾನ್ಸ್‌ಗೆ ಇರಾನ್ ಮೂಲದ ಸನಾಜ್ ಎನ್ನುವ ಒಬ್ಬರು ಮಾಸ್ಟರ್ ಇದ್ದಾರೆ. ಸಾಲ್ಸಾ ಹೇಳಿಕೊಡಲು ರಿಚರ್ಡ್ ಅಂತ ಒಬ್ಬರಿದ್ದಾರೆ. ಆತ ಯೂರೋಪಿಯನ್, ಆಸ್ಟ್ರೇಲಿಯನ್ ವರ್ಲ್ಡ್ ಚಾಂಪಿಯನ್. ಲಿಮ್ಕಾ ಬುಕ್‌ನಲ್ಲಿ ಒಟ್ಟು ಮೂರು ಬಾರಿ ತನ್ನ ಹೆಸರು ಬರೆಯುವ ಮೂಲಕ ತನ್ನ ದಾಖಲೆಯನ್ನು ತಾನೇ ಮುರಿದಿದ್ದಾರೆ. ಆತ ನಿರ್ಮಿಸಿದ ದಾಖಲೆ ಎಂದರೆ, 60 ಸೆಕೆಂಡಿಗೆ 128 ಸ್ಪಿನ್ನಿಂಗ್ ಮಾಡುವಂಥ ಕರಾಮತ್ತು. ಹಾಗೇನೆ, ಜುಂಬ ಡಾನ್ಸ್‌ಗೆ ಸನ್ನಿ ಸಿಂಗ್ ಎನ್ನುವ ಮುಂಬೈ ಮೂಲದ ಮಾಸ್ಟರ್ ಇದ್ದಾರೆ. ಈಕೆ ಎಂಟು ವರ್ಷಗಳ ಅನುಭವ ಇರುವ ಮಾಸ್ಟರ್. ಇನ್ನು ಮಲ್ಲಿಕಾ ಎನ್ನುವ ಮಾಸ್ಟರ್ ಪವರ್ ಯೋಗ, ಹಠ ಯೋಗ ಹೇಳಿಕೊಡುತ್ತಾರೆ. ಏರೋಬಿಕ್ಸ್ ಹೇಳಿಕೊಡಲು ಮುಕುಂದ ಅಂತ ಒಬ್ಬ ನುರಿತ ಮಾಸ್ಟರ್ ಇದ್ದಾರೆ. ಈ ವ್ಯಕ್ತಿ ಅಮೆರಿಕಾದ ಲಾಸ್ ಏಂಜಲೀಸ್‌ನಲ್ಲಿ ತರಬೇತಿ ಪಡೆದಿದ್ದು ಏರೋಬಿಕ್ಸ್‌ನಲ್ಲಿ 22 ವರ್ಷಗಳ ಅನುಭವ ಉಳ್ಳವರಾಗಿದ್ದಾರೆ. ಉಳಿದಂತೆ ದಿವ್ಯ ಎನ್ನುವ ಮಾಸ್ಟರ್ ಕಿಕ್ ಬಾಕ್ಸಿಂಗ್ ಹೇಳಿಕೊಡುತ್ತಾರೆ. ನನ್ನ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಿತ ಅನೇಕರು ಈಗಾಗಲೇ ಸಿನಿಮಾ ರಂಗದಲ್ಲಿ ಹೆಸರು ಮಾಡಿದ್ದಾರೆ. ಗಣೇಶ್, ಪ್ರೇಮ್, ಅಮೂಲ್ಯ ಛಾಯಾ ಸಿಂಗ್, ಪಂಕಜ್, ಯಶಸ್ ಅವರಲ್ಲಿ ಪ್ರಮುಖರು.

** ಪ್ರಭುದೇವ, ಲಾರೆನ್ಸ್, ಹರ್ಷ ಇವರೆಲ್ಲ ಮೊದಲಿಗೆ ಡಾನ್ಸ್ ಮಾಸ್ಟರ್‌ಗಳಾಗಿದ್ದು ನಂತರ ದಿನಗಳಲ್ಲಿ ನಿರ್ದೇಶಕರೂ ಆದರು. ನಿಮಗೂ ಏನಾದರೂ ಸಿನಿಮಾ ನಿರ್ದೇಶಕರಾಗುವ ಯೋಜನೆಗಳು ಇವೆಯೇ?*

ಖಂಡಿತ ಇದೆ. ಒಂದು ಡಾನ್ಸ್ ಕಂ ಲವ್ ಸಬ್ಜೆಕ್ಟ್ ಇಟ್ಕೊಂಡು ಸಿನಿಮಾ ಮಾಡಬೇಕು ಅನ್ನುವ ಕನಸು ಖಂಡಿತಾ ಇದೆ. ಉತ್ತಮ ಅವಕಾಶದ ನಿರೀಕ್ಷೆಯಲ್ಲಿದ್ದೇನೆ.



ಸಂದರ್ಶನ: ಹೃದಯಶಿವ



...10% ಮಾತ್ರ ಬ್ರಾಹ್ಮಣರ ಒಡೆತನದಲ್ಲಿ ಇದ್ದು ...0% ಭೂಮಿ ಬ್ರಾಹ್ಮಣೇತರ ಜಾತಿಗಳ ಕೈಯಲ್ಲಿ ...ಹೇಗೆ? ಕ್ಷತ್ರಿಯ ದ್ವೇಷಿಯಾಗಿದ್ದ ಪರಶುರಾಮನ ...ಲ್ಲಿಯೇ 60% ಪ್ರಜೆಗಳು ವಿವಿಧ ಕ್ಷತ್ರೀಯ ...ವರು ಆಗಿದ್ದು ಹೇಗೆ?

...ಹಾಸಕಾರರ ಪ್ರಕಾರ ಮೂಲತಃ ಕರ್ನಾಟಕದ ...ಯಲ್ಲಿ ಬ್ರಾಹ್ಮಣರು ಇರಲೇ ಇಲ್ಲ, ಅವರನ್ನು ...ರಾಜನು ಅಹಿಛತ್ರದಿಂದ (ಉತ್ತರ ಭಾರತದಿಂದ) ...ವರ್ಷಗಳ ಹಿಂದೆ ಕರೆ ತಂದಿದ್ದು, ಹಾಗಾದರೆ 5 ...ವರ್ಷಗಳ ಹಿಂದೆ ಪರಶುರಾಮನಿಂದ ಇಷ್ಟೆಲ್ಲ ...ದ ಭೂಮಿ ದಾನ ಪಡೆಯಲು ಬ್ರಾಹ್ಮಣರು ... ಇಲ್ಲವಲ್ಲ! ಇದರ ಅರ್ಥ ಪರಶುರಾಮ ...ಂದ ಕರಾವಳಿಯ ಭೂಮಿ ಮೇಲೆತ್ತಿ ಬ್ರಾಹ್ಮಣರಿಗೆ ...ಟ್ಟ ಕಥೆ ಕಾಲ್ಪನಿಕ ಎಂದು ಸಾಬೀತಾಯಿತು ...ವೈದಿಕರು ಹುಟ್ಟುಹಾಕಿದ ಕ್ಷತ್ರಿಯ ದ್ವೇಷಿ ...ಮನ ಕಾಲ್ಪನಿಕ ಕಥೆಯನ್ನು ಸ್ವತಃ ಸಂತ್ರಸ್ತ ಕ್ಷತ್ರಿಯ ...ವರೇ ಕುರುಡಾಗಿ ನಂಬುವುದು ಮಾನಸಿಕ ...ಗಿರಿ ಅಲ್ಲವೇ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

...ಸೂ. : ನಿಮ್ಮ ಅನಿಸಿಕೆಗಳನ್ನು ...sh70@rediffmail.com ಗೆ ...ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ...ಗಳನ್ನು 9980331427 ನಂಬರ್‌ಗೂ ...ಷ್ಟು ಚುಟುಕಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 02-04-2014 RNI No. KARKAN2005/1464

ಅಂಬಿ ಚೇತರಿಕೆ



ಅಂಬಿ ಸಿಂಗಾಪುರದ ಎಲಿಜಬೆತ್ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ತಗಂತಾ ಇರೋದು ನಿಮಗೆ ಗೊತ್ತಿರ್ತೈತೆ. ಅಲ್ಲಿ ಏನಾಗದೆ ಅಂದ್ರೆ, ಈ ಫ್ಯಾನ್ಸು 'ಅಂಬಿ ನೋಡ್ಬೇಕು... ಅಂಬಿ ನೋಡ್ಬೇಕು' ಅಂತ ಆಸ್ಪತ್ರೆ ಹತ್ರ ಹೋಗೋದು, ಬರೋದು ಹಿಂಗೆಲ್ಲಾ ಮಾಡ್ತಾವ್ರೆ. ಇದರಿಂದ ಅಂಬಿ ರೆಸ್ಟ್ ತಗಳಕ್ಕೆ ಬುಡ್ತಾ ಇಲ್ಲ, ಅದಕ್ಕೆ ಏನ್ ಮಾಡೋದು ಅಂತ ಅಂಬಿ ಫ್ಯಾಮಿಲಿ ಮತ್ತು ಫ್ರೆಂಡ್ಸು ಕೂತ್ಕೊಂಡು ಡಿಸ್ಕಸ್ ಮಾಡವ್ರೆ. ಆ ಡಿಸ್ಕಸನ್ ಪ್ರಕಾರ ಅಂಬಿನ ಭಾರತದ ಆಕ್ಕಪಕ್ಕದ ಯಾವ್ದಾದ್ರು ಒಳ್ಳೇ ಆಸ್ಪತ್ರೆಗೆ ಶಿಫ್ಟ್ ಮಾಡಿಬಿಡೋದು. ಈ ಶಿಫ್ಟ್ ಮಾಡೋ ಆಸ್ಪತ್ರೆ ಯಾವ್ದು ಅನ್ನೋ ಸೀಕ್ರೆಟ್ ಅಂಬಿ ಫ್ಯಾಮಿಲಿ ಮೆಂಬರ್ಸ್ ಅಂಡ್ ದೋಸ್ತ್‌ಗಳಿಗೆ ಮಾತ್ರ ಗೊತ್ತಿರ್ತೈತೆ. ಆಗ ಯಾರೂ ಬಂದು ಅಂಬಿಗೆ ಡಿಸ್ಟರ್ಬ್ ಮಾಡಲ್ಲ, ಇಷ್ಟಕ್ಕೂ ಈಗ ಅಂಬಿ ಹೆಲ್ತ್ ಸುಧಾರಿಸ್ಯೆತೆ ಅನ್ನೋದೇ ಖುಷಿ ವಿಚಾರ. ಅಂಬಿ ಈಗ ಎದ್ದು ಓಡಾಡ್ತಾರೆ, ಮಾತಾಡ್ತಾರೆ, ನೋಡೋಕೆ ಬಂದೋರ ಹಾರೈಕೆಯ ಮಾತುಗಳನ್ನ ಸ್ವೀಕರಿಸ್ತಾರೆ. ಅಂದಂಗೆ, ಅಂಬಿ ಒಂದು ವಿಡಿಯೋ ಮೂಲಕ ತಾವು ಚೆನ್ನಾಗಿರುವುದಾಗಿಯೂ, ತಮ್ಮ ಆರೋಗ್ಯ ಸುಧಾರಿಸಿರುವುದಾಗಿಯೂ, ವಾರದೊಳಗೆ ವಾಪಸ್ ಬರುವುದಾಗಿಯೂ ತಮ್ಮ ಕನ್ನಡಿಗ ಫ್ಯಾನ್ಸ್‌ಗಳಿಗೆ ಸಂದೇಶ ಕಳಿಸವ್ರೆ. ಅವರು ಇನ್ನಾದ್ರೂ ಕುಡ್ತಾ, ಸಿಗರೇಟು ಬಿಟ್ಟು ಬಿಡ್ಲಿ ಆಲ್ವಾ?

ಪ್ರೇಮ್ ಮಡದಿಗೆ ತಾವರೆ ಒಲವು




ತೆಗಳಪ್ಪಾ... ಈ ಕ್ಯಾಮೆ ಇಲ್ದಿರೋ ಮಾಜಿ ನಟಿಯರದೆಲ್ಲಾ ಒಂದೇ ಕಥೆ ಆಯ್ತಲ್ಲಾ... ಅತ್ಲಾಗೆ ಪೂಜಾ ಗಾಂಧೀ ಅನ್ನೋ ಫ್ಲೈಯಿಂಗ್ ಬಟರ್‌ಫ್ಲೈ ಒಂದು ಪಾರ್ಟಿಯಿಂದ ಇನ್ನೊಂದು ಪಾರ್ಟಿಗೆ ಹಾರಿ ಹಾರಿ ಎಲ್ಲೂ ಏಗಕಾಗದೆ ಹಂಗೇ ಉಳಿಕಂತು. ತಾನು ಯಾವ ಪಾರ್ಟಿಲಿದ್ರೂ ತನ್ನಿಂದ ಪಾರ್ಟಿಗೆ ಮೂರುಕಾಸಿನ ಉಪಯೋಗ ಇಲ್ಲ ಅಂತ ಸಾಬೀತು ಮಾಡ್ತು. ಇತ್ಲಾಗೆ ಶ್ರುತಿ, ದೇವೇಗೌಡರನ್ನೇ ಎದುರಿಸಿ ಗೆಲ್ತೀನಿ ಅಂತ ತಾವರೆ ಹುವ್ವ ಕೈಲಿ ಹಿಡ್ಕಂಡು ಓಡಾಡ್ತಾ ಐತೆ. ಇನ್ನ ರಮ್ಯ ಮೇಡಂ ಹಾಲಿ ಎಂಪಿ. ವಿಷಯ ಹಿಂಗಿರುವಾಗ ಈ ರಕ್ಷಿತಾ ಅನ್ನೋ ಪ್ರೇಮ್ ಮಡದಿ ಹೊಸ ವರಸೆ ತೆಗೆದ್ರೈತೆ. ಆ ವರಸೆ ಏನಪಾ ಅಂದ್ರೆ, ಯಾವಾಗ ದೇವೇಗೌಡ್ರು ಕ್ಯಾಂಪು ಬರೋ ಲೋಕಸಭಾ ಚುನಾವಣೆಗೆ ಮಂಡ್ಯದಿಂದ ತಮಗೆ ಟಿಕೆಟ್ ಕೊಡಲ್ಲ ಅಂತೋ ರಕ್ಷಿತಾ ತನ್ನ ತಲೆ ಮ್ಯಾಲಿದ್ದ ಭತ್ತದ ಹೊರೇನ ಮೆಲ್ಲಗೆ ಕೆಳಗಿಟ್ಟು ತಾವರೆ ಹೂವಿನ ಕಡೆ ನೋಡೋ ಸ್ಕೆಚ್ ಹಾಕ್ಯೆತೆ. ತಾವರೆ ಹೂವಿನ ಪಾರ್ಟಿಯವರು ಟಿಕೆಟ್ ಕೊಟ್ರೆ ಮಂಡ್ಯದಲ್ಲಿ ನಿಂತು ರಮ್ಯ ಮೇಡಂಗೆ ಸೆಡ್ಡು ಹೊಡೆದು ಬುಡುವಾ, ಹಂಗೇನೆ ಹೊರೆ ಪಾರ್ಟಿಯವ್ರಿಗೂ ತಾನು ಏನು ಅಂತ ತೋರಿಸಿ ಬುಡುವಾ ಅಂತ ತೀರ್ಮಾನ ತಗಂಡ್ಯೆತೆ ಅಂತ ಒಂದು ಸುದ್ದಿ ಕಣ್ರಪಾ...

ಹಂಗೇನಾರಾ ಆದ್ರೆ ಒಂದಾನೊಂದು ಕಾಲದಲ್ಲಿ ತಂತಮ್ಮ ಸಿನಿಮಾಗಳ ಮೂಲಕ ಫೈಟ್ ಮಾಡ್ತಿದ್ದ ರಮ್ಯ-ರಕ್ಷಿತಾ ಜೋಡಿ ರಾಜಕೀಯದಲ್ಲಿ ಎದುರಾ ಬದುರಾ ನಿಂತು ಫೈಟ್ ಮಾಡ್ಬೇಕಾಗ್ತೈತೆ.

ಮತ್ತೊಂದು ಕೋಟೆ ಕಥೆ

ಮಾರ್ಚ್ ಕೊನೇ ವಾರ ಶೂಟಿಂಗ್ ಶುರು ಮಾಡಿಕೊಳ್ಳಲಿರುವ ಚಿತ್ರವೊಂದರ ಹೆಸರು 'ಕೋಟೆ ಲವ್ ಸ್ಟೋರಿ' ಅಂತ. ಈವರೆಗೂ ಸಾಫ್ಟ್‌ವೇರ್ ಉದ್ಯಮದಲ್ಲಿ ಗುರ್ತಿಸಿಕೊಂಡಿರುವ ಮೂಲತಃ ಕೊಬ್ಬರಿ ವ್ಯಾಪಾರಿಯಾಗಿರುವ ತಿಪಟೂರಿನ ಸೋಮಶೇಖರ್ 'ಕೋಟೆ ಲವ್ ಸ್ಟೋರಿ'ಗೆ ಹಣ ಹಾಕಿದರೆ, ಚಿತ್ರದುರ್ಗ ಮೂಲದ ರಿಪಿ ವಿನೂತನ್ ಎನ್ನುವವರು ಈ ಚಿತ್ರದ ನಿರ್ದೇಶಕರು. ಈ ರಿಪಿ ವಿನೂತನ್ ಈ ಮುಂಚೆ ಅರವಿಂದ್ ಕೌಶಿಕ್, ಜಯತೀರ್ಥ, ಕೇಸರಿ ಹರವು ಅವರ ಬಳಿ ಕೋ-ಡೈರೆಕ್ಟರಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. 'ಕೋಟೆ ಲವ್ ಸ್ಟೋರಿ'ಯ ಶೇ.40 ರಷ್ಟು ಭಾಗ ಚಿತ್ರದುರ್ಗದ ಕೋಟೆಯಲ್ಲಿ ಚಿತ್ರೀಕರಣಗೊಳ್ಳಲಿದ್ದು ಉಳಿದ ಶೇ.60 ರಷ್ಟು ಭಾಗ ಚಿತ್ರದುರ್ಗದ ಸುತ್ತ ಮುತ್ತ ಚಿತ್ರೀಕರಣಗೊಳ್ಳಲಿದೆ. ಶ್ರೀನಗರ ಕಿಟ್ಟಿಯ ಜೊತೆ 'ಪಾರು ವರ್ಸಸ್ ದೇವದಾಸ್' ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿರುವ ನೇಹಾ ಪಾಟೀಲ್ ಎಂಬಾಕೆ ನಟಿಸಲಿದ್ದಾಳೆ. ಈ ನೇಹಾ ಈ ಮೊದಲು ತೆಲುಗಿನ 'ನಾತೋ ವಸ್ತಾವಾ'ದಲ್ಲಿಯೂ ನಟಿಸಿದ್ದರು. 'ಕೋಟೆ ಲವ್ ಸ್ಟೋರಿ'ಯ ಮತ್ತೊಂದು ವಿಶೇಷತೆಯೆಂದರೆ ಶಂಕರ್ ಅಶ್ವಥ್ ಈ ಚಿತ್ರದಲ್ಲಿ ಚಾಮಯ್ಯ ಮಾಸ್ಟರ್ ರೋಲ್ ಮಾಡುತ್ತಿರುವುದು. ಈ ಚಾಮಯ್ಯ ಮಾಸ್ಟರ್ ರೋಲ್ ಅನ್ನು ಇದೇ ಶಂಕರ್ ಅಶ್ವಥ್ ಅವರ ತಂದೆ ಅಶ್ವಥ್ ಅವರು 'ನಾಗರಹಾವು' ಚಿತ್ರದಲ್ಲಿ ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.





ನಾಯರ್ ಮತ್ತೆ ಹಾಜರ್



'ಐತಲಕಡಿ... ಐತಲಕಡಿ...' ಅಂತ ದರ್ಶನ್ ಜೊತೆ ಹಿಗ್ಗಾಮಗ್ಗಾ ಕುಣ್ದು ಹಾಕಿದ್ದ ಕೇರಳ ಕುಟ್ಟಿ ನವ್ಯ ನಾಯರ್ ಗೊತ್ತಲ್ವಾ ನಿಮಗೆ? ಆದೇರೀ ವಿಷ್ಣುವರ್ಧನ್ ಜೊತೆ 'ನಮ್ಮ ಜಮಾನ್ರು', ಶಿವಣ್ಣನ ಜೊತೆ 'ಭಾಗ್ಯದ ಬಳೆಗಾರ' ಸಿನಿಮಾಗಳಲ್ಲಿ ಪಾರ್ಟ್ ಮಾಡಿತ್ತಲ್ಲಾ ಅದೇ ನವ್ಯ ನಾಯರ್. ಆ ಹುಡುಗಿ ಲಾಂಗ್ ಗ್ಯಾಪ್ ತಗಂಡು ತಿರ್ಗಾ ಕನ್ನಡ ಸಿನಿಮಾದಲ್ಲಿ ಪಾರ್ಟ್ ಮಾಡ್ತೈತೆ. ಅದೂ ರವಿಚಂದ್ರನ್ ಜೊತೆ. ಪಿ.ವಾಸು ಡೈರೆಕ್ಷ್ನು. ಅಂದಂಗೆ ಈ ಸಿನಿಮಾ ಮಲಯಾಳಂನಲ್ಲಿ ಸೂಪರ್ ಹಿಟ್ ಆಗಿದ್ದ ಮೋಹನ್ ಲಾಲ್ ಅಭಿನಯದ 'ದೃಶ್ಯಂ' ಚಿತ್ರದ ರೀಮೇಕು. ಇಷ್ಟಕ್ಕೂ ಒಳ್ಳೊಳ್ಳೆ ಸೂಪರ್ ಹಿಟ್ ಸಿನಿಮಾಗಳಲ್ಲಿ ಆಕ್ಟ್ ಮಾಡಿ ಸೈ ಅನ್ನಿಸಿಕೊಂಡಿದ್ದ ಈ ನವ್ಯ ನಾಯರ್ ನಾಲ್ಕು ವರ್ಷದ ಹಿಂದೆ ಬಾಂಬೆಯ ... ಯಾಪಾರಸ್ಥ ಒಬ್ಬನ್ನ ಗುರುವಾಯೂರು ಟೆಂಪಲ್ ಮುಂದೆ ಮದುವೆ ಆ... ಸಂಸಾರಸ್ಥೆ ಆಗಿತ್ತು, ಯಾವಾಗ ಈ ನಾಯರು ಮದುವೆ ಮಾಡ್ಕೊಂಡ... ಇನ್ ಮುಂದೆ ಪಿಚ್ಚರ್ ಮಾಡಲ್ಲ ಅಂತ ಎಲ್ಲಾ ತಿಳ್ಕೊಂಡಿದ್ರು. ಈಗ ... ನಾಯರು ಮತ್ತೆ ಬಣ್ಣ ಹಚ್ತಿರೋದು ಒಳ್ಳೇದೆ ಬುಡಿ. ನಾಯರಿಗೆ ಜಯವಾಗ...

ನಿರ್ಮಾಪಕ ಸನತ್ ಕುಮಾರ್ ನಿಧ...



ಜಗ್ಗೇಶ್ ಅಭಿನಯದ 'ಎದ್ದೇಳು ಮಂಜುನಾಥ' ಮೂಲಕ ಚಿತ್ರನಿರ್ಮಾಣಕ್ಕೂ ಕೈ ಹಾಕಿದ್ದ ಸನತ್ ಕುಮಾರ್ ತೀರಿಕೊಂಡಿದ್ದಾರೆ. ಇಷ್ಟಕ್ಕೂ ಈ ಸನತ್ ಕುಮಾರ್ ಹಲವಾರು ಬಗೆಯಲ್ಲಿ ತಮ್ಮ ಕ್ರಿಯಾಶೀಲತೆ ಮೆರೆದಂಥವರು. ದಶಕಗಳ ಹಿಂದೆ ಬಹಳಷ್ಟು ಪ್ರಸಿದ್ಧಿ ಪಡೆದಿದ್ದ ಕ್ರಿಕೆಟ್ ಕುರಿತಾದ 'ರಾಜು ಪತ್ರಿಕೆ' ಯ ಸಂಪಾದಕತ್ವ ವಹಿಸಿಕೊಂಡು ಪತ್ರಿಕೆಯನ್ನು ತೀರಾ ಎತ್ತರಕ್ಕೆ ಕೊಂಡೊಯ್ದಿದ್ದರು. ಸಾಹಿತಿ- ಪತ್ರಕರ್ತ ವೈಕುಂಠರಾಜು ಅವರ ಪುತ್ರರಾದ ಇವರು ಅನೇಕ ಡಾಕ್ಯುಮೆಂಟರಿಗಳನ್ನು ನಿರ್ಮಾಣ ಮಾಡಿದ್ದರು. ಸದಾ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಕೊಂಡು ಲವಲವಿಕೆಯಿಂದಿರುತ್ತಿದ್ದ ಈ ಸನತ್ ಕುಮಾರ್ ಎರಡು ವರ್ಷಗಳ ಹಿಂದೆ ಡಯಾಬಿಟೀಸ್‌ಗೆ ಒಂದು ಕಾಲನ್ನು ಕಳೆದುಕೊಂಡಿದ್ದರು. ಆದರೂ ಅದರಿಂದ ಆದಷ್ಟು ಬೇಗನೆ ಚೇತರಿಸಿಕೊಂಡು ಮತ್ತೆ ತಮ್ಮ ಎಂದಿನ ಕೆಲಸಗಳಲ್ಲಿ ಬ್ಯುಸಿಯಾಗಿದ್ದರು. ಇತ್ತೀಚೆಗಷ್ಟೇ ಲಿವರ್ ಸಮಸ್ಯೆಯಿಂದ ಬಳಲುತ್ತಿದ್ದ ಇವರು ಮಲ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಈಗ ತೀರಿಕೊಂಡಿದ್ದಾರೆ. ರಾಷ್ಟ್ರಪ್ರಶಸ್ತಿಯನ್ನೂ ಪಡೆದಿದ್ದ ಇವರ ನಿಧನ ಪತ್ರಿಕಾಲೋಕಕ್ಕೆ ನಷ್ಟವಲ್ಲದೆ ಮತ್ತೇನು?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com